₹ 6 @vishwavaninews epaper.vishwavani.news vishwavani.news ಬೆಂಗಳೂರು | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | ಕಲಬುರಗಿ | ಬೆಳಗಾವಿ ಮಂಗಳವಾರ 12.08.2025 ಸಂಪುಟ: 10 ಸಂಚಿಕೆ: 210 ಪುಟಗಳು: 14 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ

ವಿಶ್ವಾಸವೇ ವಿಶ್ವ

ಸುವರ್ಣ ರಥೋತ್ಸವ

ಶ್ರೀ ಗುರು ರಾಘವೇಂದ್ರ ಸ್ವಾಮಿಗಳ 354ನೇ ಆರಾಧನಾ ಮಹೋತ್ಸವ ಪ್ರಯುಕ್ತ ಮಂತ್ರಾಲಯದಲ್ಲಿ ಸೋಮವಾರ ಗುರುರಾಯರ ಮಧ್ಯಾರಾಧನೆ ವಿಜೃಂಭಣೆಯಿಂದ ನಡೆಯಿತು. ಆಂಧ್ರಪ್ರದೇಶ, ತೆಲಂಗಾಣ, ತಮಿಳುನಾಡು ಹಾಗೂ ಕರ್ನಾಟಕದಿಂದ ಆಗಮಿಸಿದ ಸಾವಿರಾರು ಭಕ್ತರು ರಥೋತ್ಸವದಲ್ಲಿ ಪಾಲ್ಗೊಂಡು ಸಂಭ್ರಮಿಸಿದರು.

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪಮುಖ್ಯಮಂತ್ರಿಗಳು

ಅಂತರಾಷ್ಟ್ರೀಯ
ಯುವ ದಿನಾಚರಣೆ-2025
ದಿನಾಂಕ : 12.08.2025 ರಿಂದ 12.10.2025 ರವರೆಗೆ
ಘೋಷ ವಾಕ್ಯ :
ಸುಸ್ಥಿರ ಅಭಿವೃದ್ಧಿಗಾಗಿ ಸ್ಥಳೀಯ ಯುವಜನರ ಪಾತ್ರ ಮತ್ತು ಗುರಿಗಳು

NACO National AIDS Control Organisation
KSAPS Karnataka State AIDS Prevention Society
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್ಷನ್ ಸೊಸೈಟಿ
ಹೆಚ್.ಐ.ವಿ. ತಡೆಗಟ್ಟಲು ತೀವ್ರಗೊಳಿಸಿದ ಐ.ಇ.ಸಿ ಪ್ರಚಾರಾಂದೋಲನ-2025

ಮಾನ್ಯ ಆರೋಗ್ಯ ಸಚಿವರಾದ ಶ್ರೀ ದಿನೇಶ್ ಗುಂಡೂರಾವ್ ಅವರು ಹೆಚ್.ಐ.ವಿ ಪ್ರಚಾರಾಂದೋಲನದಲ್ಲಿ ಭಾಗವಹಿಸಿರುವುದು

"ದೇಶದ ಕಾಡು, ವನ್ಯಜೀವಿ, ನದಿಗಳು ಸೇರಿ ಪರಿಸರ ಉಳಿಸುವುದು" - ಪ್ರತಿಯೊಬ್ಬ ಭಾರತೀಯನ ಸಂವಿಧಾನ ಬದ್ಧ ಮೂಲಭೂತ ಕರ್ತವ್ಯ. ಮಾಹಿತಿ ಮತ್ತು ಸಲಹೆಗಾಗಿ ಉಚಿತ ರಾಷ್ಟ್ರೀಯ ಸಹಾಯವಾಣಿ 1097 ಕ್ಕೆ ಕರೆ ಮಾಡಿ | Download the NACO AIDS app | Google Play | https://kspc.karnataka.gov.in | KarSAPS

ದಿನಕ್ಕೊಂದು ಗುಂಡಿ ತೋಡಿ ತೆಂಗಿನ ತೋಪು ಮಾಡುವುದು ಎಸ್ಐಟಿ ಉದ್ದೇಶವೇ? | ಬುರುಡೆ ಬಗ್ಗೆ ಬುರುಡೆ ಬಿಟ್ಟ ಮುಸುಕುಧಾರಿ ಅನಾಮಿಕ ವ್ಯಕ್ತಿಯ ವಿಶ್ವಾಸಾರ್ಹತೆ ಏನು? | ಧರ್ಮಸ್ಥಳದ ಸುತ್ತಮುತ್ತ ಸರಣಿ ಕೊಲೆ ನಡೆದಿವೆ ಎನ್ನಲಾದ ಪ್ರಕರಣಕ್ಕೆ ಬೇಕಿದೆ ಬ್ರೇಕ್

ದಿಕ್ಕಿಲ್ಲದೇ ಸಾಗುತ್ತಿರುವ ತನಿಖೆಗೆ ಬೇಕಿದೆ ಲಗಾಮು

ರಂಜಿತ್ ಎಚ್. ಅಶ್ವತ್ಥ ಬೆಂಗಳೂರು

ದಿಕ್ಕಿಲ್ಲದ ವ್ಯಕ್ತಿಯೊಬ್ಬನ ಹೇಳಿಕೆಯಿಂದ ಶುರುವಾದ ಗುಂಡಿ ಅಗೆಯುವ ಕಾರ್ಯ ಇದೀಗ ಬಾಹುಬಲಿ ಬೆಟ್ಟದ ಬಳಿ ಬಂದು ನಿಂತಿದೆ. ಸಾವಿರಾರು ಹೆಣಗಳನ್ನು ಹೂತಿದ್ದೇನೆ ಎಂದು 'ಬುರುಡೆ' ಬಿಟ್ಟಿದ್ದ ವ್ಯಕ್ತಿ ಗುರುತಿಸಿದ್ದ ಸ್ಥಳದಲ್ಲಿ ಸಿಕ್ಕಿದ್ದು ಬರೀ ಮಣ್ಣಾದರೂ, ಎಸ್ಐಟಿ ಮಾತ್ರ ತನ್ನ ಅಗೆಯುವ ಕಾರ್ಯದಿಂದ ಹಿಂದೆ ಸರಿದಿಲ್ಲ. ನಿತ್ಯ ಲಕ್ಷಾಂತರ ರುಪಾಯಿ ಖರ್ಚು ಮಾಡಿ ಅರ್ಥವಿಲ್ಲದ ತನಿಖೆಯನ್ನು ಕೂಡಲೇ ಸ್ಥಗಿತಗೊಳಿಸದಿದ್ದರೆ ವಿಶೇಷ ತನಿಖಾ ತಂಡದ 'ಅಣಕ'ವಾಗುವುದರಲ್ಲಿ ಅನುಮಾನವಿಲ್ಲ.

ರಾಜ್ಯದಲ್ಲಿ ಕಳೆದೊಂದು ತಿಂಗಳಿನಿಂದ ಸದ್ದು ಮಾಡುತ್ತಿರುವ 'ಮುಸುಕುಧಾರಿ ವ್ಯಕ್ತಿ'ಯ ಬುರುಡೆ ರಹಸ್ಯ ಆರಂಭದಲ್ಲಿ ರೋಚಕವಾಗಿ ಕಂಡರೂ, 'ಗುಂಡಿ' ತೋಡುವ ಕಾರ್ಯಾರಂಭಗೊಂಡು ನಿತ್ಯ 'ಖಾಲಿ' ಕೈಯಲ್ಲಿ ವಾಪಸಾಗಿದ್ದರಿಂದ ಎಸ್ಐಟಿಯ ತನಿಖೆಗೇ ಅರ್ಥವಿಲ್ಲದಂತಾಗಿದೆ. ಇಷ್ಟಾದರೂ, ಆತ ತೋರಿಸಿದ ಕಡೆಯಲ್ಲ ಗುಂಡಿ ಅಗೆಯಲು ಹೋಗುತ್ತಿರುವುದು ತಂಡಕ್ಕಿರುವ ಗಾಂಭೀರ್ಯತೆಯನ್ನು ಕಡಿಮೆಗೊಳಿಸುತ್ತಿದೆ ಎನ್ನುವುದು ಸ್ಪಷ್ಟ.

ಕೆಲ ತಿಂಗಳ ಹಿಂದೆ ಏಕಾಏಕಿ ಮುನ್ನೆಲೆಗೆ ಬಂದ ಈ ಮುಸುಕುಧಾರಿ ಧರ್ಮಸ್ಥಳದಲ್ಲಿ ನೂರಾರು ಶವಗಳನ್ನು ಹೂತಿಟ್ಟಿದ್ದೇನೆ ಎಂದು ನ್ಯಾಯಾಲಯದ ಮುಂದೆ ಹೇಳಿಕೆ ನೀಡುತ್ತಿದ್ದಂತೆ ರಾಜ್ಯವಷ್ಟೇ ಅಲ್ಲ, ರಾಷ್ಟ್ರೀಯ, ಅಂತಾರಾಷ್ಟ್ರೀಯ ಮಟ್ಟದಲ್ಲೂ ಈ ಸುದ್ದಿ ಸದ್ದಾಗಿತ್ತು. ಈತನ 'ಸಾಕ್ಷ್ಯ'ವಿಲ್ಲದ ಹೇಳಿಕೆಯನ್ನೇ ನಂಬಿಕೊಂಡ ಕೆಲವೊಂದಷ್ಟು ಜನರು ಈತನ ಹೇಳಿಕೆಗೆ ಸೌಜನ್ಯಾ ಪ್ರಕರಣವನ್ನು ಸೇರಿಸಿಕೊಂಡು 'ರೀಲ್ಸ್'ಗಳನ್ನು ಮಾಡಲು ಶುರು ಮಾಡಿದ್ದರು. ಆದರೆ ನ್ಯಾಯಾಧೀಶರ ಮುಂದೆ ಹೇಳಿಕೆ ದಾಖಲಿಸಿದ್ದರಿಂದ, ರಾಜ್ಯ ಸರಕಾರ 'ನಿಷ್ಪಕ್ಷಪಾತ' ತನಿಖೆಯ ಉದ್ದೇಶದಿಂದ ವಿಶೇಷ ತನಿಖಾ ತಂಡವನ್ನು ರಚಿಸಿತ್ತು. ಆರಂಭದಲ್ಲಿ ಎಸ್ಐಟಿ ರಚನೆ ಮಾಡಿದ ಸರಕಾರದ ತೀರ್ಮಾನವನ್ನು ಯಾರೊಬ್ಬರೂ ವಿರೋಧಿಸಲಿಲ್ಲ. ಆದರೆ ತನಿಖಾ ತಂಡದ ಕಾರ್ಯನಿರ್ವಹಣೆ, ತನಿಖೆ ನಡೆಸುತ್ತಿರುವ ರೀತಿ ಗಮನಿಸಿ, 'ತಟಸ್ಥ'ರಾಗಿದ್ದವರೂ ಇದೀಗ ಎಸ್ಐಟಿ ತನಿಖೆಯ ದಿಕ್ಕನ್ನು ಪ್ರಶ್ನಿಸುತ್ತಿದ್ದಾರೆ.

15 ಗುಂಡಿಯಲ್ಲಿ ಸಿಗದ ಬುರುಡೆ: ಪ್ರಣಬ್ ಮೊಹಂತಿ ನೇತೃತ್ವದಲ್ಲಿ ರಚನೆಯಾದ ಎಸ್ಐಟಿ ಧರ್ಮಸ್ಥಳಕ್ಕೆ ತೆರಳಿ ಅನಾಮಿಕ ವ್ಯಕ್ತಿ ಹೂತಿಟ್ಟಿದ್ದ ಸ್ಥಳಗಳನ್ನು ಗುರುತಿಸಿ, ನಿತ್ಯ ಒಂದೊಂದು ಸ್ಥಳದ 'ಉತ್ಖನನ' ನಡೆಸಿದೆ. ಈವರೆಗೆ 15 ಸ್ಥಳದಲ್ಲಿ ಗುಂಡಿ ತೋಡಿದರೂ ಸಿಕ್ಕಿದ್ದು ಮಾತ್ರ ಬರೀ 'ಮಣ್ಣು'. ಒಂದು ಕಡೆ ಮೂಳೆ ಸಿಕ್ಕರೂ ಪ್ರಾಥಮಿಕ ತನಿಖೆಯಲ್ಲಿಯೇ ಈ ಮೂಳೆಗೂ, ಅನಾಮಧೇಯ ಹೂತಿಟ್ಟಿರುವ ಹೆಣಗಳ ಪ್ರಕರ ಣಕ್ಕೂ ಸಂಬಂಧವಿಲ್ಲ ಎನ್ನುವುದು ಸ್ಪಷ್ಟವಾಯಿತು. ಉತ್ಖನನ ಪ್ರಕ್ರಿಯೆ ಆರಂಭಗೊಂಡ ಮೂರೇ ದಿನಕ್ಕೆ ಅನಾಮಧೇಯ ವ್ಯಕ್ತಿಯ ಬುರುಡೆ ಆರೋಪದಲ್ಲಿ ಹುರುಳಿಲ್ಲ ಎನ್ನುವುದು ಖಚಿತ ವಾಗಿದೆ. ಆದರೂ ಎಸ್ಐಟಿ ಅಧಿಕಾರಿಗಳು ಆತ ತೋರಿದ ಎಲ್ಲ ಸ್ಥಳಗಳಲ್ಲೂ ಉತ್ಖನನ ಮಾಡುತ್ತಿರುವುದು ಏಕೆ? 15 ಸ್ಥಳಗಳಲ್ಲಿ ಏನೂ ಸಿಗಲಿಲ್ಲವೆಂದ ಮೇಲೆ, ಆತನ ಪೂರ್ವಾಪರದ ಬಗ್ಗೆ ಕನಿಷ್ಠ ವಿಚಾರಣೆ ಮಾಡಬೇಕೆಂದು ಎಸ್ಐಟಿ ಅಧಿಕಾರಿಗಳಿಗೆ ಅನಿಸಲೇ ಇಲ್ಲವೇ? ಎನ್ನುವುದು ಈಗಿರುವ ಪ್ರಶ್ನೆಯಾಗಿದೆ.

ಅನಾಮಧೇಯ ವ್ಯಕ್ತಿ ತೋರಿಸಿರುವ ಜಾಗವೆಲ್ಲ ಖಾಲಿಯಾಗಿದ್ದರೂ, ಇದೀಗ ಅಲ್ಲೊಂದು ಇಲ್ಲೊಂದು ಎಂದು ಜಾಗ ಗುರುತಿಸುವ ಕಾರ್ಯ ಮುಂದುವರಿದೇ ಇದೆ. ಸೋಮವಾರ ಬಾಹುಬಲಿ ಬೆಟ್ಟದ ಸುತ್ತಮುತ್ತಲೂ 'ಬುರುಡೆ' ಹುಡುಕಾಟ ಮುಂದುವರಿದಿರುವುದು ನಿಜಕ್ಕೂ ಹಾಸ್ಯಾಸ್ಪದ. ಎಸ್ಐಟಿಯ ಈ ತನಿಖಾ ಪ್ರಕ್ರಿಯೆಯನ್ನು ಬದಲಾಯಿಸಿಕೊಳ್ಳದಿದ್ದರೆ, ಮುಂದಿನ ಆರು ತಿಂಗಳಲ್ಲಿ ಧರ್ಮಸ್ಥಳದ ಸುತ್ತಮುತ್ತ ಸೃಷ್ಟಿಯಾಗಿರುವ ಗುಂಡಿಗಳಲ್ಲಿ 'ತೆಂಗಿನ ತೋಪು' ಮಾಡಬೇಕಾಗುತ್ತದೆ. ಆದ್ದರಿಂದ ದಿಕ್ಕುದೆಸೆಯಿಲ್ಲದಂತೆ ನಡೆಯುತ್ತಿರುವ ಈ ತನಿಖೆಯ ವಿಷಯದಲ್ಲಿ ರಾಜ್ಯ ಸರಕಾರ ಕೂಡಲೇ ಮಧ್ಯಪ್ರವೇಶಿಸಿ ಸ್ಥಗಿತಗೊಳಿಸಬೇಕು ಎನ್ನುವುದು ಹಲವರ ಆಗ್ರಹವಾಗಿದೆ.

ಕೇವಲ ಬಾಯಿ ಮಾತಿನ ಆರೋಪಕ್ಕೆ ತಿಂಗಳುಗಟ್ಟಲೇ ಇಡೀ ವ್ಯವಸ್ಥೆಯೇ ಗುಂಡಿ ತೋಡುವ ಕಾರ್ಯದಲ್ಲಿ ಮುಳುಗಿದೆ. ಈಗಾಗಲೇ ಇನ್ನೊಬ್ಬ ವ್ಯಕ್ತಿ ಇದೇ ರೀತಿಯ ಆರೋಪವನ್ನು ಮಾಡಿ ನಾನೂ ಮೂರು ಗುಂಡಿ ತೋಡಿಸುವುದಾಗಿ ಹೇಳಿದ್ದಾನೆ. ಹೀಗಿರುವಾಗ 'ಆರೋಪ'ಕ್ಕೆ ಸರಿಯಾದ ಮಾಹಿತಿ ಕೇಳದೇ, ಈ ರೀತಿ ಎಸ್ಐಟಿ ರಚಿಸುತ್ತಾ ಹೋದರೆ, ಮುಂದೊಂದು ದಿನ ವಿಧಾನ ಸೌಧದ ಬಳಿಕ ಶವ ಹೂತಿದ್ದೆ ಎಂದರೆ ಅಥವಾ ಸಚಿವರೊಬ್ಬರು 10 ಹೆಣಗಳನ್ನು ಹೂತಿಟ್ಟಿದ್ದಾರೆಂದು ಬಂದು ಹೇಳಿಕೆ ನೀಡಿದ ಮಾತ್ರಕ್ಕೆ ವಿಶೇಷ ತನಿಖಾ ತಂಡ ರಚಿಸಿ ಗುದ್ದಲಿ, ಹಾರೆ ಹಿಡಿದು ಗುಂಡಿ ಅಗೆಯಲು ಸಾಧ್ಯವೇ?

ಬುರುಡೆ ರಹಸ್ಯ



ಗೌಪ್ಯತೆ ಕಾಪಾಡಿದ್ದು ತಪ್ಪು

ನೂರಾರು ಶವಗಳನ್ನು ಹೂತಿದ್ದೇನೆ ಎಂದು ನ್ಯಾಯಾಧೀಶರ ಮುಂದೆ ಹೇಳಿಕೆ ನೀಡಿದ ವ್ಯಕ್ತಿಯ ಗೌಪ್ಯತೆಯನ್ನು ಆರಂಭದಲ್ಲಿ ಸುರಕ್ಷತೆಯ ದೃಷ್ಟಿಯಿಂದ ಕಾಪಾಡಲಾಗಿತ್ತು. ಆದರೆ ನಿಜಕ್ಕೂ ಆ ವ್ಯಕ್ತಿಯ ವಿಶ್ವಾಸಾರ್ಹತೆ ಏನು? ಆತನ ಪೂರ್ವಾಪರವೇನು? ನಿಜಕ್ಕೂ ಮಾನಸಿಕವಾಗಿ ಸ್ಥಿಮಿತವಾಗಿದ್ದಾನೆಯೇ? ಎನ್ನುವ ಬಗ್ಗೆ ಮಾಹಿತಿಯನ್ನು ಬಹಿರಂಗಗೊಳಿಸಬೇಕು. ಇನ್ನೊಂದು ಆರು ತಿಂಗಳು ತನಿಖೆ ನಡೆಸಿದ ಬಳಿಕ ಆತನ ಮಾನಸಿಕ ಸ್ಥಿತಿ ಸರಿಯಿಲ್ಲವೆಂದರೆ ಇಷ್ಟು ದಿನಗಳ ಕಾಲ ಆತನ ಮಾತು ನಂಬಿ ತೋಡಿದ ಗುಂಡಿಗಳು, ಇದಕ್ಕಾಗಿ ಸರಕಾರ ವ್ಯಯಿಸಿದ ಲಕ್ಷಾಂತರ ರುಪಾಯಿ ತೆರಿಗೆ ಹಣ ಈ ಗುಂಡಿಗೆ ಹಾಕಿದಂತಾಗುವುದಿಲ್ಲವೇ? ಹೇಳಿಕೆ ನೀಡಿ ಇಷ್ಟು ದಿನವಾದರೂ ಆತನ ಮಾಹಿತಿಯನ್ನು ಬಹಿರಂಗಪಡಿಸದಿರುವುದೇ ಮೊದಲ ತಪ್ಪು ಎನ್ನುವುದು ಸ್ಪಷ್ಟ.

ಜನರ ಪ್ರಶ್ನೆಗಳೇನು?

- ಆತನ ಬಗ್ಗೆ ಈ ಪ್ರಮಾಣದಲ್ಲಿ ರಹಸ್ಯ ಕಾಪಾಡಿಕೊಳ್ಳುವ ಅಗತ್ಯವೇನಿದೆ?
- ಅನಾಮಿಕ ವ್ಯಕ್ತಿಯು ತೋರಿಸಿದ ಜಾಗಗಳಲ್ಲೆಲ್ಲಾ ಅಗೆಯುತ್ತಿರುವುದೇಕೆ?
- ಮುಂದಿನ ದಿನಗಳಲ್ಲಿ ಇನ್ನಷ್ಟು ಮಂದಿ ಬಂದು ದೂರು ನೀಡಿದರೆ ಆಗಲೂ ಅಗೆಯುವರೇ?
- ಯಾರೇ ಆರೋಪ ಮಾಡಿದರೂ ಈ ರೀತಿ ಎಸ್ಐಟಿ ರಚಿಸಿ, ಗುಂಡಿ ತೋಡಲು ಸಾಧ್ಯವೇ?
- ಅನಾಮಿಕ ತೋರಿದ ಕಡೆಯೆಲ್ಲಾ ಅಗೆಯಲು ಬಳಕೆಯಾದ ತೆರಿಗೆ ಹಣದ ನಷ್ಟಕ್ಕೆ ಹೊಣೆ ಯಾರು?

ಸೊಂಪಾದ ಪುಟಗಳು

ರಾಜಕೀಯ ಸಂಘರ್ಷಕ್ಕೆ ಶಿಕ್ಷಣ ನಲುಗದಿರಲಿ
ಅಶ್ವತ್ಥಕಟ್ಟೆ
ರಂಜಿತ್ ಎಚ್. ಅಶ್ವತ್ಥ 6

ಈ ದೇಶಗಳು ತೆರೆದುಕೊಂಡ ರೀತಿ ಅಚ್ಚರಿದಾಯಕ
ವಿಶ್ವರಂಗ
ರಂಗಸ್ವಾಮಿ ಮೂಕನಹಳ್ಳಿ 7

ದಾರಿದೀಪೋಕ್ತಿ

ನಾವು ಏನೇ ಮಾಡಿದರೂ ಅದು ನಮಗೆ ಸಂತಸ ಮತ್ತು ನೆಮ್ಮದಿಯನ್ನು ನೀಡಬೇಕು. ಅಷ್ಟೇ ಅಲ್ಲ, ನಮ್ಮ ವ್ಯಕ್ತಿತ್ವ ವಿಕಸನಕ್ಕೆ ನೆರವಾಗಬೇಕು. ನಾವು ಮಾಡುವ ಉದ್ಯೋಗ ಅಥವಾ ಕೆಲಸ ಇವುಗಳನ್ನು ನೀಡದಿದ್ದರೆ ಅವನ್ನು ಮಾಡದಿರುವುದೇ ವಾಸಿ.

ವಕ್ರತುಂಡೋಕ್ತಿ

ಕೆಲವರು ಜೀವನದಲ್ಲಿ ಹಣಕ್ಕಾಗಿ ಏನು ಬೇಕಾದರೂ ಮಾಡುತ್ತಾರೆ. ಬೆಳಗ್ಗೆ ಮೂರು ಗಂಟೆಗೆ ಎದ್ದು ರಾತ್ರಿ ಹನ್ನೆರಡು ಗಂಟೆಗೆ ಮಲಗುತ್ತಾರೆ.

ಮುನೀರ್ ಅಣು ಬಾಂಬ್ ಬೆದರಿಕೆ

ನ್ಯೂಯಾರ್ಕ್: ಪಾಕಿಸ್ತಾನ ಸೇನೆ ಮುಖ್ಯಸ್ಥ ಜನರಲ್ ಅಸೀಮ್ ಮುನೀರ್ ಅಮೆರಿಕದ ನೆಲದಲ್ಲಿ ನಿಂತು ಭಾರತ ವಿರೋಧಿ ಹೇಳಿಕೆ ನೀಡಿರುವುದಲ್ಲದೇ ಪ್ರಪಂಚಕ್ಕೇ ಅಣು ಬಾಂಬ್ ಬೆದರಿಕೆ ಹಾಕಿದ್ದಾರೆ. ನಾವು ಸಹ ಅಣ್ವಸ್ತ್ರಗಳನ್ನು ಹೊಂದಿದ್ದೇವೆ. ಒಂದು ವೇಳೆ ಯುದ್ಧಗಳು ನಡೆದು ನಾವು ಸೋತು ಹೋಗುತ್ತೇವೆ ಎನ್ನುವುದಾದರೆ ಆಗ ಅರ್ಧ ಪ್ರಪಂಚವನ್ನೇ ಮುಳುಗಿಸಿ ಹೋಗುತ್ತೇವೆ. ಇಂಡಸ್ ನದಿ (ಸಿಂಧೂ ನದಿ) ಭಾರತದ ಸ್ವತ್ತಲ್ಲ. ಅವರು ನದಿ ನೀರನ್ನು ತಡೆದಿದ್ದಾರೆ. ಡ್ಯಾಮ್ ಕಟ್ಟುತ್ತೇವೆ ಎಂದು ಹೇಳಿದ್ದಾರೆ. ಕಟ್ಟಲಿ ನೋಡೋಣ, ಆಗ ನಮ್ಮ ಹತ್ತೇ ಹತ್ತು ಮಿಸೈಲ್‌ಗಳಿಂದ ಡ್ಯಾಮ್ ಪುಡಿಗಟ್ಟುತ್ತೇವೆ ಎಂದು ಹೇಳಿದ್ದಾರೆ.

ಬೆದರಿಕೆಗೆ ಮಣಿಯಲ್ಲ: ಪಾಕಿಸ್ತಾನದ ಪರಮಾಣು ಬೆದರಿಕೆಗೆ ಭಾರತ ಮಣಿಯುವುದಿಲ್ಲ ಎಂದು ವಿದೇಶಾಂಗ ಸಚಿವಾಲಯ ಪ್ರತಿಕ್ರಿಯಿಸಿದೆ.

ಮಂತ್ರಿ ಸ್ಥಾನಕ್ಕೆ ಕುತ್ತು ತಂದ ಮತಗಳವು ಸಂಬಂಧಿತ ಹೇಳಿಕೆ

ರಾಜಣ್ಣ ತಲೆದಂಡ

ಬೆಂಗಳೂರು: ಮತಗಳ್ಳತನ ಹೋರಾಟಕ್ಕೆ ಬಹಿರಂಗವಾಗಿಯೇ ವಿರೋಧ ವ್ಯಕ್ತಪಡಿಸಿದ್ದ ಸಹಕಾರ ಸಚಿವ ಕೆ.ಎನ್.ರಾಜಣ್ಣ ಅವರನ್ನು ಸಚಿವ ಸಂಪುಟದಿಂದ ವಜಾಗೊಳಿಸಲಾಗಿದೆ.

ರಾಹುಲ್ ಗಾಂಧಿ ನೇತೃತ್ವದಲ್ಲಿ ಶನಿವಾರ ನಡೆದ ಪ್ರತಿಭಟನೆ ಮುಗಿದ ಬಳಿಕ, ಕೆ.ಎನ್.ರಾಜಣ್ಣ ಅವರು ತುಮಕೂರಿನಲ್ಲಿ ಮತಗಳವು ಆರೋಪದ ಕುರಿತು ವ್ಯತಿರಿಕ್ತ ಹೇಳಿಕೆ ನೀಡಿದ್ದ ರಿಂದ ಪಕ್ಷಕ್ಕೆ ತೀವ್ರ ಮುಜುಗರವಾಗಿತ್ತು. ಆದ್ದರಿಂದ ರಾಹುಲ್ ಗಾಂಧಿ ಅವರ ಸೂಚನೆಯಂತೆ ಸಂಪುಟದಿಂದ ವಜಾಗೊಳಿಸಲಾಗಿದೆ ಎಂದು ಮೂಲಗಳು ತಿಳಿಸಿವೆ. ಆದರೀಗ ಕೇವಲ ಸಂಪುಟದಿಂದ ಮಾತ್ರವಲ್ಲದೇ, ಪಕ್ಷದಿಂದಲೇ ಉಚ್ಚಾಟಿಸಿದರೂ ಅಚ್ಚರಿಯಿಲ್ಲ ಎನ್ನುವ ಮಾತುಗಳು ಪಕ್ಷದಲ್ಲಿ ಕೇಳಿಬರುತ್ತಿವೆ.

ಮೊದಲಿನಿಂದಲೂ ಮಾಧ್ಯಮಗಳ ಎದುರು ಪಕ್ಷಕ್ಕೆ ಮತ್ತು ಸರಕಾರಕ್ಕೆ ಇರಸು ಮುರಸು ತರುವಂತಹ ಹೇಳಿಕೆ ನೀಡುವ ಮೂಲಕ ರಾಜಣ್ಣ ಅವರು ಹಲವು ನಾಯಕರ ಕೆಂಗಣ್ಣಿಗೆ ಗುರಿಯಾಗಿದ್ದರು. ಹನಿಟ್ರ್ಯಾಪ್ ಪ್ರಕರಣ, ನಾಯಕತ್ವ ಬದಲಾವಣೆ ವಿಷಯ ದಲ್ಲಿ ನಿರಂತರವಾಗಿ ಪಕ್ಷದ ವಿರುದ್ಧ ಹೇಳಿಕೆ ನೀಡುತ್ತಾ ಬಂದಿದ್ದರು. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಎಚ್ಚರಿಕೆಯ ಹೊರತಾಗಿಯೂ ಪಕ್ಷದ ವಿರುದ್ಧ ಹೇಳಿಕೆ ನೀಡಿದ್ದರು. ಹೈಕಮಾಂಡ್ ಸೂಚನೆಯ ಬೆನ್ನಲ್ಲೇ ರಾಜಣ್ಣ ಅವರನ್ನು ಸಂಪುಟದಿಂದ ಕೈಬಿಡುವ ಸಂಬಂಧ ಡಿಸಿಎಂ ಡಿ.ಕೆ.ಶಿವಕುಮಾರ್ ಹಾಗೂ ಪರಮೇಶ್ವರ ಅವರೊಂದಿಗೆ ಚರ್ಚಿಸಿ, ವಜಾಗೊಳಿಸಲು ರಾಜ್ಯಪಾಲರಿಗೆ ಸಿದ್ದರಾಮಯ್ಯ ಅವರು ಶಿಫಾರಸು ಮಾಡಿದರು.

→ 4

- ರಾಜಣ್ಣ ಹೇಳಿಕೆ ವರದಿ ಹೈಕಮಾಂಡ್‌ಗೆ ತಲುಪಿಸಿದ ಡಿಕೆ ಆಪ್ತರು
- ರಾಹುಲ್ ಕೆಂಡಾಮಂಡಲ: ಕೂಡಲೇ ವಜಾಗೊಳಿಸಲು ಸೂಚನೆ
- ಸಿದ್ದುಗೆ ಸೂಚನೆ ನೀಡಿದ ಸುರ್ಜೇವಾಲ; ಆಪ್ತರೊಂದಿಗೆ ಸಭೆ ನಡೆಸಿ, ಮುಂದಿನ ನಡೆ ಬಗ್ಗೆ ಚರ್ಚೆ
- ಪಕ್ಷದಿಂದಲೇ ಉಚ್ಚಾಟಿಸುವ ಬದಲು, ಸಚಿವ ಸಂಪುಟದಿಂದ ವಜಾಗೊಳಿಸಲು ಸಿಎಂ ಸಿದ್ದರಾಮಯ್ಯ ನಿರ್ಧಾರ

ದೊಡ್ಡ ಷಡ್ಯಂತ್ರ

ನನ್ನನ್ನು ಸಂಪುಟದಿಂದ ವಜಾ ಮಾಡಿರುವ ಹಿಂದೆ ದೊಡ್ಡ ಷಡ್ಯಂತ್ರ, ಪಿತೂರಿ ಇದೆ. ಮಾಜಿ ಸಚಿವ ಎಂದು ಕರೆಸಿಕೊಳ್ಳಲು ನನಗೆ ಸಂತೋಷ ಇದೆ. ಈ ಪಿತೂರಿ ಹಿಂದೆ ಯಾರಿದ್ದಾರೆ? ಏನೇನು ನಡೆದಿದೆ? ಎಲ್ಲೆಲ್ಲಿ ನಡೆದಿದೆ? ಎಲ್ಲವನ್ನೂ ಕಾಲ ಬಂದಾಗ ತಿಳಿಸುತ್ತೇನೆ. ಹೈಕಮಾಂಡ್ ತಪ್ಪು ಗ್ರಹಿಕೆ ನಿವಾರಣೆ ಮಾಡಲು ದೆಹಲಿಗೆ ಹೋಗುತ್ತೇನೆ ಹೈಕಮಾಂಡ್ ತೀರ್ಮಾನಕ್ಕೆ ಬದ್ಧರಿದ್ದೇವೆ ಎಂದು ಕೆ.ಎನ್.ರಾಜಣ್ಣ ಹೇಳಿದ್ದಾರೆ.

ಬಿಜೆಪಿ ವ್ಯಂಗ್ಯ

ಸಚಿವ ಸ್ಥಾನಕ್ಕೆ ರಾಜಣ್ಣ ರಾಜೀನಾಮೆ ನೀಡಿದ್ದಾರೆ ಎನ್ನುವ ಸುದ್ದಿಯ ಹೊರತಾಗಿಯೂ ಅಧಿಕೃತ ಘೋಷಣೆಯಾಗಿರಲಿಲ್ಲ. ಈ ವಿಷಯವನ್ನು ಮುಂದಿಟ್ಟುಕೊಂಡು ಬಿಜೆಪಿ ನಾಯಕರು, ವಿಧಾನ ಸಭೆಯಲ್ಲಿ ರಾಜಣ್ಣ ಸಚಿವರೇ? ಶಾಸಕರೇ? ಎಂದು ವ್ಯಂಗ್ಯವಾಡಿದರು.

ಚು.ಆಯೋಗ, ಬಿಜೆಪಿ ವಿರುದ್ಧ ರ್‍ಯಾಲಿ

ರಾಗಾ ವಶ

ದೆಹಲಿ: ಚುನಾವಣಾ ಆಯೋಗ ಬಿಜೆಪಿಯೊಂದಿಗೆ ಒಪ್ಪಂದ ಮಾಡಿಕೊಂಡು ಚುನಾವಣಾ ದುಷ್ಕೃತ್ಯಗಳನ್ನು ನಡೆಸುತ್ತಿದೆ ಎಂದು ಆರೋಪಿಸಿ ಇಂಡಿಯಾ ಮೈತ್ರಿಕೂಟದ ಸಂಸದರು ಸೋಮವಾರ ಪ್ರತಿಭಟನಾ ಮೆರವಣಿಗೆ ನಡೆಸಿದ್ದು, ಈ ವೇಳೆ ಚುನಾವಣಾ ಆಯೋಗದ ಪ್ರಧಾನ ಕಚೇರಿಯ ಬಳಿ ಭಾರೀ ಹೈಡ್ರಾಮಾ ನಡೆದಿದೆ. ಲೋಕಸಭೆ ಪ್ರತಿಪಕ್ಷದ ನಾಯಕ ರಾಹುಲ್ ಗಾಂಧಿ ನೇತೃತ್ವದಲ್ಲಿ ಇಂಡಿಯಾ ಮೈತ್ರಿಕೂಟದ ಸಂಸದರು ಚುನಾವಣಾ ಆಯೋಗದ ಪ್ರಧಾನ ಕಚೇರಿಯವರೆಗೆ ಪ್ರತಿಭಟನಾ ರ್‍ಯಾಲಿ ಆರಂಭಿಸಿದ್ದರು. ಆದರೆ, ಪ್ರತಿಭಟನೆಗೆ ಅನುಮತಿ ಪಡೆಯದ ಹಿನ್ನೆಲೆಯಲ್ಲಿ ಪೊಲೀಸರು ರ್‍ಯಾಲಿಗೆ ತಡೆಯೊಡ್ಡಿದರು. ಈ ವೇಳೆ ಕೆಲ ಸಂಸದರು ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿ, ಬ್ಯಾರಿಕೇಡ್ ಹತ್ತುವ ಪ್ರಯತ್ನ ಮಾಡಿದರು.

→ 4

ರಾಹುಲ್ ಗಾಂಧಿ ಅವರನ್ನು ವಶಕ್ಕೆ ಪಡೆದ ಪೊಲೀಸರು.

- ಪ್ರತಿಭಟನೆಗೆ ಅನುಮತಿ ಪಡೆಯದ ಹಿನ್ನೆಲೆ ಪೊಲೀಸರಿಂದ ರ್‍ಯಾಲಿಗೆ ತಡೆ
- ಚುನಾವಣಾ ಆಯೋಗದ ಪ್ರಧಾನ ಕಚೇರಿಯ ಬಳಿ ಭಾರೀ ಹೈಡ್ರಾಮಾ
- ಬ್ಯಾರಿಕೇಡ್ ಹತ್ತಲು ಪ್ರಯತ್ನಿಸಿದ ಸಂಸದರನ್ನು ಬಂಧಿಸಿದ ಪೊಲೀಸರು

ಇದು ಸಂವಿಧಾನವನ್ನು ರಕ್ಷಿಸುವ ಹೋರಾಟ. ನಮಗೆ ಸ್ವಚ್ಛ ಮತದಾರರ ಪಟ್ಟಿ ಬೇಕು. ಅವರಿಗೆ ಮಾತನಾಡಲು ಸಾಧ್ಯವಾಗುತ್ತಿಲ್ಲ. ಇದೇ ವಾಸ್ತವ. ಸತ್ಯ ದೇಶದ ಮುಂದೆ ಇದೆ.
-ರಾಹುಲ್ ಗಾಂಧಿ ಪ್ರತಿಪಕ್ಷ ನಾಯಕ

ಡಿಜಿಪಿ ರಾವ್ ಮರುನೇಮಕ

ಬೆಂಗಳೂರು: ನಟಿ ರನ್ಯಾ ರಾವ್ ಚಿನ್ನ ಕಳ್ಳಸಾಗಣೆ ಪ್ರಕರಣದಲ್ಲಿ ಭಾಗಿಯಾಗಿಯಾಗಿದ್ದಾರೆ ಎಂಬ ಆರೋಪದ ಮೇಲೆ ಕಡ್ಡಾಯ ರಜೆಯಲ್ಲಿದ್ದ ಪೊಲೀಸ್ ಮಹಾನಿರ್ದೇಶಕ ಕೆ.ರಾಮಚಂದ್ರ ರಾವ್ ಅವರನ್ನು ರಾಜ್ಯ ಸರಕಾರ ಮರುನೇಮಕ ಮಾಡಿದೆ. ಡಿಜಿಪಿ ರಾವ್ ಅವರನ್ನು ನಾಗರಿಕ ಹಕ್ಕುಗಳ ಜಾರಿ ನಿರ್ದೇಶನಾಲಯದ ಪೊಲೀಸ್ ಮಹಾನಿರ್ದೇಶಕರ ಹುದ್ದೆಗೆ ಮೇಲ್ದರ್ಜೆಗೇರಿಸಲಾಗಿದೆ. ಅಧಿಸೂಚನೆಯಲ್ಲಿ ರಾಜ್ಯ ಸರಕಾರವು ಡಿಜಿಪಿ (ಡಿಸಿಆರ್ಇ) ಐಪಿಎಸ್ (ವೇತನ) ನಿಯಮಗಳು 2016ರ ನಿಯಮ 12ರ ಅಡಿಯಲ್ಲಿ ಸಿಐಡಿ, ವಿಶೇಷ ಘಟಕಗಳು ಮತ್ತು ಆರ್ಥಿಕ ಅಪರಾಧಗಳ ಮಹಾನಿರ್ದೇಶಕ ಹುದ್ದೆಗೆ ಸಮಾನವಾಗಿದೆ ಎಂದು ಹೇಳಿದೆ.

ಬಿಜೆಪಿ 18 ಶಾಸಕರ ಅಮಾನತು ವಾಪಸ್

ವಿಧಾನಸಭೆ: ಸಭಾಧ್ಯಕ್ಷರ ಪೀಠಕ್ಕೆ ಅಗೌರವ ಸೂಚಿಸಿದ್ದ ಆರೋಪದ ಮೇಲೆ 6 ತಿಂಗಳು ಬಿಜೆಪಿಯ 18 ಶಾಸಕರನ್ನು ಅಮಾನತುಗೊಳಿಸಿದ್ದ ನಿರ್ಣಯ ವಾಪಸ್ ನಿರ್ಧಾರಕ್ಕೆ ವಿಧಾನಸಭೆಯಲ್ಲಿ ಸೋಮವಾರ ಅನುಮೋದನೆ ನೀಡಲಾಗಿದೆ. ಕಳೆದ ಅಧಿವೇಶನದಲ್ಲಿ ಬಿಜೆಪಿಯ 18 ಶಾಸಕರನ್ನು ಅಮಾನತುಗೊಳಿಸಿ ನಿರ್ಣಯ ಕೈಗೊಳ್ಳಲಾಗಿತ್ತು. ಆದರೆ ಸದನದಲ್ಲಿ ನಿರ್ಣಯ ಕೈಗೊಂಡಿದ್ದರಿಂದ, ಸದನದಲ್ಲಿಯೇ ಅನುಮೋದನೆ ಪಡೆಯಬೇಕಿತ್ತು. ಆದ್ದರಿಂದ ಸೋಮವಾರ ಅನುಮೋದನೆ ಪಡೆಯಲಾಯಿತು.

ಫಾಸ್ಟ್ಯಾಗ್ ಪಾಸ್ ಹಂಚಿಕೆ 15ರಿಂದ

ದೆಹಲಿ: 3,000 ರು. ಪಾವತಿಸಿ ದೇಶದ ಯಾವುದೇ ಟೋಲ್‌ಗಳಲ್ಲಿ 1 ವರ್ಷ ಅಥವಾ 200 ಟ್ರಿಪ್‌ಗೆ ಅನುಮತಿಸುವ ವಾರ್ಷಿಕ ಫಾಸ್ಟ್ಯಾಗ್ ಪಾಸ್ ಆ.15ರಿಂದ ಲಭಿಸಲಿದೆ. ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ ಫಾಸ್ಟ್ಯಾಗ್‌ಗಳಿಗಾಗಿ ಹೊಸ ವಾರ್ಷಿಕ ಪಾಸ್ ಅನ್ನು ಜೂನ್ ತಿಂಗಳಲ್ಲಿ ಘೋಷಿಸಿತ್ತು. ಪಾಸ್‌ಗಳ ವಿತರಣಾ ಕಾರ್ಯಕ್ಕೆ ಆ.15ರಂದು ಚಾಲನೆ ಸಿಗಲಿದ್ದು, ಈ ಪಾಸ್ ಇದ್ದವರು, ಖಾಸಗಿ ಕಾರು, ಜೀಪ್, ವ್ಯಾನ್‌ಗಳನ್ನು ಗೊತ್ತುಪಡಿಸಿದ ರಾಷ್ಟ್ರೀಯ ಹೆದ್ದಾರಿ ಮತ್ತು ರಾಷ್ಟ್ರೀಯ ಮೋಟಾರು ಮಾರ್ಗ ಶುಲ್ಕ ಪ್ಲಾಜಾಗಳಲ್ಲಿ 1 ವರ್ಷ ಅಥವಾ 200 ಟ್ರಿಪ್ ಹೋಗಬಹುದು. ಪ್ರತಿ ಬಾರಿ ಶುಲ್ಕ ಕೊಡುವುದು ತಪ್ಪುತ್ತದೆ.

ಅನರ್ಹ ಕಾರ್ಡ್ ಇನ್ನು ಎಪಿಎಲ್?

ವಿಧಾನ ಪರಿಷತ್: ರಾಜ್ಯದಲ್ಲಿ 15 ಲಕ್ಷ ಅನರ್ಹ ಬಿಪಿಎಲ್ ಕಾರ್ಡುದಾರರಿದ್ದಾರೆ. ಗುರುತಿಸಲಾಗಿರುವ ಅನರ್ಹ ಪಡಿತರದಾರರನ್ನು ಎಪಿಎಲ್‌ಗೆ ಸೇರ್ಪಡೆ ಮಾಡಲು ಪ್ರತಿಪಕ್ಷ ಸದಸ್ಯರು ಒಪ್ಪಿಗೆ ನೀಡಿದರೆ ಶೀಘ್ರದಲ್ಲಿ ಕಾರ್ಯಾರಂಭ ಮಾಡಲಾಗುವುದು ಎಂದು ಆಹಾರ ಸಚಿವ ಕೆ.ಎಚ್.ಮುನಿಯಪ್ಪ ತಿಳಿಸಿದ್ದಾರೆ. ಈ ಹಿಂದೆ ಬಿಪಿಎಲ್ ಕಾರ್ಡ್‌ನಲ್ಲಿದ್ದ ಫಲಾನುಭವಿಗಳನ್ನು ಎಪಿಎಲ್‌ಗೆ ವರ್ಗಾವಣೆ ಮಾಡಲು ಇಲಾಖೆ ಮುಂದಾದಾಗ ದೊಡ್ಡ ವಿವಾದವೇ ಸೃಷ್ಟಿಯಾಯಿತು. ಸದನದ ಸದಸ್ಯರೆಲ್ಲರೂ ಒಪ್ಪಿಗೆಯನ್ನು ಸೂಚಿಸಿದರೆ ಬಿಪಿಎಲ್‌ನಿಂದ ಎಪಿಎಲ್‌ಗೆ ಅನರ್ಹ ಫಲಾನುಭವಿಗಳನ್ನು ವರ್ಗಾವಣೆ ಮಾಡಲಾಗುವುದು ಎಂದರು.

ಮೈಸೂರು ದಸರಾ ಎಷ್ಟೊಂದು ಸುಂದರ

ಭೀಮನ ತೂಕ
5465 ಕೆ.ಜಿ

- ಕ್ಯಾಪ್ಟನ್ ಅಭಿಮನ್ಯು ದಸರಾ ಆನೆಗಳಲ್ಲೇ 2ನೇ ಹೆಚ್ಚು ತೂಕದ ಆನೆ



ಬಲಶಾಲಿ ಭೀಮನ ತೂಕ ಪರೀಕ್ಷೆ.

ದಸರಾ ಆನೆಗಳ ತೂಕ ಪರೀಕ್ಷೆ

ಭೀಮನೇ ಬಲಶಾಲಿ

ಮೈಸೂರು: ನಾಡಹಬ್ಬ ದಸರಾ ಹಿನ್ನೆಲೆಯಲ್ಲಿ ಮೈಸೂರಿಗೆ ಆಗಮಿಸಿರುವ ಅಭಿಮನ್ಯು ನೇತೃತ್ವದ ಒಂಬತ್ತು ಆನೆಗಳ ತಂಡದ ತೂಕ ಕಾರ್ಯ ಸೋಮವಾರ ನಡೆದಿದ್ದು, ಎಲ್ಲ ಆನೆಗಳಿಗಿಂತ ಭೀಮನೇ ಅತೀ ಹೆಚ್ಚು ತೂಗಿದ್ದಾನೆ.

ಕಾಡಿನಿಂದ ನಾಡಿಗೆ ಬಂದ ನಂತರ ನಡೆಯುವ ಮೊದಲ ತೂಕ ಪರೀಕ್ಷೆಯಲ್ಲೇ 25 ವರ್ಷದ ಭೀಮ ಬರೋಬ್ಬರಿ 5,465 ಕೆ.ಜಿ ತೂಕ ಹೊಂದುವ ಮೂಲಕ ಅಂಬಾರಿ ಹೊರುವ ಅಭಿಮನ್ಯುವನ್ನು ಹಿಂದಿಕ್ಕಿದ್ದಾನೆ. ಇನ್ನುಳಿದಂತೆ ಅಭಿಮನ್ಯು 5,360 ಕೆ.ಜಿ, ಪ್ರಶಾಂತ 5,110 ಕೆ.ಜಿ, ಧನಂಜಯ 5,310 ಕೆ.ಜಿ, ಮಹೇಂದ್ರ 5,120 ಕೆ.ಜಿ, ಏಕಲವ್ಯ 5,305 ಕೆ.ಜಿ, ಕಂಜನ್ 4,880 ಕೆ.ಜಿ, ಲಕ್ಷ್ಮೀ 3,730 ಹಾಗೂ ಕಾವೇರಿ 3,010 ಕೆ.ಜಿ ತೂಕ ಹೊಂದಿವೆ. ಮೈಸೂರಿನ ಧನ್ವಂತರಿ ರಸ್ತೆಯಲ್ಲಿರುವ ಸಾಯಿರಾಂ ಆ್ಯಂಡ್ ಕೋ, ಎಲೆಕ್ಟ್ರಿಕ್ ತೂಕ ಮಾಪನ ಕೇಂದ್ರದಲ್ಲಿ ಎಲ್ಲ ಆನೆಗಳನ್ನು ತೂಕ ಮಾಡಲಾಯಿತು.

ಅಭಿಮನ್ಯು	5360 ಕೆ.ಜಿ
ಪ್ರಶಾಂತ	5110 ಕೆ.ಜಿ
ಧನಂಜಯ	5310 ಕೆ.ಜಿ
ಮಹೇಂದ್ರ	5120 ಕೆ.ಜಿ
ಏಕಲವ್ಯ	5305 ಕೆ.ಜಿ
ಕಂಜನ್	4880 ಕೆ.ಜಿ
ಲಕ್ಷ್ಮಿ	3730 ಕೆ.ಜಿ
ಕಾವೇರಿ	3010 ಕೆ.ಜಿ

ಸಮಾಚಾರ ಸಣ್ಣದಲ್ಲ

ಸಂಸದರ ವಿರುದ್ಧ ಕ್ರಮಕ್ಕೆ ಹೈಕೋರ್ಟ್ ತಡೆ

ಚಿಕ್ಕಬಳ್ಳಾಪುರ: ಜಿಲ್ಲಾ ಪಂಚಾಯಿತಿ ಮುಖ್ಯ ಲೆಕ್ಕಾಧಿಕಾರಿಯ ಕಾರು ಚಾಲಕನಾಗಿದ್ದ ಬಾಬು ಎಂಬಾತನಿಗೆ ಆತ್ಮಹತ್ಯೆಗೆ ಪ್ರಚೋದನೆ ನೀಡಿದ ಆರೋಪ ಪ್ರಕರಣಕ್ಕೆ ಸಂಬಂಧಿಸಿದಂತೆ ಸಂಸದ ಡಾ.ಕೆ. ಸುಧಾಕರ್ ವಿರುದ್ಧ ಯಾವುದೇ ಬಲವಂತದ ಕ್ರಮ ಜರುಗಿಸದಂತೆ ಹೈಕೋರ್ಟ್ ಸೋಮವಾರ ಮಧ್ಯಂತರ ತಡೆ ಆದೇಶ ನೀಡಿದ್ದು ಸುಧಾಕರ್‌ಗೆ ಬಿಗ್ ರಿಲೀಫ್ ದೊರೆತಿದೆ. ಮಧ್ಯಂತರ ತಡೆ ನೀಡುವ ವೇಳೆ ಏಕಸದಸ್ಯ ಪೀಠದ ನ್ಯಾಯಮೂರ್ತಿಗಳು ಪ್ರಕರಣದ ತನಿಖೆಗೆ ಸಹಕರಿಸುವಂತೆ ಸಂಸದ ಡಾ. ಕೆ. ಸುಧಾಕರ್‌ಗೆ ನಿರ್ದೇಶಿಸಿದೆ. ಮೃತ ಬಾಬು ಪತ್ನಿ ದಾಖಲಿಸಿರುವ ದೂರು ಆಧರಿಸಿ, ಚಿಕ್ಕಬಳ್ಳಾಪುರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಎಫ್‌ಐಆರ್ ರದ್ದುಕೋರಿ ಸಂಸದ ಕೆ. ಸುಧಾಕರ್ ಸಲ್ಲಿಸಿದ್ದ ಅರ್ಜಿ ಕುರಿತು ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ಐ. ಅರುಣ್ ಅವರಿದ್ದ ಏಕಸದಸ್ಯ ನ್ಯಾಯಪೀಠ, ಈ ಮಧ್ಯಂತರ ಆದೇಶ ಮಾಡಿತು. ಜೊತೆಗೆ, ಅರ್ಜಿ ಸಂಬಂಧ ಚಿಕ್ಕಬಳ್ಳಾಪುರ ಗ್ರಾಮಾಂತರ ಠಾಣೆ ಪೊಲೀಸರಿಗೆ ನೋಟಿಸ್ ಜಾರಿಗೊಳಿಸಿದ ನ್ಯಾಯಾಲಯ, ಎರಡನೇ ಪ್ರತಿವಾದಿಯಾದ ದೂರುದಾರೆ ಮೃತನ ಪತ್ನಿ ಶಿಲ್ಪಾ ಅವರಿಗೆ ತುರ್ತು ನೋಟಿಸ್ ಜಾರಿಗೊಳಿಸಿ, ಅರ್ಜಿ ವಿಚಾರಣೆ ಮುಂದೂಡಿದೆ.

ವಾಹನ ಪಲ್ಟಿ ಕಾರ್ಮಿಕ ಸಾವು

ಮಧುಗಿರಿ: ವಾಹನ ಪಲ್ಟಿಯಾಗಿ ಕೂಲಿ ಕಾರ್ಮಿಕನೊಬ್ಬ ಮೃತಪಟ್ಟ ಘಟನೆ ಸೋಮವಾರ ನಡೆದಿದೆ. ಐ.ಡಿ.ಹಳ್ಳಿ ಹೋಬಳಿಯ ಚನ್ನಮಲ್ಲನಹಳ್ಳಿ ಗ್ರಾಮದಲ್ಲಿ ಮನೆಯೊಂದಕ್ಕೆ ಕಾಂಕ್ರೀಟ್ ಹಾಕುತ್ತಿದ್ದಾಗ ಘಟನೆ ನಡೆದಿದೆ. ತಾಲೂಕಿನ ಮಿಡಿಗೇಶಿ ಪೊಲೀಸ್ ಠಾಣಾ ವ್ಯಾಪ್ತಿಯ ನೀರಕಲ್ಲು ಗ್ರಾಮದ ಹೊರವಲಯದಲ್ಲಿ ನರಸಿಂಹರಾಜು ಕಾಂಕ್ರೀಟ್ ಮಿಕ್ ಮಾಡುವ ಯಂತ್ರಕ್ಕೆ ಸಿಲುಕಿ ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ. ಇತರೆ ನಾಲ್ವರನ್ನು ಹೆಚ್ಚಿನ ಚಿಕಿತ್ಸೆಗೆ ಆಸ್ಪತ್ರೆಗೆ ರವಾನಿಸಲಾಗಿದೆ. ಸಿಪಿಐ ಹೆಚ್.ಹನುಮಂತರಾಯಪ್ಪ ಸ್ಥಳಕ್ಕೆ ಭೇಟಿ ನೀಡಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಸಾಲ ಸೌಲಭ್ಯಕ್ಕಾಗಿ ಅರ್ಜಿ ಆಹ್ವಾನ

ತುಮಕೂರು: ಡಾ.ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ, ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮ ಹಾಗೂ ಕರ್ನಾಟಕ ಭೋವಿ ಅಭಿವೃದ್ಧಿ ನಿಗಮಗಳು ವಿವಿಧ ಯೋಜನೆಯಡಿ ಸಾಲ ಸೌಲಭ್ಯ ಕಲ್ಪಿಸಲು ಪರಿಶಿಷ್ಟ ಜಾತಿ ಅಭ್ಯರ್ಥಿಗಳಿಂದ ಆನ್‌ಲೈನ್ ಅರ್ಜಿ ಆಹ್ವಾನಿಸಿವೆ. ಸ್ವಯಂ ಉದ್ಯೋಗ ನೇರಸಾಲ, ಉದ್ಯಮಶೀಲತಾ ಅಭಿವೃದ್ಧಿ(ಬ್ಯಾಂಕುಗಳ ಸಹಯೋಗದೊಂದಿಗೆ), ಮೈಕ್ರೋ ಕ್ರೆಡಿಟ್ (ಪ್ರೇರಣಾ), ಗಂಗಾಕಲ್ಯಾಣ ಹಾಗೂ ಭೂ ಒಡೆತನ ಯೋಜನೆಗಳಡಿ ಸಾಲ ಸೌಲಭ್ಯ ಒದಗಿಸಲಾಗುವುದು. ಆಸಕ್ತರು ಕರ್ನಾಟಕ ಒನ್, ಗ್ರಾಮಒನ್, ತುಮಕೂರು ಒನ್ ಅಥವಾ ವೆಬ್ ಸೈಟ್ ಮೂಲಕ ಸೆಪ್ಟೆಂಬರ್ 10ರೊಳಗಾಗಿ ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಸಹಾಯವಾಣಿ ಸಂ: 9482300400 ಯನ್ನು ಸಂಪರ್ಕಿಸಬಹುದಾಗಿದೆ ಎಂದು ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಾಬು ಪ್ರಕರಣ: ಆರೋಪಿಗಳ ಬಂಧಿಸಬೇಕು

ದಲಿತ ಸಂಘಟನೆಗಳ ಪ್ರತಿಭಟನೆ | ಸಂಸದ ಡಾ.ಕೆ.ಸುಧಾಕರ್ ರಾಜೀನಾಮೆ ನೀಡಲಿ

ಚಿಕ್ಕಬಳ್ಳಾಪುರ: ಜಿಲ್ಲಾಡಳಿತ ಭವನದಲ್ಲಿ ಆತ್ಮಹತ್ಯೆಗೆ ಶರಣಾದ ಹೊರ ಗುತ್ತಿಗೆ ನೌಕರ ಕಾರು ಚಾಲಕ ಬಾಬು ಸಾವಿನ ಪ್ರಕರಣದಲ್ಲಿ ಎಫ್‌ಐಆರ್‌ನಲ್ಲಿರುವ ಎಲ್ಲಾ ಆರೋಪಿಗಳನ್ನು ಬಂಧಿಸಬೇಕು. ನೈತಿಕ ಹೊಣೆ ಹೊತ್ತು ಸಂಸದ ಡಾ ಕೆ.ಸುಧಾಕರ್ ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿ ಮಳೆಯನ್ನೂ ಲೆಕ್ಕಿಸದೆ ಪ್ರತಿಭಟನೆ ನಡೆಸಿದ ಘಟನೆ ಚಿಕ್ಕಬಳ್ಳಾಪುರದಲ್ಲಿ ನಡೆದಿದೆ.

ಸಾವಿರಾರು ಸಂಖ್ಯೆಯಲ್ಲಿ ಜಮಾಯಿಸಿದ್ದ ದಲಿತಪರ ಸಂಘಟನೆಗಳ ಮುಖಂಡರು, ಕಾರ್ಯಕರ್ತರು ನಗರದ ಬಿಬಿ ರಸ್ತೆಯ ಕನ್ನಡ ಭವನದಿಂದ ಬೃಹತ್ ಮೆರವಣಿಗೆಯಲ್ಲಿ ಸಾಗಿ ಶಿಡ್ಲಘಟ್ಟ ವೃತ್ತದಲ್ಲಿ ಜಮಾಯಿಸಿ ಬಾಬು ಸಾವಿನ ನ್ಯಾಯಕ್ಕಾಗಿ ಆಗ್ರಹಿಸಿದರು. ಇಲ್ಲಿ ರಸ್ತೆ ತಡೆದು ಪ್ರತಿಭಟನೆ ನಡೆಸಿದ ಮುಖಂಡರು ಮಾನವ ಸರಪಳಿ ನಿರ್ಮಿಸಿ ಆರೋಪಿಗಳ ವಿರುದ್ಧ ಧಿಕ್ಕಾರದ ಘೋಷಣೆಗಳನ್ನು ಮೊಳಗಿಸಿದರು.

ದೋ ಎಂದು ಸುರಿಯುವ ಮಳೆಯನ್ನೂ ಲೆಕ್ಕಿಸದೇ ಘೋಷಣೆ ಕೂಗಿದರು.ಪ್ರತಿಭಟನೆಯ ಉದ್ದಕ್ಕೂ ಎ-1 ಆರೋಪಿ ಸಂಸದ ಡಾ ಕೆ ಸುಧಾಕರ್ ಭಾವಚಿತ್ರವುಳ್ಳ ಫ್ಲೆಕ್ಸ್ ಹಿಡಿದು ಧಿಕ್ಕಾರದ ಘೋಷಣೆಗಳನ್ನು ಕೂಗುತ್ತಾ ಸಾಗಿದ್ದು ಕಂಡು ಬಂದಿತು.

ಚಿಕ್ಕಬಳ್ಳಾಪುರದಲ್ಲಿ ನಡೆದ ಪ್ರತಿಭಟನೆಯಲ್ಲಿ ದಲಿತ ಮುಖಂಡರಾದ ಸು.ಧಾ.ವೆಂಕಟೇಶ್, ಕೆ. ಗವಿರಾಯಪ್ಪ, ಸಂದೀಪ್ ಚಕ್ರವರ್ತಿ, ವೆಂಕಟ್, ಮತ್ತಿತರರು ಭಾಗವಹಿಸಿದ್ದರು.

ಈ ವೇಳೆ ಮಾತನಾಡಿದ ದಸಂಸ ಸಂಘಟನಾ ಸಂಚಾಲಕ ಸುಧಾವೆಂಕಟೇಶ್, ವಾಹನ ಚಾಲಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ದಲಿತ ಯುವಕ ಬಾಬು ತನ್ನನ್ನು ಹೊರಗುತ್ತಿಗೆಯಿಂದ ಬಿಡುಗಡೆಗೊಳಿಸಿಕೊಂಡು ಹುದ್ದೆಯನ್ನು ಖಾಯಂ ಮಾಡಿಸಿಕೊಳ್ಳಲು ಸಾಲಸೋಲ ಮಾಡಿ ನಾಗೇಶ್ ಮತ್ತು ಮಂಜುನಾಥ್ ಗೆ 25 ಲಕ್ಷ ಹಣ ನೀಡಿರುವುದಾಗಿ,ಕೆಲಸ ಮಾಡಿಸಿಕೊಡದೆ, ಹಣ ವಾಪಸ್ಸು ಕೊಡದೆ ಏನು ಬೇಕಾದರೂ ಮಾಡಿಕೋ ಎಂಬಂತೆ ವರ್ತಿಸುತ್ತಿದ್ದರಿಂದ ಮನನೊಂದು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದಾಗಿ ಡೆತ್ ನೋಟ್‌ನಲ್ಲಿ ಬರೆದುಕೊಂಡು ಸಾವಿಗೀಡಾಗಿದ್ದಾನೆ. ಇದರಲ್ಲಿ ಒಬ್ಬ ರಾಜಕಾರಣಿ, ಸಂಸದ ಸುಧಾಕರ್ ಹೆಸರು ಮುಖ್ಯವಾಗಿ ಕೇಳಿಬಂದಿದೆ. ಎಲ್ಲಾ ಆರೋಪಿಗಳನ್ನು ಕೂಡಲೇ ಬಂಧಿಸಬೇಕು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳನ್ನು ಒತ್ತಾಯಿಸಿದರು.

ಮೃತ ಬಾಬು ಅವರ ಸ್ವಂತ ಊರಿನ ಮನೆಗೆ ತೆರಳಿದ್ದ ಶಾಸಕ ಪ್ರದೀಪ್ ಈಶ್ವರ್ ಬಾಬು ಹೆಂಡತಿಗೆ ಕೆಲಸ ಕೊಡಿಸುವ ಭರವಸೆ ನೀಡಿದ್ದಾರೆ. ಅವರ ತಾಯಿಗೂ ಕೆಲಸ ಕೊಡಿಸುವುದಾಗಿ ತಿಳಿಸಿ, ಸಮಾಜ ಕಲ್ಯಾಣ ಇಲಾಖೆಯಿಂದ ಸಿಗಬೇಕಾದ ಪರಿಹಾರವನ್ನೂ ಕೊಡಿಸಿದ್ದಾರೆ. ಆದರೆ ಈ ಕೆಲಸವನ್ನು ಬಿಜೆಪಿಯವರಾಗಲಿ, ಡಾ.ಕೆ.ಸುಧಾಕರ್ ಆಗಲಿ ಮಾಡಿಲ್ಲ.ಘಟನೆ ನಡೆದು ವಾರವಾದರೂ ಇದುವರೆಗೂ ಒಂದು ಸಾಂತ್ವನ ಹೇಳುವ ಸೌಜನ್ಯವನ್ನೂ ತೋರಿಲ್ಲ ಎಂದು ಗುಡುಗಿದರು.

ಮುಖಂಡರಾದ ವಕೀಲ ಸಂದೀಪ್ ಚಕ್ರವರ್ತಿ ಮಾತನಾಡಿ, ಬಾಬು ಪ್ರಕರಣದಲ್ಲಿ ನಿಷ್ಪಕ್ಷಪಾತವಾಗಿ ತನಿಖೆ ನಡೆದು ತಪ್ಪಿತಸ್ಥರ ವಿರುದ್ಧ ಕಠಿಣ ಕಾನೂನು ಕ್ರಮವಾಗಬೇಕು ಎಂದು ಒತ್ತಾಯಿಸಿದರು.

ಮುಖಂಡ ಕೆ.ಗವಿರಾಯಪ್ಪ ಮಾತನಾಡಿ, ಆರೋಪಿಗಳನ್ನು ಬಂಧಿಸಿ, ಸೂಕ್ತ ಶಿಕ್ಷೆ ಕೊಡಿಸುವವರೆಗೂ ಹೋರಾಟ ನಿಲ್ಲಿಸುವುದಿಲ್ಲ ಎಂದರು. ದಲಿತ ಮುಖಂಡ ಶ್ರೀನಿವಾಸ್ ಮಾತನಾಡಿ, ಎಂತಹ ಪ್ರಭಾವಶಾಲಿಯೇ ಆಗಿರಲಿ ಆತ್ಮಹತ್ಯೆಗೆ ಕಾರಣರಾದವರನ್ನು ಕೂಡಲೇ ಬಂಧಿಸಿ ಸಾಮಾಜಿಕ ನ್ಯಾಯ ಎತ್ತಿ ಹಿಡಿಯಬೇಕು ಒತ್ತಾಯಿಸಿದರು. ನಗರಾಭಿವೃದ್ಧಿ ಪ್ರಾಧಿಕಾರದ ಸದಸ್ಯ ಪೆದ್ದಣ್ಣ ಮಾತನಾಡಿದರು. ಸುರಿವ ಮಳೆಯನ್ನೂ ಲೆಕ್ಕಿಸದೆ ಹೆಚ್ಚುವರಿ ಜಿಲ್ಲಾಧಿಕಾರಿ ಡಾ.ಎನ್.ಭಾಸ್ಕರ್, ಎಸ್ಪಿ,ಕುಶಾಲ್‌ಚೌಕ್ಸೆ ಪ್ರತಿಭಟನಾನಿರತರ ಬಳಿಗೆ ಬಂದು ಮನವಿ ಸ್ವೀಕರಿಸಿದರು.

ಪ್ರತಿಭಟನೆಯಲ್ಲಿ ಗವಿರಾಯಪ್ಪ, ಶ್ರೀನಿವಾಸ್,ಬಿ.ವಿ ಆನಂದ್,ಮಮತಾಮೂರ್ತಿ,ಅಣ್ಣೆಮ್ಮ,ಪೆದ್ದಣ್ಣ, ಆಧಿನಾರಯಣ,ಮುನಿಕೃಷ್ಣ,ನಾಗೇಶ್ ರೆಡ್ಡಿ,ಕುಬೇರ್ ಅಚ್ಚು,ವೆಂಕಟ್, ವೇಮಣ್ಣ,ಸಿ.ಆರ್.ನಾರಾಯಣಸ್ವಾಮಿ,ನಾರಾಯಣಮ್ಮ,ಡ್ಯಾನ್ಸ್ ಶ್ರೀನಿವಾಸ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಕ್ಷಿತ್‌ರೆಡ್ಡಿ, ನಾಗಭೂಷಣ್ ಭಾಗವಹಿಸಿದ್ದರು.

ದೂರುದಾರರ ವಿರುದ್ಧವೇ ತನಿಖೆ ಆಗಲಿ

ರಾಮನಗರ: ಧರ್ಮಸ್ಥಳ ಕ್ಷೇತ್ರದ ಹೆಸರಿಗೆ ಕಳಂಕ ತರುವ ಕೆಲಸ ಕೆಲವರಿಂದ ನಿರಂತರವಾಗಿ ನಡೆಯುತ್ತಿದ್ದು ಇದು ಕ್ಷೇತ್ರದ ಭಕ್ತರ ಧಾರ್ಮಿಕ ಭಾವನೆಗಳಿಗೆ ಧಕ್ಕೆಯಾಗಿದೆ ಎಂದು ಧರ್ಮಸ್ಥಳ ಭಕ್ತಾಭಿಮಾನಿಗಳ ವೇದಿಕೆ ಮುಖಂಡ ಚಂದ್ರೇಗೌಡ ತಿಳಿಸಿದರು.

ವೇದಿಕೆ ವತಿಯಿಂದ ಸುದ್ದಿಗೋಷ್ಠಿ ನಡೆಸಿ ಮಾತನಾಡಿ, ಸುಮಾರು 800 ವರ್ಷಗಳ ಇತಿಹಾಸದ ದಕ್ಷಿಣ ಕಾಶಿ ಎಂದೇ ಪ್ರಸಿದ್ಧಿಯಾದ ಧರ್ಮಸ್ಥಳ ಪ್ರತಿ ವರ್ಷ 450 ಕೋಟಿ ಮೊತ್ತದ ಸೇವಾ ಕಾರ್ಯ ಮಾಡುತ್ತಿದೆ. ಕಳೆದ ಕೆಲವು ವರ್ಷಗಳಿಂದ ಗಿರೀಶ್ ಮಟ್ಟಣ್ಣವರ್, ಮಹೇಶ್ ಶೆಟ್ಟಿ ತಿಮರೋಡಿ, ಸಮೀರ್ ಎಂ.ಡಿ. ಸಂತೋಷ್ ಶೆಟ್ಟಿ, ಜಯಂತ್ ಟಿ, ಅಜಯ್ ಅಂಚನ್ ಮತ್ತು ಅವನ ಸಹಚರರು ಸೇರಿಕೊಂಡು ಪವಿತ್ರವಾದ ಮಂಜುನಾಥ ಸ್ವಾಮಿ ದೇವಾಲಯ ಹಾಗೂ ಡಾ. ಡಿ. ವೀರೇಂದ್ರ ಹೆಗ್ಗಡೆ ಮತ್ತು ಅವರ ಕುಟುಂಬಸ್ಥರ ಹೆಸರಿಗೆ ಕಳಂಕ ತರುವ ವೀಡಿಯೋಗಳ ತುಣುಕುಗಳನ್ನು ತಯಾರಿಸಿ ಅದನ್ನು ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಡುತ್ತಿದ್ದಾರೆ. ಇದು ಧರ್ಮಸ್ಥಳ ಭಕ್ತಾಭಿಮಾನಿಗಳಾದ ನಮ್ಮೆಲ್ಲರಿಗೂ ತೀವ್ರ ನೋವನ್ನುಂಟು ಮಾಡಿದೆ.

ರಾಮನಗರದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಜನಜಾಗೃತ ವೇದಿಕೆ ಪದಾಧಿಕಾರಿಗಳು ಮಾತನಾಡಿದರು.

ಬಮೂಲ್ ನಿರ್ದೇಶಕ ಪಿ. ನಾಗರಾಜ್ ಮಾತನಾಡಿ ಕಾಣದ ಕೈಗಳು ಧರ್ಮಸ್ಥಳದ ಬಗ್ಗೆ ಅಪಪ್ರಚಾರದಲ್ಲಿ ತೊಡಗಿ ಕೆಲಸ ಮಾಡುತ್ತಿವೆ ಧರ್ಮ ಒಡೆದು ನಂತರ ಸಮಾಜ ಒಡೆಯುವ ಹುನ್ನಾರ ಇದಾಗಿದೆ. ಆರೋಪ ಮಾಡುತ್ತಿರುವವರ ವಿರುದ್ಧವೇ ಎಸ್.ಐ.ಟಿ ರಚನೆ ಮಾಡಿ ತನಿಖೆ ಮಾಡಿ ಬಂಧಿಸಬೇಕು ಎಂದರು. ಜಿಲ್ಲಾ ಜನ ಜಾಗೃತಿ ವೇದಿಕೆ ಅಧ್ಯಕ್ಷ ಹರೀಶ್ ಕುಮಾರ್, ಜಿಲ್ಲಾ ಜನಜಾಗೃತಿ ವೇದಿಕೆ ಸ್ಥಾಪಕ ಅಧ್ಯಕ್ಷ ಬಿಡದಿ ಚಿಕ್ಕಣ್ಣಯ್ಯ, ಕೈಲಾಂಚ ಪಾಂಡುರಂಗ, ಅಂಚೇಪಾಳ್ಯ ಬಸವರಾಜು, ಬಿಡದಿ ಮಂಜುನಾಥ್, ನಾಗೋಹಳ್ಳಿ ಲಿಂಗೇಗೌಡ, ಶಿವಕುಮಾರ್, ಮೇಳೆಹಳ್ಳಿ ರವೀಂದ್ರ, ರಮೇಶ್, ಅರ್ಕೇಶ್, ಪ್ರಭಾಕರ್, ಮುಂತಾದವರಿದ್ದರು.

ಶುಗರ್ ಹತೋಟಿಗೆ ಆರೋಗ್ಯಕರ ಆಹಾರ ಅಗತ್ಯ

ಹಾಸನ: ಆರೋಗ್ಯಯುತ ಆಹಾರ ಪದ್ದತಿಯೊಂದಿಗೆ ವೈದ್ಯರ ಸಲಹೆಗಳನ್ನು ಪಾಲಿಸಿದರೆ ಮಧುಮೇಹ ಕಾಯಿಲೆಯನ್ನು ನಿಯಂತ್ರಿಸಬಹುದು ಎಂದು ಖ್ಯಾತ ಮಧುಮೇಹ ತಜ್ಞ ಮತ್ತು ವಿಶ್ರಾಂತ ಕುಲಪತಿ ಡಾ.ಎಂ.ಎ. ಶೇಖರ್ ಸಲಹೆ ನೀಡಿದರು.

ನಗರದ ಆದಿಚುಂಚನಗಿರಿ ಸಮುದಾಯ ಭವನದಲ್ಲಿ ನಡೆದ ಗುರು ತೋರಿದ ದಾರಿ ತಿಂಗಳ ಮಾಮನ ತೇರು 131ನೇ ಹುಣ್ಣಿಮೆ ಕಾರ್ಯಕ್ರಮದಲ್ಲಿ ಅಂಗೈಯಲ್ಲಿ ಆರೋಗ್ಯ ಎಂಬ ವಿಷಯದ ಬಗ್ಗೆ ವಿಶೇಷ ಉಪನ್ಯಾಸ ನೀಡಿದರು.

ನಾವು ಸಾಧ್ಯವಾದಷ್ಟು ನೈಸರ್ಗಿಕವಾದ ರೀತಿಯಲ್ಲಿ, ನಮಗೆ ಬಂದಿರುವ ಆರೋಗ್ಯ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಪ್ರಯತ್ನ ಪಡಬೇಕು. ಯಾಕೆಂದರೆ ನೈಸರ್ಗಿಕವಾಗಿ ಸಿಗುವ ಆಹಾರ ಪದಾರ್ಥಗಳಿಂದ ದೇಹಕ್ಕೆ ಯಾವುದೇ ರೀತಿಯ ಅಡ್ಡಪರಿಣಾಮಗಳು ಕೂಡ ಎದುರಾಗುವುದಿಲ್ಲ,ಪ್ರಾದೇಶಿಕವಾಗಿ ಬೆಳೆಯುವ ಆಹಾರ ಪದ್ದತಿಯನ್ನು ರೂಢಿಸಿಕೊಳ್ಳುವುದರಿಂದ ದೈಹಿಕವಾಗಿ ಆರೋಗ್ಯಕ್ಕೆ ಹೆಚ್ಚಿನ ಲಾಭ ಸಿಗಬಹುದು ಎಂದರು. ಮಧುಮೇಹ ಕಾಯಿಲೆ ಇರುವವರು ಯಾವುದನ್ನು ತಿನ್ನಬೇಕು ಎನ್ನುವುದಕ್ಕಿಂತ ಯಾವುದನ್ನು ತಿನ್ನಬಾರದು ಎಂಬುದರ ಬಗೆಗೆ ಹೆಚ್ಚಿನ ಕಾಳಜಿ ವಹಿಸುವುದು ಒಳ್ಳೆಯದು. ಆಹಾರ ಇರಲಿ,ಇಲ್ಲವೇ ಹಣ್ಣುಗಳಿರಲಿ ಯಾವುದನ್ನು ಎಷ್ಟು ಬಳಸಬೇಕು ಯಾವ ಹಣ್ಣುಗಳಿಂದ ಕೊಂಚ ಅಂತರ ಕಾಯ್ದುಕೊಳ್ಳಬೇಕು ಎಂಬುದನ್ನು ಅರಿಯುವುದು ಒಳ್ಳೆಯದು ಎಂದರು.

ತಿಂಗಳ ಮಾಮನ ತೇರು ಕಾರ್ಯಕ್ರಮವನ್ನು ಶಂಭುನಾಥ ಶ್ರೀ ಉದ್ಘಾಟಿಸಿದರು.

ಹಾಸನ ಮಠದ ಶ್ರೀ ಶಂಭುನಾಥ ಸ್ವಾಮೀಜಿ ಮಾತನಾಡಿ, ಮಧುಮೇಹವನ್ನು ನಿಯಂತ್ರಣ ಮಾಡುವುದು ಸ್ವಲ್ಪ ಕಷ್ಟವಾದರೂ, ಶರೀರಕ್ಕೆ ಒಗ್ಗುವ ಆಹಾರ ಶೈಲಿಯನ್ನು ರೂಢಿಸಿಕೊಂಡು ಉತ್ತಮ ಆರೋಗ್ಯ ಕಾಯ್ದುಕೊಳ್ಳಲು ಸಾಧ್ಯವಿದೆ ಎಂದರು. ಹಾಸನ ರೆಡ್ ಕ್ರಾಸ್ ಅಧ್ಯಕ್ಷ ಹೆಮ್ಮಿಗೆ ಮೋಹನ್,ರಾಜ್ಯ ಒಕ್ಕಲಿಗರ ಸಂಘದ ಸದಸ್ಯ ರಘುಗೌಡ, ಸಮಾಜ ಸೇವಕ ಲಕ್ಷ್ಮೀಕಾಂತ್, ಶ್ರೀಮಠದ ವ್ಯವಸ್ಥಾಪಕ ಚಂದ್ರಶೇಖರ್, ಕಸಾಪ ಗೌರವ ಕಾರ್ಯದರ್ಶಿ ಬಿ.ಆರ್ ಬೊಮ್ಮೇಗೌಡ, ಡಾ.ದೇವಿಪ್ರಸಾದ್,ಜಯಲಕ್ಷ್ಮೀ ರಾಜಣ್ಣ, ಶಿವರಾಮೇಗೌಡ ಇದ್ದರು.

ರಾಜಕಾರಣಕ್ಕೆ ಬಂದು ಆರೋಪಿಸಿ

ಜಸ್ಟೀಸ್ ಗೋಪಾಲಗೌಡರ ಟೀಕೆಗೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಂ.ಸಿ ಸುಧಾಕರ್ ಉತ್ತರ

ಚಿಕ್ಕಬಳ್ಳಾಪುರ: ಜಸ್ಟೀಸ್ ಗೋಪಾಲಗೌಡರು ಈ ತಲೆಮಾರಿನವರಲ್ಲ. ಹಿಂದಿನ ತಲೆಮಾರಿನವರು.ಅವರು ಹಿರಿಯರಿದ್ದಾರೆ. ಸುಪ್ರಿಂಕೋರ್ಟಿನ ವಿಶ್ರಾಂತ ನ್ಯಾಯಾಧೀಶರಿದ್ದಾರೆ.ಬಹಳ ಗೌರದಿಂದಲೇ ಹೇಳುತ್ತಿದ್ದೇನೆ. ರಾಜಕಾರಣ ಮಾಡುವಂತಿದ್ದರೆ ನೇರವಾಗಿ ಬಂದು ಮಾಡಿ.ಹಿಂದಿನಿಂದ ಮುಗ್ಧರನ್ನು ಪ್ರಚೋದನೆ ಮಾಡಿ ನನ್ನ ಮೇಲೆ ಇಲ್ಲಸಲ್ಲದ ಆರೋಪ ಮಾಡಬೇಡಿ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಂ.ಸಿ ಸುಧಾಕರ್ ಕಿಡಿಕಾರಿದರು.

ತಾಲೂಕಿನ ನಂದಿಗಿರಿಧಾಮದ ತಪ್ಪಲಿನಲ್ಲಿರುವ ದಿವ್ಯಶ್ರೀ ವಿಸ್ಪರ್ ಆಫ್ ವಿಂಡ್ಸ್ ರೆಸಾರ್ಟ್ ಆವರಣದಲ್ಲಿ ಯುವಶಕ್ತಿ ಮತ್ತು ಕ್ರೀಡಾ ಇಲಾಖೆ , ರಾಜ್ಯಪ್ರವಾಸೋದ್ಯಮ ಅಭಿವೃದ್ಧಿ ನಿಗಮ , ಪ್ರವಾಸೋದ್ಯಮ ಇಲಾಖೆಯ ಸಹಯೋಗದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದರು.

ಚಿಂತಾಮಣಿಯಲ್ಲಿ ನಡೆದ ಉದ್ಯೋಗ ಮೇಳ ಕಾರ್ಯಕ್ರಮದಲ್ಲಿ ಜಸ್ಟೀಸ್ ಗೋಪಾಲಗೌಡರು ಜಿಲ್ಲಾ ಉಸ್ತುವಾರಿ ಸಚಿವರ ವಿರುದ್ಧ ಮಾಡಿದ ಟೀಕೆಗಳಿಗೆ ಉತ್ತರಿಸಿದರು.

ಚಿಂತಾಮಣಿಯಲ್ಲಿ ಇತ್ತೀಚೆಗೆ ನಡೆಯುತ್ತಿರುವ ಕೆಲವು ಘಟನಾವಳಿಗೆ ಗೋಪಾಲಗೌಡರು ಪ್ರಚೋದನೆ ಕೊಡುವ ಕೆಲಸ ಮಾಡುತ್ತಿದ್ದಾರೆ.ಉನ್ನತ ಶಿಕ್ಷಣ ಇಲಾಖೆಯಲ್ಲಿ ನಾನೆಷ್ಟು ಉದ್ಯೋಗ ಕೊಡಿಸಿದ್ದೇನೆ ಎಂಬ ಬಗ್ಗೆ ಮಾತನಾಡಿದ್ದಾರೆ. ನನ್ನ ಇಲಾಖೆಯಲ್ಲಿ ನಾನು ಏನು ಮಾಡುತ್ತಿದ್ದೇನೆ ಎಂಬುದು ನನಗೆ ಗೊತ್ತಿದೆ.ಇವರಿಗೆ ನಾನು ಉತ್ತರ ಕೊಡುವ ಅವಶ್ಯಕತೆಯಿಲ್ಲ ಎಂದು ವ್ಯಂಗ್ಯವಾಡಿದರು.

ನನ್ನ ಕ್ಷೇತ್ರದಲ್ಲಿ ದೊಡ್ಡ ಮಟ್ಟದಲ್ಲಿ ಕೈಗಾರಿಕೆಗಳನ್ನು ತರಬೇಕು ಎಂದು 10 ವರ್ಷದ ಹಿಂದೆಯೇ ಪ್ರಯತ್ನಿಸಿದವನು ನಾನು. ಕೈಗಾರಿಕೆಗಳು ಇಲ್ಲಿ ಬರಲು ನೀವು ಸಹಕಾರ ನೀಡಲಿಲ್ಲ,ರೈತರಿಗೆ ನೀಡಬೇಕಾದ ಪರಿಹಾರದ ಸಮಸ್ಯೆ ನೀವಾರಣೆ ಮಾಡಲಿಲ್ಲ.

ಹಿಂದಿನಿಂದ ಮುಗ್ಧರನ್ನು ಪ್ರಚೋದನೆ ಮಾಡಿ ನನ್ನ ಮೇಲೆ ಇಲ್ಲಸಲ್ಲದ ಆರೋಪ ಮಾಡಬೇಡಿ. ಕ್ಷೇತ್ರದಲ್ಲಿ ಈ ಎರಡು ವರ್ಷದಲ್ಲಿ ಆಗಿರುವ ಅಭಿವೃದ್ಧಿ ಕಣ್ಣಾರೆ ನೋಡಿ ಆಮೇಲೆ ತಾವು ತಮ್ಮ ಅಭಿಪ್ರಾಯ ಹೇಳಿದರೆ ಬಹುಶಃ ನಿಮ್ಮ ಘನತೆ ಗೌರವಕ್ಕೆ ಶೋಭೆ ತರಲಿದೆ ಎಂದರು.

ಸಂಸದ ಡಾ.ಸುಧಾಕರ್ ದಲಿತ ವಿರೋಧಿಯಲ್ಲ

ಚಿಕ್ಕಬಳ್ಳಾಪುರ: ಕಾರು ಚಾಲಕ ಬಾಬು ಆತ್ಮಹತ್ಯೆ ಪ್ರಕರಣದಲ್ಲಿ ಸಂಸದ ಡಾ.ಕೆ.ಸುಧಾಕರ್ ಅವರನ್ನು ಆರೋಪಿಯಾಗಿಸಿರುವ ಕಾಂಗ್ರೆಸ್ ನಾಯಕರು ಅವರನ್ನು ದಲಿತ ವಿರೋಧಿ ಎಂಬಂತೆ ಬಿಂಬಿಸುತ್ತಿದ್ದಾರೆ.ಕಾಂಗ್ರೆಸ್ ಮುಖಂಡರ ಆರೋಪ ನಿರಾಧಾರ ಎಂದು ಬಿಜೆಪಿ ಮುಖಂಡ ಎಸ್ಟಿ ಸಮುದಾಯದ ಮುಖಂಡ ಗಂಗರೇಕಾಲುವೆ ಮೂರ್ತಿ ತಿಳಿಸಿದರು.

ಡಾ.ಕೆ.ಸುಧಾಕರ್ ಬೆಂಬಲಿತ ದಲಿತ ಮುಖಂಡರು ನಡೆಸಿದ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು.

ಮೃತ ಬಾಬು ಕುಟುಂಬದ ಬಗ್ಗೆ ನಮಗೆ ಅಪಾರವಾದ ಅನುಕಂಪವಿದೆ. ಆ ಕುಟುಂಬಕ್ಕೆ ನ್ಯಾಯ ಒದಗಿಸಲು ನಾವು ಕೂಡ ಮುಂದೆ ನಿಲ್ಲುತ್ತೇವೆ. ಆದರೆ ಶಾಸಕ,ಮತ್ತು ಸಚಿವರು ಸಾವಿನ ಮನೆಯಲ್ಲಿ ರಾಜಕೀಯ ಮಾಡುವುದನ್ನು ನಿಲ್ಲಿಸಬೇಕು.ನಮ್ಮ ನಾಯಕರ ಏಳಿಗೆ ಸಹಿಸದೆ ಅವರ ಮೇಲೆ ಅಟ್ರಾಸಿಟಿ ಕೇಸು ದಾಖಲಿಸುವ ಬದಲಿಗೆ,ಬೇರೆ ಏನಾದರೂ ಹುಡುಕಿ, ನೀವು ಏನೇ ಮಾಡಿದರೂ ನಮ್ಮ ನಾಯಕದ್ದು ಅಪರಂಜಿಯ ವ್ಯಕ್ತಿತ್ವ. ವಿಧಾನ ಸಭೆ ಚುನಾವಣೆಯಲ್ಲಿ ಸೋತರೂ ಲೋಕಸಭೆಯಲ್ಲಿ ಗೆದ್ದು ರಾಷ್ಟ್ರನಾಯಕರಾಗಿದ್ದಾರೆ. ಅಂತಹವರ ವಿರುದ್ಧ ಬೀದಿಯಲ್ಲಿ ನಿಂತಿರುವ ಯರ‍್ಯಾರೋ ಹಗುರವಾಗಿ ಮಾತನಾಡುವುದು ನಿಲ್ಲಿಸಬೇಕು. ಇಲ್ಲದಿದ್ದಲ್ಲಿ ಪರಿಣಾಮ ನೆಟ್ಟಗಿರುವುದಿಲ್ಲ ಎಂದು ಎಚ್ಚರಿಕೆ ನೀಡಿದರು.

ಸುದ್ದಿಗೋಷ್ಟಿಯಲ್ಲಿ ಬಿಜೆಪಿ ಬೆಂಬಲಿತ ದಲಿತ ಮುಖಂಡರು ಮಾತನಾಡಿದರು.

ಟಿಎಪಿಸಿಎಂಎಸ್ ಅಧ್ಯಕ್ಷ ಆವುಲಕೊಂಡರಾಯಪ್ಪ ಮಾತನಾಡಿ, ಮೃತಬಾಬು ಎಲ್ಲೂ ಕೂಡ ಸುಧಾಕರ್ ಅವರ ಕೈಗೆ ಹಣಕೊಟ್ಟಿದ್ದೇನೆ ಎಂದು ಹೇಳಿಲ್ಲ. ಆದರೂ ದುರುದ್ದೇಶದಿಂದ ಅವರ ಮೇಲೆ ಎಫ್‌ಐಆರ್ ಮಾಡಿದ್ದಾರೆ.ಇದು ಸರಿಯಾದ ಬೆಳವಣಿಗೆಯಲ್ಲ ಎಂದರು.

ನಗರಸಭೆ ಉಪಾಧ್ಯಕ್ಷ ಗ್ಯಾಸ್ ನಾಗರಾಜ್, ಟಿಎಪಿಸಿಎಂಸ್ ನಿರ್ದೇಶಕ ಈರಚೆನ್ನಪ್ಪ,ಏರ್‌ಪೋರ್ಟ್ ಮುನಿರಾಜು, ಕೌನ್ಸಿಲರ್ ಸತೀಶ್,ಮಾಜಿ ನಗರಸಭಾ ಅಧ್ಯಕ್ಷ ಮುನಿಕೃಷ್ಣ, ಮುದ್ದೇನಹಳ್ಳಿ ಶಿವಕುಮಾರ್, ರಾಮ್‌ಸಾಗರ್ ಮತ್ತಿತರರು ಇದ್ದರು.

ಶ್ರೀ ಕ್ಷೇತ್ರ ಧರ್ಮಸ್ಥಳದ ಬಗ್ಗೆ ಅಪಪ್ರಚಾರ ಬೇಡ

ಮಧುಗಿರಿ: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ 840ನೇ ನಮ್ಮೂರು ನಮ್ಮ ಕೆರೆ ನಾಮಫಲಕ ಅನಾವರಣ ಕೆರೆ ಹಸ್ತಾಂತರ ಸೋಮವಾರ ನಡೆಯಿತು.

ತಾಲೂಕಿನ ಪುರವರ ವಲಯದ ತಾಳೆಕೆರೆ ಗ್ರಾಮದಲ್ಲಿ ಆರ್ಥಿಕ ಸಹಕಾರದೊಂದಿಗೆ ಗ್ರಾಮ ಪಂಚಾಯಿತಿ ಹಾಗೂ ಕೆರೆ ಸಮಿತಿ ಗ್ರಾಮಸ್ಥರ ಸಹಭಾಗಿತ್ವದೊಂದಿಗೆ ಕೆರೆ ಅಂಗಳದಲ್ಲಿ ಗಿಡ ನಾಟಿ ಮಾಡಲಾಯಿತು.

ರಾಜ್ಯ ಕೌಶಲ್ಯ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಮುರಳಿಧರ ಹಾಲಪ್ಪ ಮಾತನಾಡಿ, ಕ್ಷೇತ್ರದಿಂದ ಪೂಜ್ಯರಿಂದ ಅನುದಾನ, ಅನುಕೂಲ ಪಡೆದುಕೊಂಡು, ಇತ್ತೀಚಿನ ದಿನಗಳಲ್ಲಿ ಕೆಲವು ಕಿಡಿಗೇಡಿಗಳು ದುಷ್ಕೃತ್ಯ ನಡೆಸುತ್ತಿದ್ದು,ಇದರ ವಿರುದ್ಧ ನಾವೆಲ್ಲರೂ ಸಿಡಿದು ನಿಲ್ಲುವ ಕಾಲ ಬಂದಿದೆ ಎಂದರು.

ಮಧುಗಿರಿ ಪುರಸಭಾಧ್ಯಕ್ಷ ಲಾಲಾ ಪೇಟೆ ಮಂಜುನಾಥ್ ಮಾತನಾಡಿ, ಶ್ರೀ ಕ್ಷೇತ್ರಕ್ಕೆ ಹಾಗೂ ಪೂಜ್ಯರಿಗೆ ಬಂದಿರುವ ಸಂಕಷ್ಟ ಸೂರ್ಯನಿಗೆ ಮೋಡ ಬಂದ ಹಾಗೆ ಕ್ಷಣಿಕ ಮಾತ್ರ. ಮೋಡ ಸರಿದ ನಂತರ ಬೆಳಕು ಬರುವ ಹಾಗೇ ಎಲ್ಲವೂ ಸರಿದು ಹೋಗುತ್ತವೆ ಎಂದು ಆಶಯ ವ್ಯಕ್ತಪಡಿಸಿದರು.

ತಾಳೆಕೆರೆ ಗ್ರಾಮದಲ್ಲಿ ಧರ್ಮಸ್ಥಳ ಸಂಸ್ಥೆಯಿಂದ ಕೆರೆ ಹತ್ತಾಂತರ ಕಾರ್ಯಕ್ರಮ ನಡೆಯಿತು.

ಒಕ್ಕೂಟದ ಅಧ್ಯಕ್ಷೆ ರತ್ನಮ್ಮ ಉದ್ಘಾಟಿಸಿದರು. ವಲಯ ಮೇಲ್ವಿಚಾರಕ ಸುಬ್ರಮಣ್ಯ, ಕೃಷಿ ಮೇಲ್ವಿಚಾರಕ , ಕುಮಾರ್ ಟಿ.ಆರ್., ಸೇವಾ ಪ್ರತಿನಿಧಿ ಜಯಮ್ಮ, ಅನ್ನಪೂರ್ಣ, ಲಕ್ಷ್ಮಿ,ರವಿ ,ರಾಕೇಶ್, ಧಾರ್ಮಿಕ ಮುಖಂಡ ಎಂ.ಜಿ.ಶ್ರೀನಿವಾಸ್ ಮೂರ್ತಿ, ಕ್ಷೇತ್ರ ಯೋಜನಾಧಿಕಾರಿ ದಿನೇಶ್ ಕುಮಾರ್, ಜನಜಾಗೃತಿ ಪದಾಧಿಕಾರಿಗಳಾದ ಲಿಂಗರೆಡ್ಡಿ, ಸಹನಾ ನಾಗೇಶ್,ಲತಾ ಪ್ರದೀಪ್ ಕೆರೆ ಸಮಿತಿ ಅಧ್ಯಕ್ಷ ನಾಗೇಶ್,ಉಪಾಧ್ಯಕ್ಷಪುಟ್ಟ ಸೋಮಪ್ಪ,ಗ್ರಾಪಂ ಅಧ್ಯಕ್ಷ ವೆಂಕಟೇಶ್ ಇದ್ದರು.

ಪ್ರಮಾಣ ಪತ್ರ

ನಾನು ತ್ಯಾಗರಾಜ್ ಬಿನ್ ಲೇಟ್ ತಿಮ್ಮಯ್ಯ, ವಯಸ್ಸು ಸುಮಾರು 57 ವರ್ಷ ವಾಸ : ದೇವಿಶೆಟ್ಟಿಹಳ್ಳಿ ಗ್ರಾಮ, ನಂದಿ ಹೋಬಳಿ, ಚಿಕ್ಕಬಳ್ಳಾಪುರ ತಾಲ್ಲೂಕು ಮತ್ತು ಜಿಲ್ಲೆ ಈ ವಿಳಾಸದಲ್ಲಿ ವಾಸವಾಗಿರುವ ನಾನು ಈ ಮೂಲಕ ಪ್ರಮಾಣೀಕರಿಸುವುದೇನೆಂದರೆ,
ನಾನು ಈ ಮೇಲ್ಕಂಡ ವಿಳಾಸದಲ್ಲಿ ಖಾಯಂ ವಾಸಿಯಾಗಿದ್ದು, ಚಿಕ್ಕಬಳ್ಳಾಪುರ ಉಪನೋಂದಣಾಧಿಕಾರಿಗಳ ಕಛೇರಿಯಲ್ಲಿ ಜಮೀನಿನ ಕ್ರಯ ಪತ್ರದ ಸಂಖ್ಯೆ: 55–1966– 67ನೇ ಇಸವಿಯ ಕ್ರಯ ಪತ್ರ ಲೇಟ್ ತಿಮ್ಮಯ್ಯ ರವರ ಹೆಸರಿನಲ್ಲಿ ಇರುತ್ತದೆ. ಮನೆಯನ್ನು ಬದಲಾಯಿಸುವಾಗ ಆಕಸ್ಮಿಕವಾಗಿ ಕಳೆದು ಹೋಗಿರುತ್ತದೆ. ಈ ಸಂಬಂಧ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ದಿನಾಂಕ: 07/08/2025 ರಂದು ಅಧಿಕೃತವಾಗಿ ದೂರು ನೀಡಲಾಗಿದೆ. ಆದ್ದರಿಂದ ತಾವುಗಳು ನಮಗೆ ದ್ವಿತೀಯ ಪತ್ರವನ್ನು ನೀಡಬೇಕೆಂಬುದಾಗಿ ಹಾಗೂ ಈ ಪತ್ರ ಯಾರಿಗಾದರೂ ದೊರೆತಲ್ಲಿ ಮೊಬೈಲ್ ಸಂಖ್ಯೆ: 6362639897 ಕರೆಮಾಡಬಹುದೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.
ಈ ಪ್ರಮಾಣ ಪತ್ರವನ್ನು ಮಾಧ್ಯಮ ಪ್ರಕಟಣೆ ಮಾಡಿಸಿಕೊಳ್ಳಲು ಈ ಪ್ರಮಾಣ ಪತ್ರ ಅವಶ್ಯಕವಾಗಿರುತ್ತದೆ.
ಈ ಪ್ರಮಾಣ ಪತ್ರದಲ್ಲಿ ಕಂಡ ಎಲ್ಲಾ ಅಂಶಗಳು ಸತ್ಯವಾಗಿರುತ್ತದೆ ಎಂದು ಈ ಮೂಲಕ ನಾನು ಪ್ರಮಾಣೀಕರಿಸುತ್ತೇನೆ.

ಸಹಿ/– ಗುರುತು ಹಚ್ಚಿದವರು, ಸ್ಥಳ : ಚಿಕ್ಕಬಳ್ಳಾಪುರ ದಿನಾಂಕ: 09–08–2025 | ಪ್ರಮಾಣ ಮಾಡುವವರ ಸಹಿ | sworn to Before P.V. RAMACHANDRA REDDY BA.LLB Advocate & Notary GOVT. OF KARNATAKA CHIKKABALLAPUR REVENUE TALUK Mob: 9845215324

IN THE COURT OF THE CIVIL JUDGE AND J.M.F.C. AT KORATAGERE.
C.MIS.No.- 254/2025

-: Petitioners :- 1. **Gowribai** w/o Late sakrya naik. Aged about 65 years, R/o 2. **Ramanibai** D/o late Rama naik, Aged about 70 years. R/O Vaddagere Thanda, kasaba hobli. 3. **Tholachibai** w/o Late Ramachandra naik, Aged about 50 years. 4. **Manja naik** s/o Late Ramanaik naik, Aged about 58 years, 5. **Appaji naik** S/o Late. Rama naik, Aged about 55 years.
6. **Bahaddur** S/o Late Rama naik Aged about 53 years
Petitioners No-1.3.4.5.6 are R/O Karekalla Hatti, Kasaba hobli. Koratagere Taluk

-: V/S :-

Respondents:-
The Registrar- Birth and Death / Thahasildar, Koratagere tq,

PUBLIC NOTIFICATION

WHERE AS, the petitioners have filed the above petition to obtain the death certificates of petitioners 1 to 6 all are sons of Rama naik and Seetha bai. The petitioners 1 to 6 Father by name **Late Rama naik s/o Late naik** had died on **18-05-2003,** and The petitioners 1 to 6 Mother by name **Seetha bai w/o Late Rama naik had died on 09-02-2019** in the house of at Karekalla hatti village, Kasaba hobli, Koratagere taluk, it is hereby notify that whoever has interest or objections to obtain the death certificate of the above said person, appear in person or through your advocate on 12-09-2025 at 11.00 am in the above case, failing which the matter will be heard and written in your absence.
Given under my hand and seal of the court on this day at Koratagere.

BY ORDER OF THE COURT SD/ by SHERISTADAR CIVIL JUDGE AND JMFC COURT at KORATAGERE
H.C.Vrushabendraswamy,
Adv. for petitioners

ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಮಧುಗಿರಿ,
ಸೀಮಿಸ್ ಸಂಖ್ಯೆ –238/2025

ಅರ್ಜಿದಾರರು:–
1. **ಮುದ್ದಮ್ಮ** ಕೋಂ ಲೇಟ್ ನಾಗಣ್ಣ, 85 ವರ್ಷ
2. **ನಾಗರಾಜು** ಬಿನ್ ಲೇಟ್ ನಾಗಣ್ಣ, 65 ವರ್ಷ
3. **ಶ್ರೀರಾಮಯ್ಯ** ಬಿನ್ ಲೇಟ್ ನಾಗಣ್ಣ, 60 ವರ್ಷ
4. **ಕುಸುಮ.ಬಿ.ಸಿ.** ಕೋಂ ಲೇಟ್ ಬಸವರಾಜು., 40 ವರ್ಷ
5. **ಶ್ವೇತ** ಬಿನ್ ಲೇಟ್ ಬಸವರಾಜು, 20 ವರ್ಷ
6. **ಸಣ್ಣಮ್ಮ** ಬಿನ್ ಲೇಟ್ ನಾಗಣ್ಣ, 45 ವರ್ಷ
7. **ಪುಟ್ಟನರಸಮ್ಮ** ಬಿನ್ ಲೇಟ್ ನಾಗಣ್ಣ, 40 ವರ್ಷ

ಎಲ್ಲರ ವಾಸ: ಪೂಜಾರಹಳ್ಳಿ ಗ್ರಾಮ, ದೊಡ್ಡೇರಿ ಹೋಬಳಿ, ಮಧುಗಿರಿ ತಾಲ್ಲೂಕು, ತುಮಕೂರು ಜಿಲ್ಲೆ. ಹಾಲಿವಾಸ: ಮಧುಗಿರಿ ಟೌನ್.

ವಿರುದ್ಧ

ಮುಖ್ಯಾಧಿಕಾರಿಗಳು, ಪುರಸಭೆ, ಮಧುಗಿರಿ ಟೌನ್.

ಸಾರ್ವಜನಿಕ ಪತ್ರಿಕಾ ಪ್ರಕಟಣೆ

ಮೇಲ್ಕಂಡ 1ನೇ ಅರ್ಜಿದಾರರ ಮಗ, ಅರ್ಜಿದಾರ 2, 3, 6 & 7 ರವರ ಅಣ್ಣ, 4ನೇ ಅರ್ಜಿದಾರರ ಗಂಡ, 5ನೇ ಅರ್ಜಿದಾರರ ತಂದೆಯಾದ ಬಸವರಾಜು. ಎನ್. ಬಿನ್ ಲೇಟ್ ನಾಗಣ್ಣ ರವರು ದಿನಾಂಕ: 10–02–2021 ರಂದು ಮಧುಗಿರಿ ಟೌನ್ ಇಲ್ಲಿ ಮರಣ ಹೊಂದಿದ್ದು, ಈ ಮೇಲ್ಕಂಡ ಮೃತರ ಮರಣ ಸಮರ್ಥನಾ ಪತ್ರವನ್ನು ಪಡೆಯಲು ಈ ಮೇಲ್ಕಂಡ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಸದರಿ ಮೃತರ ಬೇರೆ ಯಾರಾದರೂ ವಾರಸುದಾರರು ಇದ್ದಲ್ಲಿ ದಿನಾಂಕ: 18/08/2025 ರಂದು ಬೆಳಿಗ್ಗೆ 11–00 ಗಂಟೆಗೆ ಖುದ್ದು ತಾವಾಗಲೀ ಅಥವಾ ತಮ್ಮ ವಕೀಲರ ಮುಖಾಂತರವಾಗಲೀ ಹಾಜರಾಗಿ ತಕರಾರು ಸಲ್ಲಿಸಬಹುದು. ಇಲ್ಲವಾದಲ್ಲಿ ಪ್ರಕರಣವನ್ನು ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು. 2025ನೇ ವರ್ಷದ ಆಗಸ್ಟ್ ತಿಂಗಳ 06 ನೇ ದಿನ.

ನ್ಯಾಯಾಲಯದ ಅಪ್ಪಣೆಯ ಮೇರೆಗೆ ಶಿರಸ್ತೆದಾರರು, ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.ನ್ಯಾಯಾಲಯ ಮಧುಗಿರಿ.

ಅರ್ಜಿದಾರರ ಪರ ವಕೀಲರು.
ಶಿವದಾಸ್ ಎನ್(ಎನ್.ಎಸ್.)
ವಕೀಲರು, ಮಧುಗಿರಿ

ಜೀವನದ ಕಷ್ಟ ಕಾಲಕ್ಕೆ ಜೀವ ವಿಮೆ ಆಸರೆ

ಕೋಲಾರದ ಬೆಳ್ಳೂರಲ್ಲಿ ನಡೆದ ಆರ್ಥಿಕ ಸೇರ್ಪಡೆ ಕಾರ್ಯಕ್ರಮದಲ್ಲಿ ಜೀವನ ಜ್ಯೋತಿ ಭಿಮಾ ಯೋಜನೆ ಫಲಾನುಭವಿಗೆ 2 ಲಕ್ಷ ರೂ ಚೆಕ್ ವಿತರಿಸಲಾಯಿತು.

ಕೋಲಾರ: ನಮ್ಮ ಜೀವನದ ಕಷ್ಟ ಕಾಲ ಹಾಗೂ ಇಳಿವಯಸ್ಸಿನಲ್ಲಿ ಆಸರೆಯಾಗಿ ನಿಲ್ಲುವ ವಿಮೆಗಳನ್ನು ಕಡ್ಡಾಯವಾಗಿ ಪ್ರತಿಯೊಬ್ಬರು ಮಾಡಿಸಬೇಕು ಎಂದು ಆರ್‌ಬಿಐ ಬ್ಯಾಂಕ್ ಅಧಿಕಾರಿ ಶೀಲ ಪ್ರಿಯಾ ಗೌತಮ್ ಹೇಳಿದರು.

ತಾಲ್ಲೂಕಿನ ಬೆಳ್ಳೂರು ಗ್ರಾಪಂ ನಲ್ಲಿ ಜಿಲ್ಲಾ ಲೀಡ್ ಬ್ಯಾಂಕ್‌ನಿಂದ ಆಯೋಜಿಸಿದ್ದ ಆರ್ಥಿಕ ಸೇರ್ಪಡೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಪ್ರಧಾನ ಮಂತ್ರಿ ಜೀವನ ಜ್ಯೋತಿ ಭಿಮಾ ಯೋಜನೆ ಹಾಗೂ ಪ್ರಧಾನ ಮಂತ್ರಿ ಸುರಕ್ಷಾ ಭಿಮಾ ಯೋಜನೆ ಹಾಗೂ ಅಟಲ್ ಪಿಂಚಣಿ ಯೋಜನೆಗಳು ಸಾರ್ವಜನಿಕರಿಗೆ ತುಂಬಾ ಉಪಯೋಗವಾಗಲಿದ್ದು, ಪ್ರತಿಯೊಬ್ಬರು ನೋಂದಣಿ ಮಾಡಿಸಿಕೊಳ್ಳಬೇಕು ಎಂದು ತಿಳಿಸಿದರು. ಜಿಲ್ಲಾ ಲೀಡ್ ಬ್ಯಾಂಕ್ ವ್ಯವಸ್ಥಾಪಕ ಮಹದೇವ್ ಜೋಶಿ ಮಾತನಾಡಿ, ಕೇಂದ್ರ ಸರ್ಕಾರ ಜಾರಿಗೆ ತಂದಿರುವ ವಿಮಾ ಯೋಜನೆಗಳ ಮಹತ್ವ ಪ್ರತಿಯೊಬ್ಬರು ಅರಿತು, ಬ್ಯಾಂಕ್ ಖಾತೆ ಹೊಂದಿರುವ ಶಾಖೆಗಳಿಗೆ ಹೋಗಿ ನೊಂದಣಿ ಮಾಡಿಸಿದರೆ, ಭವಿಷ್ಯದಲ್ಲಿ ಅನುಕೂಲವಾಗಲಿದೆ ಎಂದು ತಿಳಿಸಿದರು. ವಾರ್ಷಿಕವಾಗಿ ಪ್ರಧಾನಮಂತ್ರಿ ಜೀವನ ಜ್ಯೋತಿ ಭಿಮಾ ಯೋಜನೆಗೆ ರೂ.436 ಹಾಗೂ ಸುರಕ್ಷಾ ಭಿಮಾ ಯೋಜನೆಗೆ ರೂ.20 ಗಳ ಕಡಿಮೆ ಪ್ರೀಮಿಯಂ ಇವುಗಳಿಂದ ಹೆಚ್ಚಿನ ಸೌಲಭ್ಯವಿದೆ ಎಂದರು. ಪಿಡಿಒ ಸಂಪತ್ ರಾಜು ಮಾತನಾಡಿ, ಜೀವ ವಿಮೆ ಮಾಡಿಸಿ ನಿಶ್ಚಿಂತ ಜೀವನ ಸಾಗಿಸಬೇಕೆಂದು ಮನವಿ ಮಾಡಿದರು. ಯೂನಿಯನ್ ಬ್ಯಾಂಕ್ ಅಧಿಕಾರಿ ರಮ್ಯ, ಆರ್ಥಿಕ ಸಾಕ್ಷರತಾ ಕೇಂದ್ರದ ಸಲಹೆಗಾರ್ತಿ ವಿಶಾಲಾಕ್ಷಿ, ಪದ್ಮಾವತಿ ಇದ್ದರು.

ವಿದ್ಯುತ್ ದೀಪಗಳ ಬಗ್ಗೆ ಅಸಡ್ಡೆ

ತಿಪಟೂರು: ಲಕ್ಷ ಲಕ್ಷ ಖರ್ಚು ಮಾಡಿ ನಗರ ಪ್ರದೇಶದ ಕೆಲ ಭಾಗಗಳಲ್ಲಿ ಅಳಹುಡಿಸಿರುವ ಹೈ ಮಾರ್ಟ್ ವಿದ್ಯುತ್ ದೀಪದ ಕಂಬಗಳು 2 ವರ್ಷ ಕಳೆದರೂ ಸಾರ್ವಜನಿಕರ ಉಪಯೋಗಕ್ಕೆ ಬಾರದಂತಾಗಿದೆ.

ನಗರದ ಹೃದಯ ಭಾಗದಲ್ಲಿ ಇರುವ ಕೆಎಸ್ ಆರ್‌ಟಿಸಿ ಬಸ್ ನಿಲ್ದಾಣದ ಮುಂಭಾಗ ಸೇರಿದಂತೆ ಗೋವಿನಪುರ ಸರ್ಕಲ್, ಹರಳಿ ಮರ ಸರ್ಕಲ್, ತ್ರಿಮೂರ್ತಿ ಚಿತ್ರಮಂದಿರದ ಮುಂಭಾಗ ಒಳಗೊಂಡಂತೆ ನಗರದ ಕೆಲ ಪ್ರದೇಶಗಳಲ್ಲಿ ಅಳವಡಿಸಿರುವ ಹೈ ಮಾರ್ಟ್ಸ್ ವಿದ್ಯುತ್ ದೀಪಗಳು ರಾತ್ರಿ ವೇಳೆಯಲ್ಲಿ ಸಾರ್ವಜನಿಕರಿಗೆ ದಾರಿ ದೀಪವಾಗಿ ಬೆಳಕು ಚೆಲ್ಲಿ ನಗರದ ಸೌಂದರ್ಯವನ್ನು ಹೆಚ್ಚಿಸಬೇಕಿದ್ದ ಹೈ ಮಾರ್ಟ್ಸ್ ದೀಪಗಳು ಸಾರ್ವಜನಿಕರ ಅನುಕೂಲಕ್ಕೆ ಬಾರದೆ ತುಕ್ಕು ಹಿಡಿಯುವಂತಹ ಸ್ಥಿತಿ ತಲುಪುತ್ತಿವೆ.

ನಗರಸಭೆ ವತಿಯಿಂದ ಅಳವಡಿಸಿರುವ ಈ ಹೈ ಮಾರ್ಟ್ಸ್ ದೀಪಗಳ ಬಗ್ಗೆ ನಿರ್ಲಕ್ಷತನ ತೋರುತ್ತಿರುವ ಇಲಾಖೆ ವಿರುದ್ಧ ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸುವುದರ ಜೊತೆಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಮತ್ತು ರಾಜಕಾರಣಿಗಳಿಗೆ ಈವರೆಗೂ ಸೇರಬೇಕಿರುವ ಕಮಿಷನ್ ಸೇರಿಲ್ಲವೇನು ? ಅಥವಾ ರಾಜಕೀಯ ಪಿತೂರಿ ಇರಬಹುದು! ಅದಕ್ಕಾಗಿ ಇಷ್ಟೊಂದು ನಿರ್ಲಕ್ಷತನ ತೋರುತ್ತಿದ್ದಾರೆ ಎಂದು ಸಾರ್ವಜನಿಕ ವಲಯದಲ್ಲಿ ಕೇಳಿ ಬರುತ್ತಿರುವ ಮಾತು. ಅದೇನೇ ಇರಲಿ ಸಾರ್ವಜನಿಕರ ತೆರಿಗೆ ಹಣದಿಂದ ಅಳವಡಿಸಿರುವ ವಿದ್ಯುತ್ ದೀಪಗಳ ಕಡೆ ಕೂಡಲೇ ಸಂಬಂಧಪಟ್ಟ ಇಲಾಖೆಯು ಇತ್ತ ಗಮನಹರಿಸಿ, ಹೈ ಮಾರ್ಟ್ಸ್ ದೀಪಗಳಿಗೆ ಹಿಡಿದಿರುವ ಗ್ರಹಣಕ್ಕೆ ಮುಕ್ತಿ ಕೊಡಬೇಕೆಂದು ಸಾರ್ವಜನಿಕರು ವಿನಂತಿಸಿಕೊಂಡಿದ್ದಾರೆ.

ವಿನಾಕಾರಣ ಕೇಸು

ಚಿಂತಾಮಣಿ: ವಿಧಾನಸಭಾ ಕ್ಷೇತ್ರದಲ್ಲಿ ಮುಂದಿನ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ವೇಣುಗೋಪಾಲ್ ರವರನ್ನು ಗೆಲ್ಲಿಸುವ ಮೂಲಕ ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬರುವುದು ಖಚಿತ ಎಂದು ಬಿಜೆಪಿ ನೂತನ ಜಿಲ್ಲಾಧ್ಯಕ್ಷ ಸೀಕಲ್ ರಾಮಚಂದ್ರಗೌಡ ಹೇಳಿದರು.

ಚಿಂತಾಮಣಿ ವಿಧಾನಸಭಾ ಕ್ಷೇತ್ರದ ಬಿಜೆಪಿ ವಿವಿಧ ಘಟಕಗಳ ಪದಾಧಿಕಾರಿಗಳ ಆಯ್ಕೆ ಹಾಗೂ ನೂತನ ಜಿಲ್ಲಾಧ್ಯಕ್ಷ ಸೀಕಲ್ ರಾಮಚಂದ್ರಗೌಡರಿಗೆ ಅಭಿನಂದನಾ ಸಮಾರಂಭದಲ್ಲಿ ಅಭಿನಂದನಾ ಸನ್ಮಾನವನ್ನು ಸ್ವೀಕರಿಸಿ ಮಾತನಾಡುತ್ತಿದ್ದರು.ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷವು ನಿರ್ನಾಮವಾಗುವ ಮೂಲಕ ಕಾಂಗ್ರೆಸ್ ಮುಕ್ತ ರಾಜ್ಯವನ್ನಾಗಿ ಮಾಡಲು ನಾವೆಲ್ಲರೂ ಪಣತೊಡೋಣ ಎಂದ ಅವರು ರಾಜ್ಯದಲ್ಲಿ ಭ್ರಷ್ಟ ಕಾಂಗ್ರೆಸ್ ವಿನಾಕಾರಣ ಬಿಜೆಪಿ ಮುಖಂಡರ ಮೇಲೆ ಕೇಸುಗಳನ್ನು ದಾಖಲಿಸುವ ಮೂಲಕ ದೌರ್ಜನ್ಯ ದಬ್ಬಾಳಿಕೆ ಮಿತಿ ಮೀರುತ್ತಿದ್ದು ಇದಕ್ಕೆ ಕಡಿವಾಣ ಹಾಕಲು ಬಿಜೆಪಿ ಪಕ್ಷ ಅಧಿಕಾರಕ್ಕೆ ಬರಬೇಕಾಗಿದ್ದು ಆ ನಿಟ್ಟಿನಲ್ಲಿ ಕಾರ್ಯಕರ್ತರು ಶ್ರಮವಹಿಸಿ ಪಕ್ಷವನ್ನು ಗಟ್ಟಿಗೊಳಿಸಲು ಮುಂದಾಗಬೇಕೆಂದು ತಿಳಿಸಿದರು.

ಮಾಜಿ ಸಂಸದ ಮುನಿಸ್ವಾಮಿ ಮಾತನಾಡಿದರು. ಬಿಜೆಪಿ ಪಕ್ಷದ ಮುಖಂಡರು ಹಾಗೂ ಸಮಾಜ ಸೇವಕ ಜಿ.ಎನ್.ವೇಣುಗೋಪಾಲ್, ಶಿಡ್ಲಘಟ್ಟ ವಿಧಾನಸಭಾ ಕ್ಷೇತ್ರದ ಗ್ರಾಮಾಂತರ ಮಂಡಲ ಅಧ್ಯಕ್ಷ ಆನಂದಗೌಡ ಸತ್ಯ ನಾರಾಯಣ ಮಹೇಶ್,ಅರುಣ್ ಬಾಬು,ಕೆ.ಎಂ. ರಾಜಶೇಖರ್‌ರೆಡ್ಡಿ,ತಾಲೂಕಾಧ್ಯಕ್ಷ ರಾಜಣ್ಣ ಮಹೇಶ್ ಬೈ,ಗೋವಿಂದ ಹಲವರು ಉಪಸ್ಥಿತರಿದ್ದರು.

ಸ್ವಂತ ಬೆವರಿನ ಮಾಸ್ ಲೀಡರ್ ಸಿಎಂ

ಜಿಲ್ಲಾ ಕಾಂಗ್ರೆಸ್‌ನಿಂದ ಸಿದ್ದರಾಮಯ್ಯರ 78ನೇ ಹುಟ್ಟುಹಬ್ಬ | ಹಿರಿಯ ಪತ್ರಕರ್ತ ದಿನೇಶ್ ಅಮೀನ್ ಮಟ್ಟು

ಮೈಸೂರು: ಮೈಸೂರು ನಗರ ಹಾಗೂ ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ಸಮಿತಿ ವತಿಯಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ 78ನೇ ವರ್ಷದ ಹುಟ್ಟುಹಬ್ಬದ ಕಾರ್ಯಕ್ರಮವನ್ನು ಚಿಕ್ಕಗಡಿಯಾರದ ಬಳಿ ಲಿಂಗತ್ವ ಅಲ್ಪಸಂಖ್ಯಾತರಿಗೆ ಎರಡನೇ ಹಂತದ ವಿಮಾ ಬಾಂಡ್ ವಿತರಣೆ ಮೂಲಕ ಮಾಡಲಾಯಿತು.

ಈ ವೇಳೆ ಮಾತನಾಡಿದ ಹಿರಿಯ ಪತ್ರಕರ್ತ ದಿನೇಶ್ ಅಮೀನ್ ಮಟ್ಟು, ರಾಜಕೀಯ ಪಕ್ಷಗಳ ನಾಯಕರು ಬಿದಿಗೆ ಬರಬೇಕು, ಆಗ ಮಾತ್ರ ಜನ ಸಾಮಾನ್ಯರ ಕಷ್ಟ ಸುಖ ಅರಿವಿಗೆ ಬರುತ್ತದೆ. ಸ್ವಾತಂತ್ರ್ಯ ಪೂರ್ವದಲ್ಲಿ ಸತ್ಯಾಗ್ರಹವನ್ನು ಬೀದಿಗೆ ತಂದವರು ಗಾಂಧಿ, ಹಾಗಾಗಿ ಗಾಂಧಿ ಎಂದಿಗೂ ಸಹ ಜನಮಾನಸದಲ್ಲಿ ಬೆರೆತು ಹೋಗಿದ್ದಾರೆ ಎಂದರು.

ರಾಜಕೀಯವಾಗಿ ದೇವರಾಜ ಅರಸು ಅವರು ಮಾಸ್ ಲೀಡರ್ ಆಗಲು ಸಾಧ್ಯವಾಗಲಿಲ್ಲ. ಏಕೆಂದರೆ, ಅವರು ಸಣ್ಣ ಸಮುದಾಯದಿಂದ ಬಂದವರು ಎಂಬ ಕಾರಣಕ್ಕೆ. ಅರಸು ಆಡಳಿತದಲ್ಲಿ ಮಾಸ್ ಆದರೆ ಹೊರತು ಮಾಸ್ ಲೀಡರ್ ಆಗಲಿಲ್ಲ. ಆದರೆ ಕೇಂದ್ರದಲ್ಲಿ ಸಾರ್ವಕಾಲಿಕವಾಗಿ ಇಂದಿರಾ ಗಾಂಧಿ ಮಾಸ್ ಲೀಡರ್ ಆಗಿದ್ದರು. ಅದೇ ರೀತಿ ಕರ್ನಾಟಕದಲ್ಲಿ ಸಿದ್ದರಾಮಯ್ಯಗೆ ಮಾಸ್ ಲೀಡರ್ ಇಮೇಜ್ ಬಂದಿದೆ. ಸಿದ್ದರಾಮಯ್ಯ ಮಾಸ್ ಲೀಡರ್ ಆಗಿದ್ದು ತನ್ನ ಬೆವರಿನಿಂದಲೇ ಹೊರತು ಕುಟುಂಬದ ಪ್ರಭಾವಳಿಯಿಂದಲ್ಲ ಎಂದರು.

ಜಿಲ್ಲಾ ಕಾಂಗ್ರೆಸ್‌ನಿಂದ ಸಿದ್ದರಾಮಯ್ಯರ 78ನೇ ಹುಟ್ಟುಹಬ್ಬವನ್ನು ಚಿಕ್ಕಗಡಿಯಾರದ ಬಳಿ ಲಿಂಗತ್ವ ಅಲ್ಪಸಂಖ್ಯಾತರಿಗೆ ವಿಮಾ ಬಾಂಡ್ ವಿತರಣೆ ಮೂಲಕ ಆಚರಿಸಲಾಯಿತು.

ಪ್ರತಾಪ್ ಸಿಂಹ, ಸಿದ್ದರಾಮಯ್ಯ ವಿರುದ್ಧವಾಗಿ ಪುಂಕಾನುಪುಂಕವಾಗಿ ಆರೋಪಗಳನ್ನು ಮಾಡಿದರೂ ಅದು ಆಧಾರರಹಿತವಾಗಿ ಬಿರುಗಾಳಿಯಂತೆ ತೂರಿ ಹೋದವು. ಸಿದ್ದರಾಮಯ್ಯ ಅವರ ವ್ಯಕ್ತಿತ್ವ 16 ಬಜೆಟ್‌ಗಳಲ್ಲಿ ಗೋಚರವಾಗುತ್ತದೆ ಎಂದು ಹೇಳಿದರು.

ಅನ್ನಭಾಗ್ಯಕ್ಕೆ 5 ವರ್ಷಗಳಲ್ಲಿ 12 ಸಾವಿರ ಕೋಟಿ ಖರ್ಚು ಮಾಡಿದ್ದರು. ಸಿದ್ದರಾಮಯ್ಯ ಅವರ ಆಡಳಿತ ಮತ್ತು ಆರ್ಥಿಕ ನೀತಿ ತಳಮಟ್ಟದಿಂದ ಕೂಡಿದೆ. ಹಾಗಾಗಿ ಅವರೊಬ್ಬ ಅಪ್ರತಿಮ ಪ್ರಜಾಪ್ರಭುತ್ವವಾದಿ. ಎಂದೂ ಪಕ್ಷ ಭೇದ ಮಾಡಿರುವುದನ್ನು ನಾವು ನೋಡಿಲ್ಲ. ಅವರ ವಿರುದ್ಧ ಮಾತನಾಡುವಾಗ ಸ್ವಲ್ಪ ನೋಡಿ ಮಾತನಾಡಬೇಕು. ಅವರಿಗೆ ಒಕ್ಕಲಿಗರ ವಿರೋಧಿ ಎಂದು ಹೇಳುವುದು ಹಾಸ್ಯಾಸ್ಪದ ಎಂದರು.

ದೇವೇಗೌಡರ ವಿರುದ್ಧ ಮಾತನಾಡಿದರೆ ಒಕ್ಕಲಿಗ ವಿರೋಧಿ ಅಂತ ಅಲ್ಲ, ಹಿಂದುತ್ವದ ವಿರೋಧಿ ಅಲ್ಲವೇ ಅಲ್ಲ. ನಾವು ಹಿಂದು ಆಗಬೇಕಾದರೆ ಏನು ಮಾಡಬೇಕು? ಬಿಜೆಪಿಗೆ ಸೇರಬೇಕಾ ಎಂಬ ಪ್ರಶ್ನೆ ಎತ್ತಿದರು.

ಸಾಮಾಜಿಕ ನ್ಯಾಯದ ಪ್ರಶ್ನೆ ಬಂದಾಗ ಎಲ್ಲರೂ ಸಿದ್ದರಾಮಯ್ಯರನ್ನು ನೋಡುತ್ತಾರೆ. ಅವರು ಸಾಮಾಜಿಕ ನ್ಯಾಯವನ್ನು ಬಿಟ್ಟು ಎಂದು ಕೂಡ ಮುಂದುವರೆದವರಲ್ಲ. ರಾಹುಲ್ ಗಾಂಧಿ ಅವರು ಮಾತನಾಡುವುದು ಸಿದ್ದರಾಮಯ್ಯ ಮಾತನಾಡಿದಂತೆ ಕಾಣುತ್ತದೆ. ರಾಹುಲ್ ಗಾಂಧಿ ಒಬ್ಬ ಅತ್ಯುತ್ತಮ ಪ್ರಜಾಪ್ರಭುತ್ವವಾದಿ. ಸಿದ್ದರಾಮಯ್ಯ ಹೈಕಮಾಂಡ್‌ನಿಂದ ಚೀಟಿ ಬಂದು ಮುಖ್ಯಮಂತ್ರಿ ಆದವರಲ್ಲ. ಶಾಸಕರ ಬಲದಿಂದ ಮುಖ್ಯಮಂತ್ರಿ ಆದವರು. ದುಡ್ಡು ಮಾಡಿದ್ದರೆ ದುಡ್ಡಿನ ಸಾಮ್ರಾಜ್ಯ ಉಳಿಸುಕೊಳ್ಳೋಕೆ ಹರಸಾಹಸ ಪಡಬೇಕಾಗುತ್ತೆ. ಅದರ ಗೋಜಿಗೆ ಹೋಗದ ಸಿದ್ದರಾಮಯ್ಯ ಶುದ್ಧ ಹಸ್ತದ ರಾಜಕಾರಣ ಮಾಡಿಕೊಂಡು ಬಂದಿದ್ದಾರೆ ಎಂದು ಸೂಚ್ಯವಾಗಿ ತಿಳಿಸಿದರು. ಮಾಜಿ ಮಂತ್ರಿ ಡಾ.ಬಿ.ಟಿ.ಲಲಿತ ನಾಯಕ್ ಮಾತನಾಡಿ, ನಾನು ಮೊದಲು ಜೆಡಿಎಸ್ ಪಕ್ಷದಲ್ಲಿ ಇದ್ದೆ. ಸಿದ್ದರಾಮಯ್ಯ ಮತ್ತು ಅವರ ಸ್ನೇಹಿತರು ಜೆಡಿಎಸ್ ಬಿಟ್ಟು ಬರುವಾಗ ನನ್ನನ್ನು ಆಹ್ವಾನಿಸಿದರು. ಆದರೆ, ನಾನು ಅಂದು ಬರಲಿಲ್ಲ. ಆದರೆ ಜೆಡಿಎಸ್ ಪಕ್ಷ ಬಿಜೆಪಿ ಜೊತೆ ಮೈತ್ರಿ ಮಾಡಿಕೊಂಡಾಗ ನಾನು ಜೆಡಿಎಸ್ ಬಿಟ್ಟೆ ಎಂದರು.

ಮಹಿಳಾ ಸಬಲೀಕರಣದ ವಿಚಾರದಲ್ಲಿ ಸಿದ್ದರಾಮಯ್ಯ ಎಂದೂ ರಾಜಿ ಮಾಡಿಕೊಂಡವರಲ್ಲ. ಮಹಿಳೆಯರ ಆರ್ಥಿಕ ಪ್ರಗತಿ ಮತ್ತು ಸ್ವಾವಲಂಬನೆಯ ಬದುಕಿಗಾಗಿ ಹಲವಾರು ಯೋಜನೆಗಳನ್ನು ನೀಡಿದ್ದಾರೆ. ಮಹಿಳೆಯರಿಗೆ ಕೊಟ್ಟಿರುವ ಯೋಜನೆ ಪರೋಕ್ಷವಾಗಿ ಪುರುಷರಿಗೆ ಲಭಿಸಿವೆ. ಸಮಾಜವಾದಿ ಗುಣ ಇರುವ ಸಿದ್ದರಾಮಯ್ಯ ಸರಳ ಜೀವನಕ್ಕೆ ಹೆಚ್ಚು ಒತ್ತು ಕೊಟ್ಟಿದ್ದಾರೆ. ಸರಕಾರಕ್ಕೆ ತಾಯಿ ಕರುಳು ಇರಬೇಕು, ವಿರೋಧ ಪಕ್ಷದವರ ಟೀಕೆಗೆ ತಲೆ ಕೆಡಿಸಿಕೊಳ್ಳಬೇಕಿಲ್ಲ. ಕೋಮುವಾದ ತೊಡೆದುಹಾಕುವುದೇ ನಮ್ಮ ಉದ್ದೇಶವಾಗಬೇಕು ಎಂದರು.

ಶಾಸಕ ಕೆ ಹರೀಶ್ ಗೌಡ, ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ.ಬಿ.ಜೆ.ವಿಜಯ್ ಕುಮಾರ್, ನಗರ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಆರ್.ಮೂರ್ತಿ ಮಾಜಿ ಮಂತ್ರಿ ಕೋಟೆ ಶಿವಣ್ಣ ಮತ್ತಿತರರು ಇದ್ದರು.

ಮೈಸೂರಿಗೆ ಮಾತ್ರ ನಾಯಕರಲ್ಲ

ಸಿದ್ದರಾಮಯ್ಯ ಮೈಸೂರಿಗೆ ಮಾತ್ರ ನಾಯಕರಲ್ಲ. ಅವರು ಇಡೀ ರಾಜ್ಯಕ್ಕೆ ಧೀಮಂತ ನಾಯಕ. ಲಿಂಗತ್ವ ಅಲ್ಪಸಂಖ್ಯಾತರಿಗೆ ಮೈತ್ರಿ ಯೋಜನೆ ತಂದವರು ಸಿದ್ದರಾಮಯ್ಯ. ದೀರ್ಘಕಾಲ ಹಣಕಾಸು ಸಚಿವರಾಗಿ ಜನಪ್ರಿಯ ಯೋಜನೆಗಳನ್ನು ನೀಡಿ ಜನರ ಜೊತೆ ಸಂವಾದ ಮಾಡುವ ಗುಣ ಬಳಸಿಕೊಂಡಿದ್ದಾರೆ. ಈ 78 ವರ್ಷದ ಇಳಿ ವಯಸ್ಸಿನಲ್ಲೂ ಅಷ್ಟೊಂದು ಕೆಲಸ ಹೇಗೆ ನಿಭಾಯಿಸುತ್ತಾರೆ ಎಂಬುದೇ ಆಶ್ಚರ್ಯಕರ ಸಂಗತಿ ಎಂದು ಹಿರಿಯ ಪತ್ರಕರ್ತ ದಿನೇಶ್ ಅಮೀನ್ ಮಟ್ಟು ಹೇಳಿದರು.

ಸಮಾಚಾರ ಸಣ್ಣದಲ್ಲ

ಕಾಡಾನೆ ದಾಳಿ ಕೇಸ್; ಪ್ರವಾಸಿಗನಿಗೆ ಶೋಧ

ಚಾಮರಾಜನಗರ: ಫೋಟೊ ಕ್ಲಿಕ್ಕಿಸುವ ಆಸೆಗೆ ವ್ಯಕ್ತಿಯ ಜೀವವೇ ಹೋಗುವ ಪರಿಸ್ಥಿತಿ ಎದುರಾಗಿದ್ದ ಘಟನೆ ಗುಂಡ್ಲುಪೇಟೆ ತಾಲೂಕಿನ ಬಂಡೀಪುರದ ಕೆಕ್ಕನಹಳ್ಳ ಸಮೀಪ ನಡೆದಿತ್ತು. ಕಾಡಾನೆಯ ಫೋಟೋ ತೆಗೆಯಲು ವಾಹನದಿಂದ ಇಳಿದಿದ್ದ ವೇಳೆ ಸಲಗವೊಂದು ಪ್ರವಾಸಿಗನ ಮೇಲೆ ದಾಳಿ ಮಾಡಿ ತುಳಿಯಲು ಯತ್ನಿಸಿತ್ತು. ಆನೆ ದಾಳಿಗೊಳಗಾದ ವ್ಯಕ್ತಿ ಪತ್ತೆಗೆ ಅರಣ್ಯ ಇಲಾಖೆ ಮುಂದಾಗಿದೆ. ಇಲ್ಲಿ ಪ್ರಾಣಿಗಳಿಗೆ ಆಹಾರ ನೀಡುವುದು, ಸೆಲ್ಫಿ ತೆಗೆಯುವುದು ದಂಡಾರ್ಹ ಆದ್ದರಿಂದ ಪ್ರವಾಸಿಗನ ಪತ್ತೆಗೆ ಅರಣ್ಯ ಇಲಾಖೆ ಮುಂದಾಗಿದೆ. ಸ್ಥಳೀಯ ಆಸ್ಪತ್ರೆಗಳನ್ನು ವಿಚಾರಿಸಿದ್ದು ಆತ ಸ್ಥಳೀಯ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದಿಲ್ಲ, ಆತನ ಪತ್ತೆಕಾರ್ಯ ನಡೆಸಲಾಗುತ್ತಿದೆ ಎಂದು ಅರಣ್ಯ ಇಲಾಖೆ ಅಧಿಕಾರಿ ತಿಳಿಸಿದ್ದಾರೆ.

ಈಶಾ: 17ನೇ ರೂರಲ್ ಪ್ರೀಮಿಯರ್ ಲೀಗ್

ಮೈಸೂರು: ಈಶಾ ಫೌಂಡೇಷನ್‌ನ 17ನೇ ವರ್ಷದ ಗ್ರಾಮೋತ್ಸವದ ಅಂಗವಾಗಿ ರೂರಲ್ ಪ್ರೀಮಿಯರ್ ಲೀಗ್ ಅನ್ನು ಆ.17ರಂದು ನಂಜನಗೂಡಿನ ಸರ್ಕಾರಿ ಜೂನಿಯರ್ ಕಾಲೇಜಿನಲ್ಲಿ ಆಯೋಜಿಸಲಾಗಿದೆ ಎಂದು ಫೌಂಡೇಷನ್‌ನ ಸಂಚಾಲಕ ಸ್ವಾಮಿ ಪುಲಕ್ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಭಾರತದಲ್ಲಿ ಕ್ರೀಡಾ ಸ್ಫೂರ್ತಿ ಹೆಚ್ಚಿಸುವ ಸಲುವಾಗಿ ಫೌಂಡೇಷನ್ ವತಿಯಿಂದ 7 ರಾಜ್ಯ ಮತ್ತು 1 ಕೇಂದ್ರಾಡಳಿತ ಪ್ರದೇಶದಲ್ಲಿ ಗ್ರಾಮೋತ್ಸವ ನಡೆಸಲಾಗುತ್ತಿದ್ದು, ಕರ್ನಾಟಕದಲ್ಲಿ 2024ರಿಂದ ಕ್ರೀಡಾಕೂಟ ನಡೆಯುತ್ತಿದೆ ಎಂದರು. ಗ್ರಾಮದಲ್ಲಿರುವ ಮಹಿಳೆಯರು ಸ್ವಯಂ ಪ್ರೇರಣೆಯಿಂದ ಥ್ರೋಬಾಲ್ ಪಂದ್ಯದಲ್ಲಿ ಭಾಗವಹಿಸುತ್ತಿದ್ದಾರೆ. ಆ.17ರಂದು ನಂಜನಗೂಡಿನಲ್ಲಿ ಪುರುಷರಿಗೆ ವಾಲಿಬಾಲ್, ಮಹಿಳೆಯರಿಗೆ ಥ್ರೋಬಾಲ್ ಆಯೋಜಿಸಲಾಗಿದ್ದು, 60ಕ್ಕೂ ಹೆಚ್ಚು ತಂಡಗಳು ಭಾಗವಹಿಸುತ್ತಿವೆ. ಫೈನಲ್‌ನಲ್ಲಿ ಬಹುಮಾನವಾಗಿ 5 ಲಕ್ಷ ನೀಡಲಾಗುತ್ತದೆ ಎಂದು ತಿಳಿಸಿದರು. ಫೈನಲ್ ಪಂದ್ಯಗಳು ಕೊಯಂಬತ್ತೂರಿನ ಈಶಾ ಯೋಗ ಕೇಂದ್ರದಲ್ಲಿ ಸೆ.21ರಂದು ನಡೆಯಲಿದ್ದು, ನೋಂದಣಿ ಮಾಡಿಕೊಳ್ಳುವವರು 8300030999ನ್ನು ಸಂಪರ್ಕಿಸಿ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಸ್ವಯಂ ಸೇವಕರಾದ ವಿಜಯಕುಮಾರಿ, ಸುಜಾತ ಆರ್.ಶೆಟ್ಟಿ, ದಿನೇಶ್, ಪೂರ್ಣಿಮ ಆನಂದ್ ಉಪಸ್ಥಿತರಿದ್ದರು.

ಮೊರಾರ್ಜಿ ಕಾಲೇಜು ಅರ್ಜಿ ಆಹ್ವಾನ

ಚಾಮರಾಜನಗರ: ಚಾಮರಾಜನಗರ ಜಿಲ್ಲೆಗೆ ಹೊಸದಾಗಿ ಗುಂಡ್ಲುಪೇಟೆ ಹಾಗೂ ಕೊಳ್ಳೇಗಾಲ ತಾಲೂಕಿಗೆ ಮಂಜೂರಾಗಿರುವ ಮೊರಾರ್ಜಿ ದೇಸಾಯಿ ವಸತಿ ವಿಜ್ಞಾನ ಕಾಲೇಜುಗಳಿಗೆ ಪ್ರಥಮ ಪಿಯುಸಿಗೆ ದಾಖಲಾತಿಗಾಗಿ ಅರ್ಜಿ ಆಹ್ವಾನಿಲಾಗಿದೆ. ವಿದ್ಯಾರ್ಥಿಗಳು ತೆರಕಣಾಂಬಿ, ತಿಮ್ಮರಾಜಿಪುರ ಮೊರಾರ್ಜಿ ದೇಸಾಯಿ ವಸತಿ ವಿಜ್ಞಾನ ಕಾಲೇಜಿನ ಪ್ರಥಮ ಪಿ.ಸಿ.ಎಂ.ಬಿ. ಕೋರ್ಸ್‌ಗಳಿಗೆ ಅರ್ಜಿ ಸಲ್ಲಿಸಲು ಆಗಸ್ಟ್ 16 ಕೊನೆಯ ದಿನವಾಗಿದೆ. ದಾಖಲಾತಿ ಹಾಗೂ ವಸತಿ ವ್ಯವಸ್ಥೆಯು ಉಚಿತವಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೊ.ಸಂ. 9945374405 ಹಾಗೂ ಮೊ.ಸಂ. 9741366336 ಅನ್ನು ಸಂಪರ್ಕಿಸುವಂತೆ ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕರು ತಿಳಿಸಿದ್ದಾರೆ.

ಅತಿಥಿ ಉಪನ್ಯಾಸಕರ ನೇಮಕ ಅರ್ಜಿ ಆಹ್ವಾನ

ಚಾಮರಾಜನಗರ: ಗುಂಡ್ಲುಪೇಟೆ ಹಾಗೂ ಕೊಳ್ಳೇಗಾಲ ತಾಲ್ಲೂಕಿಗೆ ಮಂಜೂರಾಗಿರುವ ಮೊರಾರ್ಜಿ ದೇಸಾಯಿ ವಸತಿ ವಿಜ್ಞಾನ ಕಾಲೇಜುಗಳಿಗೆ ತಾತ್ಕಾಲಿಕವಾಗಿ ಅತಿಥಿ ಉಪನ್ಯಾಸಕರ ಹುದ್ದೆಗೆ ಅರ್ಜಿ ಆಹ್ವಾನಿಲಾಗಿದೆ. ಕನ್ನಡ, ಇಂಗ್ಲೀಷ್, ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತ ಹಾಗೂ ಜೀವಶಾಸ್ತ್ರ ಉಪನ್ಯಾಸಕರ ಹುದ್ದೆಗಳಿಗೆ ಆಸಕ್ತ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಆಗಸ್ಟ್ 16 ಕೊನೆಯ ದಿನವಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೊ. ಸಂ. 9945374405 ಹಾಗೂ ಮೊ.ಸಂ. 9741366336 ಅನ್ನು ಸಂಪರ್ಕಿಸುವಂತೆ ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕರು ತಿಳಿಸಿದ್ದಾರೆ.

ನಾಳೆ ಲೋಕಾಯುಕ್ತ ಅಧಿಕಾರಿಗಳ ಭೇಟಿ

ಚಾಮರಾಜನಗರ: ಜಿಲ್ಲೆಯ ಲೋಕಾಯುಕ್ತ ಕಚೇರಿಯ ಅಧಿಕಾರಿಗಳು ಗುಂಡ್ಲುಪೇಟೆ ಕೇಂದ್ರದ ಪ್ರವಾಸಿ ಮಂದಿರಕ್ಕೆ (ಐ.ಬಿ) ಆಗಸ್ಟ್ 13 ರಂದು ಬೆಳಿಗ್ಗೆ 11 ಗಂಟೆಯಿಂದ ಮಧ್ಯಾಹ್ನ 1 ರವರೆಗೆ ಭೇಟಿ ನೀಡಿ ಸಾರ್ವಜನಿಕರಿಂದ ದೂರು ಅರ್ಜಿಗಳನ್ನು ಸ್ವೀಕರಿಸಿ, ವಿಚಾರಣೆ ಮಾಡುವರು. ನೌಕರರ ವಿರುದ್ಧ ಸಾರ್ವಜನಿಕರು ದೂರುಗಳನ್ನು ನಿಗದಿತ ನಮೂನೆ-1 ಮತ್ತು 2 ರಲ್ಲಿ ಭರ್ತಿಮಾಡಿ ನೀಡಬಹುದಾಗಿದೆ ಎಂದು ಪೊಲೀಸ್ ಉಪಾಧೀಕ್ಷಕರಾದ ಜಿ.ಎಸ್ ಗಜೇಂದ್ರ ಪ್ರಸಾದ್ ಅವರು ತಿಳಿಸಿದ್ದಾರೆ.

ಆರಾಧನಾ ಮಹೋತ್ಸವ

ಚಾಮರಾಜನಗರ: ನಗರದ ಶಂಕರಪುರದಲ್ಲಿರುವ ಶ್ರೀ ಗುರು ರಾಘವೇಂದ್ರಸ್ವಾಮಿ ಮಠದಲ್ಲಿ ಸೋಮವಾರ 354 ನೇ ರಾಘವೇಂದ್ರ ಸ್ವಾಮಿಗಳ ಆರಾಧನಾ ಮಹೋತ್ಸವ ವಿಜೃಂಭಣೆಯಿಂದ ನಡೆಯಿತು.

ನಿನ್ನೆಯಿಂದಲೇ ಪ್ರಾರಂಭವಾಗಿರುವ ರಾಯರ ಆರಾಧನಾ ಮಹೋತ್ಸವ ಬೆಳಗ್ಗೆಯಿಂದಲೇ ಮಠದಲ್ಲಿ ರಾಘವೇಂದ್ರ ಸ್ತೋತ್ರ ಪೂರ್ವಕ ಕ್ಷೀರಾಭಿಷೇಕ, ವಿಶೇಷ ಪಂಚಾಮೃತ ಅಭಿಷೇಕ, ಹೂವಿನ ಅಲಂಕಾರ, ಸಾಮೂಹಿಕ ಕನಕಾಭಿಷೇಕ ಸೇರಿ ವಿವಿಧ ಧಾರ್ಮಿಕ ಕಾರ್ಯಕ್ರಮ ನಡೆದವು. ಮಧ್ಯಾಹ್ನ 12 ಗಂಟೆಗೆ ಮಹಾಪೂಜೆ, ಮಂಗಳರಾತಿ ನೆರವೇರಿತು. ಆ ಬಳಿಕ ಪ್ರಸಾದ ವಿತರಣೆ ನಡೆಯಿತು.



ಜಿಲ್ಲೆಯ ವಿವಿಧೆಡೆಯಿಂದ ಸಾಹಸ್ರಾರು ಮಂದಿ ಭಕ್ತರು ಭಾಗವಹಿಸಿ ರಾಯರ ದರ್ಶನ ಪಡೆದು ಪುನೀತರಾದರು. ಮಠದ ಪವನ್ ಆಚಾರ್ ಹಾಗೂ ಶ್ರೀಧರ್ ಆಚಾರ್ ಅವರು ಪೂಜಾಕಾರ್ಯಗಳನ್ನು ನೆರವೇರಿಸಿದರು. ವಿಪ್ರ ಮುಖಂಡರಾದ ಅನಂತಪ್ರಸಾದ್, ಜಿ.ಎಂ. ಹೆಗಡೆ ಸೇರಿದಂತೆ ಇತರರು ಇದ್ದರು.

ಪತ್ರ ಬರಹಗಾರರ ವೃತ್ತಿ ಹತ್ತಿಕ್ಕುವ ಕೆಲಸ

ಚಾಮರಾಜನಗರ: ಸರಕಾರ ಪತ್ರ ಬರಹಗಾರರ ವೃತ್ತಿಯನ್ನು ಹತ್ತಿಕ್ಕುವ ಕೆಲಸ ಮಾಡುತ್ತಿದೆ. ಇದನ್ನು ಉಳಿಸಿಕೊಳ್ಳಲು ಪತ್ರ ಬರಹಗಾರರು ಸಂಘಟಿತರಾಗಬೇಕು ಎಂದು ಪತ್ರ ಬರಹಗಾರರ ಒಕ್ಕೂಟದ ರಾಜ್ಯಾಧ್ಯಕ್ಷ ಡಿ.ಕೆ. ಸಂಗಮೇಶ ಎಲಿಗಾರ್ ಸಲಹೆ ನೀಡಿದರು.

ನಗರದ ಸಂತೇಮರಹಳ್ಳಿ ರಸ್ತೆಯ ರಾಯಲ್ ಬ್ರದರ್ಸ್ ಪಾರ್ಟಿ ಹಾಲ್ ನಲ್ಲಿ ನಡೆದ ಚಾಮರಾಜನಗರ ತಾಲೂಕು ಪರವಾನಗಿ ಹೊಂದಿದ ಜಿಲ್ಲಾ ಪತ್ರ ಬರಹಗಾರ ಕ್ಷೇಮಾಭಿವೃದ್ಧಿ ಸಂಘ ಉದ್ಘಾಟನೆ, ಪತ್ರ ಬರಹಗಾರ ಒಕ್ಕೂಟದ ಸದಸ್ಯತ್ವ ನೋಂದಣಿ ಅಭಿಯಾನ ಉದ್ಘಾಟಿಸಿ ಮಾತನಾಡಿದರು.

ಪತ್ರ ಬರಹಗಾರರ ಬೇಡಿಕೆಗಳನ್ನು ಈಡೇರಿಸುವಂತೆ ಬೆಳಗಾಂ ಅಧಿವೇಶನದಲ್ಲಿ ಸಚಿವ ಕೃಷ್ಣಬೈರೇಗೌಡರು, ಅಧಿಕಾರಿ ಮಲ್ಲಿಕಾರ್ಜುನ, ಆರ್.ಅಶೋಕ್, ಮಹೇಶ್ ತೆಂಗಿನಕಾಯಿ, ವಿಧಾನ ಪರಿಷತ್ ವಿರೋಧ ಪಕ್ಷದನಾಯಕ ಛಲವಾದಿ ನಾರಾಯಣಸ್ವಾಮಿ ಅವರಿಗೆಲ್ಲ ಮನವಿ ಸಲ್ಲಿಸಲಾಗಿದೆ. ಯಾವುದೇ ಪ್ರಯೋಜನವಾಗಿಲ್ಲ. ಸರಕಾರ ಡಿಜಿಟಲೀಕರಣ ಮಾಡಿ ಪತ್ರ ಬರಹಗಾರರ ವೃತ್ತಿಯನ್ನು ಹತ್ತಿಕ್ಕುವ ಕೆಲಸ ಮಾಡುತ್ತಿದೆ ಎಂದು ಆರೋಪಿಸಿದರು.

ಒಕ್ಕೂಟದ ರಾಜ್ಯ ಕಾರ್ಯದರ್ಶಿ ಧರ್ಮರಾಜ್ ವಿ.ಏಕಬೋಟೆ ಮಾತನಾಡಿ, ಪತ್ರ ಬರಹಗಾರರ ಬೇಡಿಕೆಗಳನ್ನು ಈಡೇರಿಸುವಂತೆ ತ್ತಾಯಿಸಿದರು.

ಮಂಡ್ಯ ಜಿಲ್ಲಾ ನೋಂದಣಾಧಿಕಾರಿ ಎಸ್.ಸಿದ್ದೇಶ್ ಸಂಘದ ನಾಮಫಲಕ ಅನಾವರಣಗೊಳಿಸಿದರು. ಸಂಘದ ಅಧ್ಯಕ್ಷ ಜಿ.ನಂದೀಶ್ವರಸ್ವಾಮಿ ಅಧ್ಯಕ್ಷತೆ ವಹಿಸಿದ್ದರು. ಮಾಜಿ ಅಧ್ಯಕ್ಷ ಸಿ.ಎನ್.ಬಾಲರಾಜು ಪ್ರಾಸ್ತಾವಿಕ ಭಾಷಣ ಮಾಡಿದರು. ಹಿರಿಯ ಉಪ- ನೋಂದಣಾಧಿಕಾರಿ ಎ.ರಾಘವೇಂದ್ರ, ಪ್ರಥಮದರ್ಜೆ ಸಹಾಯಕರಾದ ಕೆ.ಎನ್.ಉಮೇಶ್, ಮಂಜುನಾಥ್, ನವೀನ್ ಕುಮಾರ್, ನಂಜನಗೂಡು ಅಧ್ಯಕ್ಷ ಪ್ರಕಾಶ್ ರಾಜೇ ಅರಸ್, ನರಸೀಪುರ ಸಂಘದ ಕಾರ್ಯಾಧ್ಯಕ್ಷ ಲೋಕೇಶ್, ಚಾಮರಾಜನಗರ ಉಪಾಧ್ಯಕ್ಷ ಕಾಂತರಾಜು, ಕಾರ್ಯದರ್ಶಿ ಮಹಾದೇವಸ್ವಾಮಿ, ಸಹ ಕಾರ್ಯದರ್ಶಿ ರವಿ, ಖಜಾಂಚಿ ಹೊಮ್ಮ ರಾಮನಾಯಕ, ಕಾನೂನು ಸಲಹೆಗಾರ ಎಸ್.ಕೆ.ಮಹದೇವಯ್ಯ ಇದ್ದರು.

ಕಲಬೆರಕೆ ಹಾಲು ಡೇರಿಗೆ ಹಾಕುವುದು ಅಕ್ಷಮ್ಯ

ಕೆ ಆರ್ ಪೇಟೆ: ಅಮೃತ ಸಮಾನವಾದ ಹಾಲಿಗೆ ಕಲಬೆರಕೆ ಮಾಡಿ ಡೇರಿಗೆ ಹಾಕುವುದು ಅಕ್ಷಮ್ಯ ಅಪರಾಧ ಇದಕ್ಕೆ ದೊಡ್ಡ ದಂಡ ತೆರಬೇಕಾಗುತ್ತದೆ ಎಂದು ಮನ್ಮುಲ್ ನಿರ್ದೇಶಕ ಡಾಲು ರವಿ ಸಲಹೆ ನೀಡಿದರು

ಅಕ್ಕಿಹೆಬ್ಬಾಳು ಹೋಬಳಿ ಮೂಡನಹಳ್ಳಿ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದ ವಾರ್ಷಿಕ ಮಹಾಸಭೆ ಉದ್ಘಾಟಿಸಿ ಮಾತನಾಡಿದರು.

ವರ್ಷಕ್ಕೊಮ್ಮೆ ನಡೆಯುವ ಸಂಘದ ವಾರ್ಷಿಕ ಮಹಾಸಭೆಯಲ್ಲಿ ಭಾಗವಹಿಸುವ ಉದ್ದೇಶವೇನೆಂದರೆ ನಿಮ್ಮ ಡೇರಿ ವಾರ್ಷಿಕ ಎಷ್ಟು ಆದಾಯವನ್ನು ಗಳಿಸಿದೆ. ಇನ್ನೂ ಉತ್ತಮ ಮಟ್ಟಕ್ಕೆ ಹೋಗಲು ಯಾವ ರೀತಿ ಕ್ರಮಗಳನ್ನು ಕೈಗೊಂಡು ಸಂಘದ ಅಭಿವೃದ್ಧಿಗೆ ಶ್ರಮಿಸಬಹುದು ಎಂಬುದನ್ನು ಚರ್ಚೆಯಲ್ಲಿ ಭಾಗವಹಿಸುವುದು. ರಾಸುಗಳ ನಿರ್ವಹಣೆ ತಿಳಿದುಕೊಳ್ಳುವುದು.ಒಕ್ಕೂಟದಿಂದ ಸಿಗುವ ಸೌಲಭ್ಯಗಳ ಬಗ್ಗೆ ಮಾಹಿತಿ ತಿಳಿದುಕೊಳ್ಳಲು ವಾರ್ಷಿಕ ಸಭೆಯು ಮಹತ್ವದ ಪಾತ್ರವನ್ನು ವಹಿಸುತ್ತದೆ. ದನಗಳು ಜನಗಳು ಕಡ್ಡಾಯವಾಗಿ ವಿಮೆ ಮಾಡಿಸಿಕೊಂಡರೆ ತುಂಬಾ ಒಳ್ಳೆಯ ಬೆಳವಣಿಗೆ. ರಾಸುಗಳಿಗೆ ನಂದಿನಿ ಫೀಡ್ಸ್ ನ್ನು ಹೆಚ್ಚಾಗಿ ಬಳಸಿ ಖಾಸಗೀ ಫೀಡ್ಸ್ ಗಳಿಗೆ ಗಮನವನ್ನು ನೀಡಬೇಡಿ ಎಂದು ಸಲಹೆ ನೀಡಿದರು.

ಮನ್ಮುಲ್ ನಿರ್ದೇಶಕ ಎಂ.ಬಿ.ಹರೀಶ್ ಮಾತನಾಡಿ, ಒಕ್ಕೂಟದಿಂದ ಸಿಗುವ ಸೌಲಭ್ಯಗಳನ್ನು ತಿಳಿದುಕೊಳ್ಳವುದು ಒಳ್ಳೆಯದು.ಏಕೆಂದರೆ ಹಾಲು ಉತ್ಪಾದಕರ ಮಕ್ಕಳು ಎಂಬಿಬಿಎಸ್,ಬಿವಿಎಸ್,ಬಿಎಸ್ಸಿ ಅಗ್ರಿಕಲ್ಚರಲ್, ಬಿಎಸ್ಸಿ ಫಾರೆಸ್ಟಿ ವಿದ್ಯಾಭ್ಯಾಸಕ್ಕೆ ಕ್ರಮವಾಗಿ 50,000, 40,000 ರೂ. ಸಹಾಯ ಮಾಡಲಾಗುವುದು. ಆದ್ದರಿಂದ ಹಾಲು ಉತ್ಪಾದಕರು ಖಾಸಗಿ ಡೇರಿಗಳಿಗೆ ಮುಖ ಮಾಡದೇ ಮಂಡ್ಯ ಜಿಲ್ಲಾ ಹಾಲು ಒಕ್ಕೂಟಕ್ಕೆ ನಿಮ್ಮ ಸಹಕಾರವಿರಲಿ ಎಂದು ತಿಳಿಸಿದರು. ಸಂಘಕ್ಕೆ ಅತಿ ಹೆಚ್ಚು ಹಾಲು ಹಾಕಿದವರಿಗೆ ಉಚಿತವಾಗಿ ಉಡುಗೊರೆ ನೀಡಿದ್ದಲ್ಲದೇ ಹಾಲು ಉತ್ಪಾದಕರ ಪ್ರತಿಭಾವಂತ ಮಕ್ಕಳಿಗೆ ನಗದು ಬಹುಮಾನವನ್ನು ವಿತರಣೆ ಮಾಡಲಾಯಿತು. ಸಂಘದ ಅಧ್ಯಕ್ಷೆ ಇಂದ್ರದಿನೇಶ್,ಮಾರ್ಗ ವಿಸ್ತರಣಾಧಿಕಾರಿ ಮಧು,ಭಾವನ,ಗ್ರಾ.ಪಂ.ಸದಸ್ಯ ಮನು, ಸಂಘದ ಉಪಾಧ್ಯಕ್ಷೆ ಗೀತಾ ಶಿವರಾಜು,ಸಂಘದ ನಿರ್ದೇಶಕರಾದ ಜಯಮ್ಮ, ಪುಟ್ಟಮ್ಮ,ಪವಿತ್ರ, ಪೂರ್ಣಿಮಾ, ಪಾರ್ವತಮ್ಮ, ಸುಶೀಲಾ, ರೇಣುಕಾ,ವಸಂತ, ನೀಲಮ್ಮ, ಮಹದೇವಮ್ಮ, ಸಂಘದ ಕಾರ್ಯದರ್ಶಿ ಶೋಭ,ಮಂಜುಳಾ, ಶ್ವೇತ ಸೇರಿದಂತೆ ಇತರರು ಹಾಜರಿದ್ದರು.

ಕೆ ಆರ್ ಪೇಟೆ ತಾಲೂಕಿನ ಮೂಡನಹಳ್ಳಿ ಹಾಲು ಉತ್ಪಾದಕರ ಪ್ರತಿಭಾವಂತ ಮಕ್ಕಳಿಗೆ ನಗದು ಪುರಸ್ಕಾರ ನೀಡಲಾಯಿತು.

ಶ್ರೀಗುರು ರಾಘವೇಂದ್ರ ಸ್ವಾಮಿಗಳ ಆರಾಧನೆ

ಕೆ ಆರ್ ನಗರ: ಶ್ರೀಗುರು ರಾಘವೇಂದ್ರ ಸ್ವಾಮಿಗಳ 354ನೇ ಆರಾಧನಾ ಮಹೋತ್ಸವವನ್ನು ಸಂಭ್ರಮದಿಂದ ಆಚರಿಸಲಾಯಿತು. ಆರಾಧನೆ ಅಂಗವಾಗಿ ಶ್ರೀಕೃಷ್ಣ ದೇವಸ್ಥಾನವನ್ನು ವಿವಿಧ ಪುಷ್ಪಗಳಿಂದ ಆಕರ್ಷಕವಾಗಿ ಅಲಂಕರಿಸಲಾಗಿತ್ತು. ಪಂಚಾಮೃತ ಸೇವೆ, ಪಾದುಕಾ ಪೂಜೆ, ಅಲಂಕಾರ ಸೇವೆ ಶ್ರದ್ಧಾ ಭಕ್ತಿಯಿಂದ ನೆರವೇರಿಸಲಾಯಿತು.ಅರ್ಚಕರುಗಳಾದ ರಾಘವೇಂದ್ರ ಭಟ್, ಜೋಗಿತಾಯ, ಮತ್ತು ತ್ರಿ ವಿಕ್ರಮಾಚಾರ್ಯ ಪೂಜಾ ಕೈಂಕರ್ಯ ಗಳನ್ನು ನಡೆಸಿಕೊಟ್ಟರು.

ಮೈಸೂರಿನ ಶ್ರೀಕೃಷ್ಣ ಮಠದ ಮಹಿಳಾ ಭಜನಾ ಮಂಡಳಿಯವರಿಂದ ಭಜನಾ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಸೋಮವಾರ

ಮಧ್ಯಾರಾಧನೆ ಪ್ರಯುಕ್ತ ರಾಯರ ಉತ್ಸವ ಮೂರ್ತಿಯನ್ನು ಅಲಂಕೃತ ಬೆಳ್ಳಿ ಪಲ್ಲಕ್ಕಿಯಲ್ಲಿ ಇರಿಸಿ ಸಿ ಎಮ್ ರಸ್ತೆ, ಆಂಜನೇಯ ಬ್ಲಾಕ್ ಮತ್ತು ವಾಸವಿ ರಸ್ತೆ ಗಳಲ್ಲಿ ಮೆರವಣಿಗೆ ನಡೆಸಲಾಯಿತು.ಮಹಾಮಂಗಳಾರತಿ ನಂತರ ಭಕ್ತರರೆಲ್ಲರೂ ಪ್ರಸಾದ ಭೋಜನ ಸ್ವೀಕರಿಸಿ ಸಂತುಷ್ಟರಾದರು.

ಮೆರವಣಿಗೆಯಲ್ಲಿ ಗೌರವಾಧ್ಯಕ್ಷ ಡಾ. ಮೋಹನ್ ದಾಸ್ ಭಟ್, ಅಧ್ಯಕ್ಷ ಕೃಷ್ಣ ಚೆಲ್ಲ ಸದಸ್ಯರುಗಳಾದ ಕೃಷ್ಣಮೂರ್ತಿ, ಎ ನಾಗರಾಜ್, ನರಸಿಂಹ ಸೋಮಯಾಜಿ, ಕೆ ನಾಗೇಶ್, ಶ್ರೀನಿವಾಸ್, ಕೃಷ್ಣಮೂರ್ತಿ, ಚೈತನ್ಯ, ಕೇಶವ. ನಾಗರಾಜ್ ಪುರಾಣಿಕ್. ಪ್ರಣಿತ್, ಶ್ರೀಹರ್ಷ, ಶಶಾಂಕ್, ಕೃಷ್ಣಪ್ರಸಾದ್, ಆಟೋ ಶಂಕರ್ ಪಾಲ್ಗೊಂಡಿದ್ದರು.

ಗಾಂಧೀಜಿ ಮೌಲ್ಯ ಪ್ರಸ್ತುತ

ಮಂಡ್ಯದಲ್ಲಿ 13ನೇ ಕನ್ನಡ ಅಕ್ಷರ ಜಾತ್ರೆ

ಮಂಡ್ಯ: ಸ್ವಾತಂತ್ರ್ಯ ದಿನಕ್ಕೆ ಇನ್ನು ಕೆಲವೇ ಕೆಲವು ದಿನಗಳು ಬಾಕಿ ಇದ್ದು, ಇಂತಹ ಸಂದರ್ಭದಲ್ಲಿ ಸ್ವಾತಂತ್ರ್ಯ ಹೋರಾಟಗಾರರನ್ನು ಸ್ಮರಿಸುವುದು ನಮ್ಮ ಕರ್ತವ್ಯವಾಗಿದೆ. ದೇಶಕ್ಕೆ ಅಹಿಂಸಾತ್ಮಕವಾಗಿ ಸ್ವಾತಂತ್ರ್ಯ ತಂದುಕೊಟ್ಟ ಮಹಾತ್ಮ ಗಾಂಧೀಜಿ ಅವರ ಜೀವನದ ತತ್ವ ಮತ್ತು ಮೌಲ್ಯಗಳು ಪ್ರಸ್ತುತ ಸಮಾಜಕ್ಕೆ ಅವಶ್ಯಕವಾಗಿವೆ ಎಂದು ಖ್ಯಾತ ವೈದ್ಯ, ಕವಿ ಡಾ.ಚಂದ್ರಶೇಖರ್ ಅಭಿಪ್ರಾಯಿಸಿದರು.

ಡಾ.ಜೀಶಂಪ ಸಾಹಿತ್ಯ ವೇದಿಕೆ ವತಿಯಿಂದ ನಗರದ ಕರ್ನಾಟಕ ಸಂಘದ ಕೆ.ವಿ. ಶಂಕರಗೌಡ ಶತಮಾನೋತ್ಸವ ಭವನದಲ್ಲಿ ನಡೆದ 13ನೇ ಕನ್ನಡ ಅಕ್ಷರ ಜಾತ್ರೆ ಹಾಗೂ ವಿವಿಧ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪ್ರದಾನ ಭಾಷಣ ಮಾಡಿದರು.

ಬ್ರಿಟೀಷರ ವಿರುದ್ಧ ನಾವು ಸ್ವಾತಂತ್ರ್ಯ ಪಡೆಯಲು ಹಿಂಸಾಮಾರ್ಗವನ್ನು ಅನುಸರಿಸಿದ್ದರೆ ನಾವು ಭಾರತೀಯರಾಗುತ್ತಿರಲಿಲ್ಲ. ಬದಲಾಗಿ ಗಾಂಧಿಯ ಅಹಿಂಸಾ ಮಾರ್ಗದ ಮೂಲಕ ಸ್ವಾತಂತ್ರ್ಯ ಪಡೆದೆವು. ಹಿಂಸಾಮಾರ್ಗವನ್ನು ತುಳಿದಿದ್ದರೆ ಸತ್ತ ಹೆಣಗಳ ಮೇಲೆ ಸ್ವಾತಂತ್ರ್ಯ ಕಿತ್ತುಕೊಳ್ಳಬೇಕಿತ್ತು. ಹಾಗಾಗಿ ಗಾಂಧಿ ಅಹಿಂಸಾ ಮಾರ್ಗದಿಂದ ಸ್ವಾತಂತ್ರ್ಯ ಕೊಡಿಸಿದರು ಎಂದು ಸ್ಮರಿಸಿದರು.

ಸಮಾಜ ಸೇವಕ ಡಾ.ರೇವಣ್ಣ ಮಾತನಾಡಿ, ನಾನು ಅಂತಾರಾಷ್ಟ್ರೀಯ ಮಟ್ಟದ ವಾಲಿಬಾಲ್ ಪಂದ್ಯದಲ್ಲಿ ಭಾರತ ದೇಶವನ್ನು ಪ್ರತಿನಿಧಿಸಿದ್ದಕ್ಕೆ ಅದರಲ್ಲೂ ಮಂಡ್ಯ ಜಿಲ್ಲೆಯಿಂದ ಆಯ್ಕೆಯಾಗಿದ್ದಕ್ಕೆ ಹೆಮ್ಮೆ ಇದೆ. ನನಗೆ ಪ್ರೋತ್ಸಾಹಿಸಿದ ಹಲವರ ಕೊಡುಗೆ ಇದೆ ಎಂದು ಸ್ಮರಿಸಿಕೊಂಡರು.

ಸಮ್ಮೇಳನಾಧ್ಯಕ್ಷತೆ ವಹಿಸಿದ್ದ ಸಾಹಿತಿ ಬಿ.ಆರ್.ಉಮಾ ಮಾತನಾಡಿ, ಹಿರಿಯ ಸಾಹಿತಿಗಳು, ಲೇಖಕರು, ಕವಿಗಳು ಮೂಲೆ ಗುಂಪಾಗುತ್ತಿರುವುದು ನಿಜಕ್ಕೂ ವಿಷಾದನೀಯ ಸಂಗತಿಯಾಗಿದೆ. ಮಂಡ್ಯದವರೇ ಆದ ಮಹಿಳಾ ಸಾಹಿತಿಗಳಾದ ತ್ರಿವೇಣಿ, ಆರ್ಯಾಂಭ ಪಟ್ಟಾಭಿ, ವಾಣಿ, ಲತಾ ರಾಜಶೇಖರ್‌ರಂಥ ಸಾಹಿತಿಗಳು ಯಾವ ಸಮಾರಂಭದಲ್ಲೂ ಕಾಣಿಸಿಕೊಳ್ಳುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು. ವಿವಿಧ ಕ್ಷೇತ್ರದಲ್ಲಿ ಸಾಧಕರಾದ ಮಂಡ್ಯದ ಖ್ಯಾತ ವೈದ್ಯ ಡಾ.ಮನೋಹರ್, ಶಂಕರ್ ಹೆಮ್ಮಿಗೆ, ಡಾತನ್ಮಯಿ ಕೃಷ್ಣ ಪಾಲನೇತ್ರ, ಸೋಮಶೇಖರ ಮೂರ್ತಿ, ಸೌಭಾಗ್ಯ ಸಿದ್ದರಾಜು, ಮುನಿರಾ ಅನ್ವರ್, ಚೈತ್ರ ಪ್ರಸನ್ನ, ಎಂ.ಡಿ.ನಾಗೇಂದ್ರ, ಭಾರ್ಗವಿ ಅವರನ್ನು ಅಭಿನಂದಿಸಲಾಯಿತು. ವೇದಿಕೆಯಲ್ಲಿ ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಡಾ.ಎಚ್.ಎಸ್.ಮುದ್ದೇಗೌಡ, ಡಾ. ಜೀ.ಶಂಪ. ಸಾಹಿತ್ಯ ವೇದಿಕೆಯ ಅಧ್ಯಕ್ಷ ಎಸ್.ಕೃಷ್ಣಸ್ವರ್ಣಸಂದ್ರ, ಪದಾಧಿಕಾರಿಗಳಾದ ನಾಗೇಶ್ ರಾಗಿಮುದ್ದನಹಳ್ಳಿ, ಮಾಡ್ಲ ಅರಸಯ್ಯ, ನಟ ದೀಪಕ್ ಉಪಸ್ಥಿತರಿದ್ದರು.

ಡಾ.ಜೀಶಂಪ ವೇದಿಕೆಯಿಂದ ನಡೆದ 13ನೇ ಕನ್ನಡ ಅಕ್ಷರ ಜಾತ್ರೆಯಲ್ಲಿ ವಿವಿಧ ಕ್ಷೇತ್ರದ ಸಾಧಕರನ್ನು ಸನ್ಮಾನಿಸಲಾಯಿತು.

{ ಜಗ್ಗೇಶ್ } ರಾಜ್ಯಸಭಾ ಸದಸ್ಯ

ರಾಯರು ಮನಸ್ಸು ಮಾಡಿದ್ರೆ, ಪ್ರಧಾನಿ ಮೋದಿ ಅವರನ್ನ ಮಂತ್ರಾಲಯಕ್ಕೆ ಕರೆಯುತ್ತಾರೆ. ರಾಯರ ಶಕ್ತಿಯ ಮುಂದೆ ನಾವೆಲ್ಲಾ ಏನೂ ಅಲ್ಲ. ಮಂತ್ರಾಲಯದಲ್ಲಿ ಏರೋಡ್ರಮ್ ನಿರ್ಮಾಣ ವಿಚಾರಕ್ಕೆ ಸಂಬಂಧಿಸಿದಂತೆ ಸುಧಾಮೂರ್ತಿ ಹಾಗೂ ನಾನು ಪ್ರಯತ್ನ ಮಾಡುತ್ತಿದ್ದೇವೆ. ನಮ್ಮ ಬೇಡಿಕೆಯನ್ನ ಸದನದಲ್ಲಿ ಇಟ್ಟಿದ್ದೇವೆ. ಮುಂದೊಂದು ದಿನ ಮಂತ್ರಾಲಯದಲ್ಲಿ ಏರೋಡ್ರಮ್ ಆಗುವ ನಿರೀಕ್ಷೆಯಿದೆ.



ವಿವಿಧ ಬೇಡಿಕೆಗಳಿಗಾಗಿ ಆದಿವಾಸಿಗಳ ಪ್ರತಿಭಟನೆ

ಪಾಕ್ ಸೇನಾ ಮುಖ್ಯಸ್ಥ ಅಸಿಮ್ ಮುನೀರ್ ಅಮೆರಿಕದಲ್ಲಿ ಮಾತನಾಡಿ, 'ನಮ್ಮ ಬಳಿ ಅಣ್ವಸ್ತ್ರಗಳಿವೆ. ಅವನ್ನು ಬಳಸಿ ಅರ್ಧ ವಿಶ್ವವನ್ನೇ ನಾವು ನಾಶಪಡಿಸಬಲ್ಲೆವು' ಎಂದು ಬೆದರಿಕೆ ಹಾಕಿ ರುವುದಕ್ಕೆ ಭಾರತದ ವಿದೇಶಾಂಗ ಸಚಿವಾಲಯ ಸೋಮವಾರ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದೆ.

ಪರಮಾಣು ಶಸ್ತ್ರಾಸ್ತ್ರಗಳ ಮುಂದಿಟ್ಟುಕೊಂಡು ಬೆದರಿಕೆ ಹಾಕುವುದು ಪಾಕಿಸ್ತಾನದ ಹಳೆಯ ಅಭ್ಯಾಸ. ಇಂತಹ ಪರಮಾಣು ಬ್ಲ್ಯಾಕ್‌ಮೇಲ್‌ಗಳಿಗೆ ಭಾರತ ಎಂದೂ ಮಣಿಯುವುದಿಲ್ಲ. ದೇಶವನ್ನು ಹೇಗೆ ರಕ್ಷಿಸಿಕೊಳ್ಳಬೇಕು. ಇಂಥ ಗೊಡ್ಡು ಬೆದರಿಕೆ ಹಾಕುವವರಿಗೆ ಹೇಗೆ ಪಾಠ ಕಲಿಸಬೇಕು ಎಂಬುದು ಭಾರತಕ್ಕೆ ಚೆನ್ನಾಗಿ ತಿಳಿದಿದೆ ಎಂದು ವಿದೇಶಾಂಗ ಸಚಿವಾಲಯ ದೃಢವಾಗಿ ಹೇಳಿದೆ. ಅಮೆರಿಕ ದೇಶದಲ್ಲಿ ಇದ್ದಾಗಲೇ ಇಂಥ ಹೇಳಿಕೆ ನೀಡಲು ಅವಕಾಶ ಮಾಡಿಕೊಟ್ಟಿರುವುದು ಬಹಳ ವಿಷಾದನೀಯ. ಅಮೆರಿಕದಂತಹ ದೇಶ ಇಂಥ ನಡೆಗೆ ಹೇಗೆ ಅವಕಾಶ ಮಾಡಿಕೊಟ್ಟಿದೆ ಎಂಬುದೇ ಆಶ್ಚರ್ಯದಾಯಕ ಎಂದೂ ಭಾರತ ಪ್ರತಿಕ್ರಿಯಿಸಿದೆ.



ಬೇಜವಾಬ್ದಾರಿ ದೇಶದಲ್ಲಿ ಅಣ್ವಸ್ತ್ರ ಅಪಾಯಕಾರಿ

ಅಣ್ವಸ್ತ್ರ ಸಜ್ಜಿತ ದೇಶವೊಂದರ ಸೇನಾ ಮುಖ್ಯಸ್ಥನ ಇಂತಹ ಹೇಳಿಕೆಗಳು ಎಷ್ಟು ಬೇಜವಾಬ್ದಾರಿಯುತ ಎಂಬುದನ್ನು ಜಗತ್ತು ಅರ್ಥ ಮಾಡಿಕೊಳ್ಳಬೇಕಿದೆ. ಇಂಥ ಮನಸ್ಥಿತಿ ಇರುವ ಸೇನಾಧಿಕಾರಿ ಇರುವ ದೇಶದಲ್ಲಿ ಪರಮಾಣು ಶಸ್ತ್ರಾಸ್ತ್ರಗಳು ಅದು ಹೇಗೆ ಸುರಕ್ಷಿತವಾಗಿರಲು ಸಾಧ್ಯ? ಅದರಲ್ಲೂ ಸೇನಾಪಡೆಯೇ ಭಯೋತ್ಪಾದಕರ ಜತೆ ನೇರ ಸಂಪರ್ಕ ಹೊಂದಿರುವ ದೇಶದಲ್ಲಿ ಅಣ್ವಸ್ತ್ರಗಳ ಸಂಗ್ರಹ ಅದೆಷ್ಟು ಸುರಕ್ಷಿತ? ಪಾಕ್ ಸೇನಾಧಿಕಾರಿಯ ಈ ನಡೆ ಇಂಥ ವಿಷಯಗಳಲ್ಲಿ ಭಾರೀ ಅನುಮಾನ ಹುಟ್ಟುಹಾಕುತ್ತದೆ. ಈ ಬಗ್ಗೆ ಅಂತಾರಾಷ್ಟ್ರೀಯ ಸಮುದಾಯ ಗಂಭೀರವಾಗಿ ಪರಿಗಣಿಸಬೇಕಿದೆ ಎಂದು ವಿದೇಶಾಂಗ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಹೇಳಿದ್ದಾರೆ.

ಮುನೀರ್ ಮಾತಲ್ಲಿದೆಯೇ ಟ್ರಂಪ್‌ಕಾರ್ಡ್?

ಆಪರೇಷನ್ ಸಿಂದೂರ್ ಸಮಯದಲ್ಲಿ ಹೆದರಿಕೊಂಡು ಬಂಕರ್‌ನಲ್ಲಿ ಅಡಗಿಕೊಂಡಿದ್ದ ಪಾಕ್ ಸೇನಾಧಿಕಾರಿ ಅಸೀಮ್ ಮುನೀರ್, ಆ ಬಳಿಕ ಜೂನ್‌ನಲ್ಲಿ ಡೊನಾಲ್ಡ್ ಟ್ರಂಪ್ ಕರೆಯ ಮೇರೆಗೆ ಅಮೆರಿಕಕ್ಕೆ ಭೇಟಿ ನೀಡಿದ್ದರು. ಶ್ವೇತಭವನದಲ್ಲಿ ವಿಶೇಷ ಔತಣಕೂಟದಲ್ಲಿ ಟ್ರಂಪ್ ಜತೆ ಭಾರೀ ಮಾತುಕತೆ ನಡೆಸಿದ್ದರು. ಅಮೆರಿಕದಿಂದ ಹಿಂದಿರುಗಿದ ಬಳಿಕ ಅಸೀಮ್ ಮುನೀರ್ ಭಾರತದ ವಿರುದ್ಧ ಮತ್ತೆ ಜೋರು ಮಾತನಾಡಲಾರಂಭಿಸಿದ್ದರು. ಈಗ ಎರಡನೇ ಬಾರಿಗೆ ಅಮೆರಿಕಕ್ಕೆ ಭೇಟಿ ನೀಡಿ ಅಮೆರಿಕದ ಹಿರಿಯ ಸೇನಾಧಿಕಾರಿಗಳು ಮತ್ತು ರಾಜಕೀಯ ನಾಯಕರನ್ನು ಜತೆ ಮಾತುಕತೆ ನಡೆಸಿದ್ದಾರೆ. ಆ ಬಳಿಕ ಅಮೆರಿಕದಲ್ಲಿ ಇರುವಾಗಲೇ ಭಾರತದ ಮೇಲೆ ವಾಗ್ದಾಳಿ ನಡೆಸಿರುವುದು, ಬೆದರಿಕೆ ಹಾಕುತ್ತಿರುವುದು ಅಚ್ಚರಿಗೆ ಕಾರಣವಾಗಿದೆ. ಮುನೀರ್‌ರ ಈ ಅಣ್ವಸ್ತ್ರದ ಪೊಳ್ಳು ಬೆದರಿಕೆ, ಸಿಂಧೂ ಅಣೆಕಟ್ಟೆಗೆ ಬಾಂಬ್ ದಾಳಿ ಮಾತುಗಳ ಹಿಂದೆ ಡೊನಾಲ್ಡ್ ಟ್ರಂಪ್ ಅವರ ಕೀಟಲೆ ರಾಜಕಾರಣ ಇರಬಹುದೆಂಬ ಶಂಕೆ ವ್ಯಕ್ತವಾಗಿದೆ.

ಕಾಶ್ಮೀರ ನಮ್ಮ ಕಣ್ಣಿನ ರಕ್ತನಾಳ: ಅಸೀಮ್ ಮುನೀರ್ ಬೆದರಿಕೆ

ಅಣ್ವಸ್ತ್ರ ಬಳಸಿ ಅರ್ಧ ವಿಶ್ವ ನಾಶ: ಪಾಕ್

ವಾಷಿಂಗ್ಟನ್: ಕಾಶ್ಮೀರ ನಮ್ಮ ಕಣ್ಣಿನ ರಕ್ತನಾಳ. ಕಾಶ್ಮೀರದಲ್ಲಿನ ನಮ್ಮ ಅಸ್ತಿತ್ವಕ್ಕೆ ಧಕ್ಕೆ ಉಂಟಾದರೆ ನಮ್ಮಲ್ಲಿರುವ ಅಣ್ವಸ್ತ್ರವನ್ನು ಬಳಸುತ್ತೇವೆ. ಅರ್ಧ ವಿಶ್ವವನ್ನೇ ನಾಶಪಡಿಸುತ್ತೇವೆ ಎಂದು ಪಾಕಿಸ್ತಾನ ಮತ್ತೊಮ್ಮೆ ಅಣುಬಾಂಬ್ ದಾಳಿ ಬೆದರಿಕೆ ಹಾಕಿದೆ.

ಪಹಲ್ಗಾಮ್ ಭಯೋತ್ಪಾದಕ ದಾಳಿ, ಆ ಬಳಿಕ ಭಾರತದಿಂದ ಆಪರೇಷನ್ ಸಿಂದೂರ್ ಕಾರ್ಯಾಚರಣೆ ನಡೆದ ನಂತರ ಅಮೆರಿಕಕ್ಕೆ ಮೊದಲ ಭೇಟಿ ನೀಡಿದ್ದ ಪಾಕ್ ಸೇನಾ ಮುಖ್ಯಸ್ಥ ಫೀಲ್ಡ್ ಮಾರ್ಷಲ್ ಅಸಿಮ್ ಮುನೀರ್, ಈಗ 2ನೇ ಬಾರಿಗೆ ಅಮೆರಿಕಕ್ಕೆ ತೆರಳಿ ಅಲ್ಲಿಂದಲೇ ಅಣ್ವಸ್ತ್ರದ ಬೆದರಿಕೆ ಹಾಕಿದ್ದಾರೆ.

ಪಾಕಿಸ್ತಾನದ ಗೌರವ ಕಾನ್ಸುಲ್ ಆಗಿರುವ ಉದ್ಯಮಿ ಅದ್ನಾನ್ ಅಸಾದ್ ಅವರಿಗಾಗಿ ಫ್ಲೋರಿಡಾ ರಾಜ್ಯದ ಟ್ಯಾಂಪಾದಲ್ಲಿ ಆಯೋಜಿಸಲಾಗಿದ್ದ ಬ್ಲ್ಯಾಕ್-ಟೈ ಭೋಜನಕೂಟದಲ್ಲಿ ಪಾಕ್ ಮೂಲದ ಅಮೆರಿಕ ನಿವಾಸಿಗಳನ್ನು ಉದ್ದೇಶಿಸಿ ವೀರಾವೇಶದಿಂದ ಮಾತನಾಡಿರುವ ಮುನೀರ್, 'ಪಾಕ್ ಅಣ್ವಸ್ತ್ರ ಸಜ್ಜಿತ ದೇಶ. ನಮ್ಮ ಅಸ್ತಿತ್ವಕ್ಕೆ ಧಕ್ಕೆಯಾದರೆ ನಮ್ಮೊಂದಿಗೆ ಅರ್ಧ ವಿಶ್ವವನ್ನೂ ನಾಶಪಡಿಸಿಬಿಡುತ್ತೇವೆ ಎಂದು ಬೆದರಿಕೆ ಹಾಕಿದ್ದಾರೆ. ಭಾರತ ಫೆರಾರಿಯಂತಹ ಹೆದ್ದಾರಿಯಲ್ಲಿ ಬರುವ ಮರ್ಸಿಡಿಸ್. ಪಾಕಿಸ್ತಾನ ಕಲ್ಲುಗಳಿಂದ ತುಂಬಿದ ಡಂಪ್ ಟ್ರಕ್. ಎರಡರ ನಡುವೆ ಮುಖಾಮುಖಿ ಡಿಕ್ಕಿಯಾದರೆ ಯಾರಿಗೆ ಹೆಚ್ಚು ನಷ್ಟ ಹೇಳಿ? ಎಂದು ಮುನೀರ್ ಅಣಕವಾಡಿದ್ದಾರೆ.

ಈ ಔತಣಕೂಟಕ್ಕೆ ಅತಿಥಿಗಳು ಮೊಬೈಲ್, ಇತರೆ ಡಿಜಿಟಲ್ ಸಾಧನ ಒಯ್ಯುವುದಕ್ಕೆ ನಿಷೇಧವಿದ್ದ ಕಾರಣ ಮುನೀರ್ ಆಟಾಟೋಪದ ಮಾತುಗಳ ವಿಡಿಯೊ, ಧ್ವನಿಮುದ್ರಿಕೆ ಲಭ್ಯವಾಗಿಲ್ಲ. ಆದರೆ, ಅಲ್ಲಿ ಹಾಜರಿದ್ದವರ ಹೇಳಿಕೆಗಳನ್ನು ಆಧರಿಸಿ 'ದಿ ಪ್ರಿಂಟ್' ಮಾಧ್ಯಮ ಸಂಸ್ಥೆ ಈ ಬಗ್ಗೆ ವಿವರ ವರದಿ ಮಾಡಿದೆ.

ಸಿಂಧೂಗೆ ಅಣೆ ಕಟ್ಟಿದರೆ ಬಾಂಬ್ ದಾಳಿ

ಜಲ ಒಪ್ಪಂದ ಅಮಾನತುಗೊಳಿಸಿದ ಭಾರತವನ್ನು ಗುರಿಯಾಗಿಸಿ ಮಾತನಾಡಿದ ಅಸಿಮ್ ಮುನೀರ್, ಸಿಂಧೂ ನದಿ ಭಾರತೀಯರ ಆಸ್ತಿಯಲ್ಲ. ಅದರಲ್ಲಿ ಪಾಕ್‌ಗೂ ಹಕ್ಕು ಇದೆ. ನದಿ ನೀರನ್ನು ತಡೆಯುವ ನಿರ್ಧಾರ 25 ಕೋಟಿ ಪಾಕ್ ಜನರು ಹಸಿವಿನಿಂದ ಬಳಲುವಂತೆ ಮಾಡುತ್ತದೆ. ಭಾರತ ಅಣೆಕಟ್ಟು ನಿರ್ಮಿಸುವವರೆಗೆ ಕಾಯಿರಿ, ನಂತರ 10 ಕ್ಷಿಪಣಿಗಳಿಂದ ಅಣೆಕಟ್ಟೆಯನ್ನೇ ಉಡಾಯಿಸಿಬಿಡುತ್ತೇವೆ ಎಂದು ವೀರಾವೇಶದಿಂದ ಹೇಳಿದ್ದಾರೆ. ಅಲ್ಲದೇ, ಪಾಕ್‌ನ ನೆಲದಲ್ಲಿ ಇನ್ನೂ ಬಳಸದೇ ಇರುವ ತೈಲ ಮತ್ತು ಖನಿಜ ಸಂಪತ್ತು ಅಪಾರವಾಗಿದೆ ಎಂದು ಹೇಳಿಕೊಂಡು, ಪಾಕ್ ಅದೆಷ್ಟು ಸಬಲವಾಗಿದೆ ಎಂದೂ ಕೊಚ್ಚಿಕೊಂಡಿದ್ದಾರೆ.

ಪ್ರಾಣಿಪ್ರಿಯರೇ ದೂರ ಇರಿ: ಸುಪ್ರೀಂ ಎಚ್ಚರಿಕೆ | ತಡೆಯಾಜ್ಞೆಗೆ ಯತ್ನಿಸಿದರೆ ನ್ಯಾಯಾಂಗ ನಿಂದನೆ | ದೆಹಲಿ ಎನ್‌ಸಿಆರ್‌ನಲ್ಲಿ 10 ಲಕ್ಷ ಬೀದಿನಾಯಿ!

8 ವಾರಗಳಲ್ಲಿ ದೆಹಲಿ ನಗರ ಬೀದಿನಾಯಿ ಮುಕ್ತಗೊಳಿಸಿ

ದೆಹಲಿ: ದೆಹಲಿಯ ರಾಷ್ಟ್ರೀಯ ರಾಜಧಾನಿ ಪ್ರದೇಶ(ಎನ್‌ಸಿಆರ್)ವನ್ನು 8 ವಾರಗಳಲ್ಲಿ ಸಂಪೂರ್ಣ ಬೀದಿನಾಯಿ ಮುಕ್ತಗೊಳಿಸುವಂತೆ ದೆಹಲಿ ಸರಕಾರ ಮತ್ತು ದೆಹಲಿ ಮಹಾನಗರ ಪಾಲಿಕೆ ಹಾಗೂ ನಗರ ಪಾಲಿಕೆಗಳಿಗೆ ಸುಪ್ರೀಂ ಕೋರ್ಟ್ ಸೋಮವಾರ ಕಟ್ಟುನಿಟ್ಟಿನ ಆದೇಶ ನೀಡಿದೆ. ಪ್ರಸ್ತುತ ದೆಹಲಿ ಎನ್‌ಸಿಆರ್‌ನಲ್ಲಿ 10 ಲಕ್ಷಕ್ಕೂ ಅಧಿಕ ಬೀದಿನಾಯಿ ಇರಬಹುದು ಎಂಬ ಅಂದಾಜಿದೆ.

ಬೀದಿ ನಾಯಿ ದಾಳಿ ಮತ್ತು ನಾಯಿಯಿಂದ ಕಡಿತಕ್ಕೆ ಒಳಗಾದವರು ರೇಬೀಸ್ ರೋಗದಿಂದ ನರಳಿ ಸಾವಿಗೀಡಾಗುತ್ತಿರುವ ಪ್ರಕರಣಗಳು ಹೆಚ್ಚುತ್ತಿರುವ ಬಗೆಗೆ ಮಾಧ್ಯಮದಲ್ಲಿ ಪ್ರಕಟವಾದ ವರದಿಗಳನ್ನು ಆಧರಿಸಿ 'ಸುಮೊಟೊ'(ಸ್ವಯಂಪ್ರೇರಿತ) ದೂರು ದಾಖಲಿಸಿಕೊಂಡಿದ್ದ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಜೆ.ಬಿ.ಪಾರದಿವಾಲಾ ಮತ್ತು ನ್ಯಾ. ಆರ್.ಮಹಾದೇವನ್ ಅವರ ದ್ವಿಸದಸ್ಯ ಪೀಠ, ಕೆಲವೇ ದಿನಗಳಲ್ಲಿ ಈ ಮಹತ್ವದ ಆದೇಶ ಹೊರಡಿಸಿದೆ.

ಬೀದಿ ನಾಯಿಗಳ ಹಾವಳಿಯಿಂದಾಗಿ ನೂರಾರು ಮಕ್ಕಳು ಮತ್ತು ವೃದ್ಧರು ಗಾಯಗೊಂಡಿದ್ದಾರೆ. ಕೆಲವರು ರೇಬಿಸ್ ರೋಗದಿಂದ ಸಾವನ್ನಪ್ಪಿದ್ದಾರೆ. ರೇಬಿಸ್ ರೋಗಕ್ಕೆ ಬಲಿಯಾದವರನ್ನು ಮರಳಿ ಜೀವಂತ ಕರೆತರಲು ಪ್ರಾಣಿದಯಾ ಸಂಘಗಳ ಹೋರಾಟಗಾರರಿಗೆ ಸಾಧ್ಯವಿದೆಯೇ? ಎಂದು ಪೀಠ ಕಟುವಾಗಿ ಪ್ರಶ್ನೆ ಮಾಡಿದೆ.

ಬೀದಿನಾಯಿಗಳನ್ನು ನಗರದಿಂದ, ಮುಖ್ಯವಾಗಿ ಜನವಸತಿ ಪ್ರದೇಶದಿಂದ ದೂರವಾಗಿಸಬೇಕು. ಆದಷ್ಟು ಬೇಗ ಕ್ರಮ ಕೈಗೊಳ್ಳಬೇಕು. ಸ್ಥಳಾಂತರಿಸಿ ಒಂದೆಡೆ ಸುರಕ್ಷಿತವಾಗಿ ಇರಿಸಬೇಕು. ಇದಕ್ಕಾಗಿ ಕಾರ್ಯಪಡೆ ಬೇಕಿದ್ದರೆ ರಚಿಸಿಕೊಳ್ಳಿ. ಈ ವಿಚಾರದಲ್ಲಿ ಯಾವುದೇ ರಾಜಿ ಮಾಡಿಕೊಳ್ಳುವಂತಿಲ್ಲ ಎಂದು ಕಟ್ಟುನಿಟ್ಟು ಆದೇಶ ನೀಡಿರುವ ಪೀಠ, ಈ ಆದೇಶವನ್ನು ನಮಗಾಗಿ ಮಾಡುತ್ತಿಲ್ಲ, ಸಾರ್ವಜನಿಕ ಹಿತಾಸಕ್ತಿಗಾಗಿ ಈ ಆದೇಶ ನೀಡಲಾಗಿದೆ. ಇದರಲ್ಲಿ ಯಾವುದೇ ರೀತಿಯ ಭಾವನೆಗಳಿಗೆ ಆಸ್ಪದವಿಲ್ಲ. ಬೀದಿನಾಯಿ ದತ್ತು ತೆಗೆದುಕೊಳ್ಳುವುದಕ್ಕೂ ಸದ್ಯ ಅವಕಾಶ ನೀಡುವುದಿಲ್ಲ ಎಂದೂ ಪೀಠ ಸ್ಪಷ್ಟವಾಗಿ ಹೇಳಿದೆ.

ಸದ್ಯಕ್ಕೆ ನಿಯಮಗಳನ್ನು ಮರೆತುಬಿಡಿ

ಬೀದಿನಾಯಿಗಳ ಸೆರೆ-ಸ್ಥಳಾಂತರ ಕ್ರಮದ ಬಗ್ಗೆ ನ್ಯಾಯಾಲಯ ಪ್ರಶ್ನಿಸಿದ್ದಕ್ಕೆ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು, ದೆಹಲಿಯ ಬೀದಿನಾಯಿಗಳನ್ನು ಹಿಡಿದು ಸ್ಥಳಾಂತರಿಸಲು ಒಂದು ಸ್ಥಳ ಗುರುತಿಸಲಾಗಿದೆ. ಆದರೆ ಪ್ರಾಣಿ ಹಕ್ಕುಗಳ ಕಾರ್ಯಕರ್ತರು ತಡೆಯಾಜ್ಞೆ ತಂದ ನಂತರ ಇಡೀ ಯೋಜನೆಯೇ ಸ್ಥಗಿತಗೊಂಡಿತು ಎಂದು ವಿವರಿಸಿದರು. ಆ ಬಳಿಕ, ನ್ಯಾ.ಪಾರದಿವಾಲಾ ಅವರು, ದೆಹಲಿ ಎನ್‌ಸಿಆರ್‌ನ ಎಲ್ಲಾ ವಸತಿ ಪ್ರದೇಶಗಳಿಂದ ಬೀದಿನಾಯಿಗಳನ್ನು ಹಿಡಿದು ಆಶ್ರಯ ತಾಣಗಳಿಗೆ ಬೇಗ ಸ್ಥಳಾಂತರಿಸಿ. ಸದ್ಯಕ್ಕೆ ಬೀದಿ ನಾಯಿಗಳಿಗೆ ಇರುವ ನಿಯಮಗಳನ್ನು ಮರೆತುಬಿಡಿ ಎಂದು 'ಅಮಿಕಸ್ ಕ್ಯೂರಿ'(ನ್ಯಾಯಾಲಯ ಮಿತ್ರ) ಗೌರವ್ ಅಗರ್ವಾಲಾ ಅವರಿಗೆ ಸೂಚನೆ ನೀಡಿದರು.

ದೆಹಲಿ ಸರಕಾರ, ದೆಹಲಿ ಮಹಾ ನಗರ ಪಾಲಿಕೆ ಮತ್ತು ನಗರ ಪಾಲಿಕೆಗಳು ಬೀದಿನಾಯಿ ಆಶ್ರಯ ಕೇಂದ್ರಗಳನ್ನು ಸ್ಥಾಪಿಸಿ ಅಲ್ಲಿಗೆ ದೆಹಲಿ ಎನ್‌ಸಿಆರ್‌ನ ಎಲ್ಲಾ ಬೀದಿ ನಾಯಿಗಳನ್ನು ಸ್ಥಳಾಂತರಿಸಬೇಕು. ಒಂದು ಬೀದಿ ನಾಯಿಯನ್ನೂ ಎನ್‌ಸಿಆರ್‌ನಲ್ಲಿ ಬಿಡಬಾರದು. ಆ ಕೇಂದ್ರಗಳನ್ನು ಸಿಸಿಟಿವಿ ಮೂಲಕ ಮೇಲ್ವಿಚಾರಣೆ ಮಾಡಬೇಕು. ಅಲ್ಲದೇ, ಸೆರೆಹಿಡಿದ ಬೀದಿನಾಯಿಗಳ ದಾಖಲೆಗಳನ್ನು ನಿತ್ಯ ನಿರ್ವಹಿಸಬೇಕು. ನಾಯಿ ಕಡಿತ ಪ್ರಕರಣಗಳನ್ನು ವರದಿ ಮಾಡಲು ವಾರದೊಳಗೆ ಸಹಾಯವಾಣಿ ಆರಂಭಿಸಬೇಕು. ರೇಬಿಸ್ ಲಸಿಕೆ ದೊರೆಯುವ ಸ್ಥಳಗಳ ಕುರಿತು ವರದಿ ಪ್ರಕಟಿಸಬೇಕು ಎಂದು ಪೀಠ ಸೂಚನೆ ನೀಡಿದೆ.

ನ್ಯಾಯಾಂಗ ನಿಂದನೆ: ಪೀಠದ ಕಟು ಎಚ್ಚರಿಕೆ

ಬೀದಿ ನಾಯಿಗಳನ್ನು ದೆಹಲಿಯಿಂದ ಸ್ಥಳಾಂತರಿಸುವ ಪ್ರಕ್ರಿಯೆಯನ್ನು ತಡೆಯಲು ಯಾವುದಾದರೂ ಸಂಘಟನೆ ಅಥವಾ ಪ್ರಾಣಿಪ್ರಿಯರು ಮುಂದಾದರೆ ಅಂಥವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಲಾಗುವುದು. ನ್ಯಾಯಾಂಗ ನಿಂದನೆ ಕ್ರಮ ಜರುಗಿಸಲಾಗುವುದು ಎಂದು ಸುಪ್ರೀಂ ಕೋರ್ಟ್ ದ್ವಿಸದಸ್ಯ ಪೀಠ ಕಟುವಾಗಿ ಎಚ್ಚರಿಕೆ ನೀಡಿದೆ. ಈ ವಿಚಾರದಲ್ಲಿ ಕೇಂದ್ರ ಸರಕಾರದಿಂದ ಮಾತ್ರವೇ ವಾದವೇನಾದರೂ ಇದ್ದರೆ ಆಲಿಸಲು ನ್ಯಾಯಾಲಯ ಸಿದ್ಧವಿದೆ. ನಾಯಿ ಪ್ರಿಯರು ಅಥವಾ ಯಾವುದೇ ಸಂಘ-ಸಂಸ್ಥೆಗಳವರು ಈ ವಿಷಯವಾಗಿ ಅರ್ಜಿ ಸಲ್ಲಿಸಿದರೆ ಸ್ವೀಕರಿಸಲಾಗುವುದಿಲ್ಲ. ಅವರಿಗೆ ವಾದ ಮಂಡಿಸಲು ಅವಕಾಶವಿಲ್ಲ ಎಂದೂ ಪೀಠ ಸ್ಪಷ್ಟವಾಗಿ ಹೇಳಿದೆ.

ಗುಲಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಸಿನ್ ಸಂಖ್ಯೆ: U04010KA2002SGC030436

ಸಂಖ್ಯೆ: ಗುವಿಸಕಂನಿ/ಅಅ(ವಿ)(ಖರೀದಿ)/ಕಾನಿಇಂ/ಸಕಾನಿಇಂ/25-26/34194-98 ದಿನಾಂಕ:08.08.2025

:: ಅಲ್ಪಾವಧಿ ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮುಖಾಂತರ) ::

ಪಿಸಿ-1473: ಗು.ವಿ.ಸ.ಕಂ.ನಿ.ಯ ನಿರ್ದಿಷ್ಟತೆಯಂತೆ ಕಾರ್ಯ ಮತ್ತು ಪಾಲನೆ ವಲಯ, ಗು.ವಿ.ಸ.ಕಂ.ನಿ, ಕಲಬುರಗಿಗೆ ವಿವಿಧ ನಮೂನೆಯ ವಿದ್ಯುತ್ ಕಂಬಗಳ ತಯಾರಿಕೆ ಮತ್ತು ಪೂರೈಕೆ ಮಾಡುವುದು.
ಟೆಂಡರ್ ಮೊತ್ತ: **ರೂ. 278.16 ಲಕ್ಷ.**
ದಿನಾಂಕ: ಕೆಪಿಪಿ ಪೋರ್ಟಲ್‌ನಲ್ಲಿ ಬಿಡ್ ದಾಖಲೆಗಳು ಲಭ್ಯವಿರುವ ದಿನಾಂಕ: **12.08.2025** ರಂದು ಅಥವಾ ನಂತರ. ಟೆಂಡರ್ ಬಿಡ್ ಸ್ವೀಕರಿಸುವ ಕೊನೆಯ ದಿನಾಂಕ, ತಾಂತ್ರಿಕ ಬಿಡ್ ತೆರೆಯುವ ಮತ್ತು ಆರ್ಥಿಕ ಬಿಡ್ ತೆರೆಯುವ ದಿನಾಂಕ: ಕೆ.ಪಿ.ಪಿ ಪೋರ್ಟಲ್‌ನಲ್ಲಿರುವಂತೆ
ಬಿಡ್ಡುದಾರರ ಅರ್ಹತೆ ವಿವರ: ಟೆಂಡರ್ ದಸ್ತಾವೇಜು ಪ್ರಕಾರ, ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ,: ಅಧೀಕ್ಷಕ ಅಭಿಯಂತರರು (ವಿ), ಖರೀದಿ, ನಿಗಮ ಕಾರ್ಯಾಲಯ, ಗು.ವಿ.ಸ.ಕಂ.ನಿ. ಕಲಬುರಗಿ-585 102. ಮೊ.ಸಂ: 94484 99997. ಅಂತರ್ಜಾಲತಾಣದ ವಿಳಾಸ: www.kppp.karnataka.gov.in.KPP ಪೋರ್ಟಲ್‌ನ ಬಗ್ಗೆ ಮಾಹಿತಿಗಾಗಿ ಸಹಾಯವಾಣಿ +91- 8046010000 / 8068948777 / 9240214000 / 9240214001 ಗೆ ಇಮೇಲ್ ವಿಳಾಸ: support@eprochelpdesk.com ಗೆ ಸಂಪರ್ಕಿಸಬಹುದಾಗಿದೆ.

ಸಹಿ/- ಅಧೀಕ್ಷಕ ಅಭಿಯಂತರರು (ವಿ),
ಖರೀದಿ, ನಿಗಮ ಕಛೇರಿ, ಗು.ವಿ.ಸ.ಕಂ.ನಿ, ಕಲಬುರಗಿ.

ವಾ.ಸಾ.ಸಂ.ಇ/ಕಲಬುರಗಿ/380/ಕೆ.ಎಸ್.ಎಂ.ಸಿ.&ಎ/2025-26

ಗುರಿ ಸಾಧನೆ ಮುಖ್ಯ, ಆಯ್ಕೆ ಇಲ್ಲ: ಇಸ್ರೇಲ್

ಜೆರುಸಲೆಮ್: ಗಾಜಾ ಮೂಲದ ಹಮಾಸ್ ಉಗ್ರ ಸಂಘಟನೆಯನ್ನು ಸಂಪೂರ್ಣವಾಗಿ ನಿರ್ಮೂಲ ಮಾಡುವುದಷ್ಟೇ ನಮ್ಮ ಗುರಿ. ಆ ಕೆಲಸವನ್ನು ಅಚ್ಚುಕಟ್ಟಾಗಿ ಮಾಡಬೇಕಷ್ಟೇ. ಅದು ಬಿಟ್ಟರೆ ಇಸ್ರೇಲ್‌ಗೆ ಬೇರೆ ಆಯ್ಕೆಗಳಿಲ್ಲ ಎಂದು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಹೇಳಿದ್ದಾರೆ. ಜೆರುಸಲೆಮ್‌ನಲ್ಲಿ ವಿದೇಶಿ ಮಾಧ್ಯಮಗಳ ಜತೆ ಸೋಮವಾರ ಮಾತನಾಡಿದ ಅವರು, ಗಾಜಾ ಸಿಟಿ ಮೇಲೆ ಭಾನುವಾರ ನಡೆಸಿದ ಯೋಜಿತ ಕ್ಷಿಪಣಿ ದಾಳಿಯನ್ನು ಸಮರ್ಥಿಸಿದ್ದಾರೆ. ಇಸ್ರೇಲ್ ಸೇನಾಪಡೆಯ ಗುರಿ ಗಾಜಾ ಪ್ರದೇಶವನ್ನು ಆಕ್ರಮಿಸಿಕೊಳ್ಳುವುದಾಗಿ ಇಲ್ಲ, ನಮ್ಮ ಗುರಿ ಏನಿದ್ದರೂ ಇಡೀ ಗಾಜಾ ಪ್ರದೇಶವನ್ನು ಹಮಾಸ್ ಉಗ್ರರಿಂದ ಮುಕ್ತಗೊಳಿಸುವುದಾಗಿದೆ. ಇಸ್ರೇಲ್‌ನದ್ದು ಅಲ್ಲದ ಬೇರೆಯದೇ ನಾಗರಿಕ ಆಡಳಿತ ಜಾರಿಗೊಳಿಸುವುದು ನಮ್ಮ ಗುರಿಯಾಗಿದೆ. ಗಾಜಾದಲ್ಲಿ ಮುಂದಿನ ಹಂತದ ಯೋಜನೆ ಜಾರಿಗೆ ತರಲು ಕಡಿಮೆ ಸಮಯವಿದೆ ಎಂದು ನೆತನ್ಯಾಹು ಹೇಳಿದರು.

ರಾಹುಲ್ ಪ್ರಶ್ನೆಗಳಿಗೆ ಆಯೋಗ ಉತ್ತರಿಸಲಿ

ದೆಹಲಿ: 2024ರಲ್ಲಿ ನಡೆದ ಲೋಕಸಭೆ ಮತ್ತು ಕೆಲವು ರಾಜ್ಯಗಳ ವಿಧಾನಸಭೆ ಚುನಾವಣೆಗಳಲ್ಲಿ ಅಕ್ರಮವಾಗಿದೆ ಎಂಬ ರಾಹುಲ್ ಗಾಂಧಿ ಆರೋಪಗಳ ಕುರಿತು ಸುದ್ದಿಸಂಸ್ಥೆಗೆ ಪ್ರತಿಕ್ರಿಯಿಸಿರುವ ಕಾಂಗ್ರೆಸ್ ಸಂಸದ ಶಶಿ ತರೂರ್, ರಾಹುಲ್ ಗಂಭೀರ ಪ್ರಶ್ನೆಗಳನ್ನು ಕೇಳಿದ್ದಾರೆ. ಅವುಗಳಿಗೆ ಚುನಾವಣಾ ಆಯೋಗ ಉತ್ತರ ನೀಡಬೇಕು ಎಂದು ಹೇಳಿದ್ದಾರೆ.

ಇಂಡಿ ಒಕ್ಕೂಟ ದೆಹಲಿಯಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಪಾದಯಾತ್ರೆ ವೇಳೆ ಸುದ್ದಿಸಂಸ್ಥೆ ಜತೆ ಶಶಿ ತರೂರ್ ಮಾತನಾ ಡಿದರು. 'ನನ್ನ ಮಟ್ಟಿಗೆ ವಿಷಯ ತುಂಬಾ ಸರಳ. ನಕಲಿ ಮತ, ಒಬ್ಬ ಮತದಾರನ ಹಲವು ವಿಳಾಸ, ಒಂದೇ ವಿಳಾಸದಲ್ಲಿ ಹತ್ತಾರು ಜನ ಮೊದಲಾದ ಅಂಕಿ ಅಂಶಗಳ ಕುರಿತು ರಾಹುಲ್ ಕೇಳಿರುವ ಪ್ರಶ್ನೆಗಳು ಗಂಭೀರ ಸ್ವರೂಪದವಾಗಿವೆ. ಅವುಗಳಿಗೆ ಆಯೋಗ ಉತ್ತರ ನೀಡಿದರೆ ಆಯಿತು. ಅದು ಆಯೋಗದ ಜವಾಬ್ದಾರಿ. ಚುನಾವಣೆಗಳ ವಿಶ್ವಾಸಾರ್ಹತೆ ಬಗ್ಗೆ ಜನರ ಮನಸ್ಸಿನಲ್ಲಿ ಸಂದೇಹ ಉಳಿಯದಂತೆ ಮಾಡಬೇಕಾದ ಹೊಣೆ ಆಯೋಗದ್ದಾಗಿದೆ ಎಂದು ತರೂರ್ ಹೇಳಿದ್ದಾರೆ.

ಧನಕರ್ ಸಂಪರ್ಕಕ್ಕಿಲ್ಲ: ಹೇಬಿಯಸ್‌ಗೆ ಚಿಂತನೆ

ದೆಹಲಿ: ಜಗದೀಪ್ ಧನಕರ್ ಅವರು ಉಪ ರಾಷ್ಟ್ರಪತಿ ಹುದ್ದೆಗೆ ರಾಜೀನಾಮೆ ನೀಡಿದ ಬಳಿಕ ಯಾರ ಸಂಪರ್ಕಕ್ಕೂ ಸಿಗುತ್ತಿಲ್ಲ, ಅವರು ಎಲ್ಲಿದ್ದಾರೆ ಎಂಬ ಮಾಹಿತಿ ಇಲ್ಲ. ಅವರನ್ನು ಸಂಪರ್ಕಿಸುವ ಪ್ರಯತ್ನಗಳೂ ವಿಫಲವಾಗಿವೆ ಎಂದು ಶಿವಸೇನೆ (ಉದ್ಧವ್ ಬಣ) ರಾಜ್ಯ ಸಭಾ ಸದಸ್ಯ ಸಂಜಯ್ ರಾವತ್ ಸೋಮವಾರ ಹೇಳಿದ್ದಾರೆ. ಧನಕರ್ ಅವರು ಆರೋಗ್ಯದ ಕಾರಣ ನೀಡಿ ರಾಜೀನಾಮೆ ನೀಡಿದ್ದರು. ಹಾಗಾಗಿ ಅವರ ಆರೋಗ್ಯದ ಬಗೆಗೆ ಚಿಂತಿತರಾಗಿರುವ ಕೆಲವು ಸಂಸದರು ಸುಪ್ರೀಂ ಕೋರ್ಟ್‌ನಲ್ಲಿ ಹೇಬಿಯಸ್ ಕಾರ್ಪಸ್ ಅರ್ಜಿ ಸಲ್ಲಿಸಲು ಯೋಚಿಸಿದ್ದಾರೆ ಎಂದೂ ರಾವತ್ 'ಎಕ್ಸ್'ನಲ್ಲಿ ಬರೆದುಕೊಂಡಿದ್ದಾರೆ. ಸಂಸತ್ತಿನ ಮಳೆಗಾಲ ಅಧಿವೇಶನದ ಮೊದಲ ದಿನವೇ(ಜು.21) ಧನಕರ್ ರಾಜೀನಾಮೆ ನೀಡಿದರು.

Norican Group Shaping Industry

ಡೀಸಾ ಇಂಡಿಯಾ ಲಿಮಿಟೆಡ್
ನೋಂದಾಯಿತ ಕಚೇರಿ: ವರ್ಲ್ಡ್ ಟ್ರೇಡ್ ಸೆಂಟರ್ (ಡಬ್ಲ್ಯೂಟಿಸಿ), 6ನೇ ಮಹಡಿ, ಯೂನಿಟ್ ಸಂ. ಎಸ್-604, ಬ್ರಿಗೇಡ್ ಗೇಟ್‌ವೇ ಕ್ಯಾಂಪಸ್, 26/1, ಡಾ. ರಾಜ್‌ಕುಮಾರ್ ರಸ್ತೆ, ಮಲ್ಲೇಶ್ವರಂ-ರಾಜಾಜಿನಗರ, ಬೆಂಗಳೂರು-560055.
ಫೋನ್: +91 80 22496700. ಇ-ಮೇಲ್: bangalore@noricangroup.com www.disagroup.com
CIN No: L85110KA1984PLC006116

ಜೂನ್ 30, 2025ಕ್ಕೆ ಅಂತ್ಯಗೊಂಡ ತ್ರೈಮಾಸಿಕ ಲೆಕ್ಕ ಪರಿಶೋಧನೆಗೊಳ್ಳದ ಹಣಕಾಸು ಫಲಿತಾಂಶದ ಸಂಕ್ಷಿಪ್ತ ವರದಿ

(ರೂ. ಮಿಲಿಯನ್‌ಗಳಲ್ಲಿ)

ವಿವರಗಳು	ಸ್ವತಂತ್ರ			ಕ್ರೋಢೀಕರಿಸಿದ		
	30.06.2025ಕ್ಕೆ ಕೊನೆಗೊಂಡ 3 ತಿಂಗಳು	31.03.2025ಕ್ಕೆ ಕೊನೆಗೊಂಡ ವರ್ಷ	ಹಿಂದಿನ ವರ್ಷಕ್ಕೆ ಅನುಗುಣವಾಗಿ 30.06.2024ಕ್ಕೆ ಕೊನೆಗೊಂಡ 3 ತಿಂಗಳು	30.06.2025ಕ್ಕೆ ಕೊನೆಗೊಂಡ 3 ತಿಂಗಳು	31.03.2025ಕ್ಕೆ ಕೊನೆಗೊಂಡ ವರ್ಷ	ಹಿಂದಿನ ವರ್ಷಕ್ಕೆ ಅನುಗುಣವಾಗಿ 30.06.2024ಕ್ಕೆ ಕೊನೆಗೊಂಡ 3 ತಿಂಗಳು
	ಲೆಕ್ಕಪರಿಶೋಧನೆಗೊಳ್ಳದ	ಲೆಕ್ಕಪರಿಶೋಧಿತ	ಲೆಕ್ಕಪರಿಶೋಧನೆಗೊಳ್ಳದ	ಲೆಕ್ಕಪರಿಶೋಧನೆಗೊಳ್ಳದ	ಲೆಕ್ಕಪರಿಶೋಧಿತ	ಲೆಕ್ಕಪರಿಶೋಧನೆಗೊಳ್ಳದ
ವಹಿವಾಟಿನಿಂದ ಬಂದ ಆದಾಯ	1,017.3	3,846.9	940.3	1,019.7	3,903.4	959.3
ಅವಧಿಯ ನಿವ್ವಳ ಲಾಭ (ನಷ್ಟ)(ತೆರಿಗೆ ಅಸಾಧಾರಣ ಮತ್ತು/ ಅಥವಾ ಅಸಾಮಾನ್ಯ ಅಂಶಗಳ ಮೊದಲು)	176.5	734.5	201.1	175.4	741.4	205.4
ಅವಧಿಯ ನಿವ್ವಳ ಲಾಭ (ನಷ್ಟ) (ತೆರಿಗೆಯ ಮೊದಲು, ಅಸಾಧಾರಣ ಮತ್ತು/ ಅಥವಾ ಅಸಾಮಾನ್ಯ ಅಂಶಗಳ ನಂತರ)	176.5	721.9	201.1	175.4	686.9	205.4
ಅವಧಿಯ ನಿವ್ವಳ ಲಾಭ (ನಷ್ಟ) (ತೆರಿಗೆ, ಅಸಾಧಾರಣ ಮತ್ತು ಅಸಾಮಾನ್ಯ ಅಂಶಗಳ ನಂತರ)	131.5	537.4	148.7	130.4	504.2	151.9
ಅವಧಿಯ ಒಟ್ಟಾರೆ ವ್ಯಾಪಕ ಆದಾಯ (ತೆರಿಗೆಯ ನಂತರದ ಲಾಭ (ನಷ್ಟ) ಮತ್ತು ತೆರಿಗೆಯ ನಂತರದ ವ್ಯಾಪಕ ಆದಾಯ)	130.0	531.4	147.7	128.9	498.2	150.9
ಈಕ್ವಿಟಿ ಷೇರು ಬಂಡವಾಳ	14.5	14.5	14.5	14.5	14.5	14.5
ಇತರ ಇಕ್ವಿಟಿ (ಮರು-ಮೌಲ್ಯಮಾಪನ ಮೀಸಲು ಹೊರತುಪಡಿಸಿ ಹಿಂದಿನ ವರ್ಷದ ಲೆಕ್ಕ ಆಯವ್ಯಯ ಪಟ್ಟಿ ಪ್ರಕಾರ)	—	2,616.8	—	—	2,652.0	—
ಒಂದು ಷೇರಿನ ಗಳಿಕೆ (ಮುಖಬೆಲೆ ರೂ. 10/- ಪ್ರತಿ) ಮೂಲ : ರೂ.	90.43	369.55	102.26	89.67	346.72	104.46
ನಿಸಾರಗೊಂಡದ್ದು: ರೂ.	90.43	369.55	102.26	89.67	346.72	104.46

ಟಿಪ್ಪಣಿ: ಮೇಲೆ ಹೇಳಿದ ವರದಿಯು 2015ರ ಸೆಬಿ ನಿಯಂತ್ರಣಗಳ (ಪಟ್ಟಿ ಮಾಡುವಿಕೆ ಮತ್ತು ಇತರೆ ಘೋಷಣೆಗಳ ಅವಶ್ಯಕತೆಗಳು) 33ನೇ ನಿಯಂತ್ರಣದಡಿ ಸ್ಟಾಕ್ ಎಕ್ಸ್‌ಚೇಂಜ್‌ಗೆ ಸಲ್ಲಿಸಿರುವ ತ್ರೈಮಾಸಿಕಕ್ಕೆ ಕೊನೆಗೊಂಡ ಲೆಕ್ಕಪರಿಶೋಧನೆಗೊಳ್ಳದ ಹಣಕಾಸಿನ ಫಲಿತಾಂಶಗಳ ವಿವರಗಳ ಸಂಕ್ಷಿಪ್ತ ವಿವರ. ಪೂರ್ಣ ವಿವರವು ಸ್ಟಾಕ್ ಎಕ್ಸ್‌ಚೇಂಜ್ ಜಾಲತಾಣ www.bseindia.com ಮತ್ತು ಸಂಸ್ಥೆಯ ಜಾಲತಾಣ www.disagroup.com ನಲ್ಲಿ ಕೂಡ ಲಭ್ಯವಿದೆ.

ಡೀಸಾ ಇಂಡಿಯಾ ಲಿಮಿಟೆಡ್ ಪರವಾಗಿ

ಸ್ಥಳ : ಬೆಂಗಳೂರು
ದಿನಾಂಕ : ಆಗಸ್ಟ್ 11, 2025

ಲೋಕೇಶ್ ಸಕ್ಸೇನ,
ವ್ಯವಸ್ಥಾಪಕ ನಿರ್ದೇಶಕರು.

ನಾಲ್ಕು ನದಿಗಳ ಹೆಸರಿನ ಸಂಸದರ ವಸತಿ ಸಮುಚ್ಚಯ ಉದ್ಘಾಟನೆ

ದೆಹಲಿ: ಲೋಕಸಭೆ-ರಾಜ್ಯಸಭೆ ಸದಸ್ಯರಿಗಾಗಿ ದೆಹಲಿಯಲ್ಲಿ ಹೊಸದಾಗಿ ನಿರ್ಮಿಸಲಾಗಿರುವ 'ಸಂಸದರ ವಸತಿ ಸಮುಚ್ಚಯ'ವನ್ನು ಪ್ರಧಾನಿ ನರೇಂದ್ರ ಮೋದಿ ಸೋಮವಾರ ಉದ್ಘಾಟಿಸಿದರು. ಬಳಿಕ ಮಾತನಾಡಿದ ಪ್ರಧಾನಿ, ಕೃಷ್ಣಾ, ಗೋದಾವರಿ, ಹೂಗ್ಲಿ ಮತ್ತು ಕೋಸಿ ನದಿಗಳ ಹೆಸರುಗಳಿರುವ ಈ ನಾಲ್ಕು ವಸತಿ ಸಂಕೀರ್ಣಗಳ ಅಂಗಳದಲ್ಲಿ ದೇಶದ ವಿವಿಧೆಡೆಯಲ್ಲಿ ಆಚರಿಸಲಾಗುವುದು ಎಲ್ಲಾ ಹಬ್ಬಗಳನ್ನೂ ಆಚರಿಸುವಂತೆ ಆಗಬೇಕು ಎಂದು ಸಲಹೆ ನೀಡಿದರು. ಈ ಸಂದರ್ಭ ಲೋಕಸಭೆ ಸ್ಪೀಕರ್ ಓಂ ಬಿರ್ಲಾ. ವಸತಿ ಸಚಿವ ಮನೋಹರ ಲಾಲ್, ಸಂಸದೀಯ ಸಚಿವ ಕಿರಣ್ ರಿಜಿಜು ಮತ್ತಿತರರು ಉಪಸ್ಥಿತರಿದ್ದರು.

ಚೆಮ್ ಫೈನಾನ್ಸ್ ಲಿ.
No.19, KCD Complex, 3rd Cross, Mission Road, Bangalore-27. Tel: 22221066, 22221115

ಚಿನ್ನದ ಹರಾಜು ಸೂಚನೆ

ಸಾಲಗಾರರು ಮತ್ತು ಸಾರ್ವಜನಿಕರು, ಈ ಕೆಳಗಿನ ಖಾತೆಗಳಲ್ಲಿ ಅಡವಿಟ್ಟ ಚಿನ್ನಾಭರಣಗಳ ಸಾರ್ವಜನಿಕ ಹರಾಜನ್ನು ಈ ಕೆಳಗಿನ ದಿನಾಂಕಗಳಲ್ಲಿ ನಡೆಸಲು ಉದ್ದೇಶಿಸಲಾಗಿದೆ ಎಂದು ಸೂಚಿಸಲಾಗಿದೆ. ನೋಂದಾಯಿತ ಪತ್ರಗಳ ಮೂಲಕ ತಿಳಿಸಲಾಗಿದ್ದರೂ ಸಾಲದ ಮೊತ್ತವನ್ನು ಪಾವತಿಸಲು ವಿಫಲರಾದ ಡೀಫಾಲ್ಟ್ ಮಾಡಿದ ಗ್ರಾಹಕರ ಚಿನ್ನಾಭರಣಗಳ ಹರಾಜು ಮಾಡಲಾಗುವುದು. ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು ಶಾಖಾ ವ್ಯವಸ್ಥಾಪಕರನ್ನು ಸಂಪರ್ಕಿಸಿ.

26.08.2025. **ಹೊಸಕೋಟೆ** : HKT13026, 13034, 13120, 13158, 13189, 13225, 13377,13416, 13418, 13419, 13449, 13450, 13460, 13463, 13514, 13522, 13545, 13566, 15245, **ರಾಮನಗರ** : RMN450, 868 **ಚಿಂತಾಮಣಿ:** CND10007, 10060, 10087, 10101, 10136, 10141, 10164, 10173, 10196, 10202, 10223, 10241, 10251, 10252, 10255. **ಮಂಡ್ಯ** : MDY11094, 11159, 11172. **ಕಾಲೇಜ್ ರೋಡ್** : DBR1082, 1135 **ಬಸವನಗರ**: BSV3444.
28.08.2025. **ಬೊಮ್ಮನಹಳ್ಳಿ:** BMH300. **ದೊಡ್ಡಬಳ್ಳಾಪುರ** : DBP13805, 13825, 13846, 13888, 13905, 13910, 14040, 14051 14099, 14112, 14144, 14146, 14168, 14188, 14190, 14198, 14201, 14232. **ಮಿಷನ್ ರೋಡ್**: CFL13351, 13368, 13390, 13394, 13405, 13439, 13438, 13448,13458, 13473, 13483, 13484, 13485, 13487, 14009, 14109, 14110, 14111 **ಚಾಮರಾಜನಗರ**: CMR12669, 12679, 12938, 13000, 14710, 14767, 14158
29.08.2025. **ಕೆ. ಆರ್. ಪುರಂ** : KRP9638, 9739, 9740, 9781, 10986, 11175, 11180, 11210, 11225, 11293, 11298, 11414 **ಮೈಸೂರು - ಕೊಪ್ಪಳ** : MY2-107, 113. **ಮಾರತ್ತ ಹಳ್ಳಿ**: MRT7507, 7517, 7524, 7574, 7575, 7576, 8318, 8319, 8320, 8321 **ಯಲಹಂಕ** : YHA421, 422, 423, 445, 450, 456, 585.
30.08.2025. **ತಿಪ್ಪಸಂದ್ರ** : TIP5876, 5877, 5878, 5901, 5906, 5921, 5922, 5936, 5944, 5953, 5985, 5999. **ಚಿಕ್ಕ ಬಳ್ಳಾಪುರ** : CHK4118, 4119, 4120. **ಸುಂಕದಕಟ್ಟೆ**: SKT682, **ಹುಬ್ಬಳ್ಳಿ** : HBL2853, 2901, 2910, 2935, 2940, 2951, 2952. **ಮೈಸೂರು** MYS4883, 4914, 5408, 5424, 5425, 5471, 5483, 5506, 5518, 5551 **ಮಾಲೂರು**: MLR10354, 11257, 11338

15 ತಿಂಗಳ ಮಗುವಿಗೆ ಥಳಿತ: ನೊಯಿಡಾ ಡೇಕೇರ್ ಹಾರರ್

ನೊಯಿಡಾ: ನಗರದ 'ಡೇ ಕೇರ್'ನಲ್ಲಿ 15 ತಿಂಗಳ ಕಂದಮ್ಮನ ಮೇಲೆ ಭಾರೀ ದೌರ್ಜನ್ಯ, ಹಿಂಸಾಚಾರ ನಡೆದಿದ್ದು. ಅದರ ವಿಡಿಯೊ ವೈರಲ್ ಆಗಿದೆ. ದೃಶ್ಯಾವಳಿಗಳು ಬಲು ಆಘಾತಕಾರಿಯಾಗಿದ್ದು, ಪುಟ್ಟ ಕಂದಮ್ಮಗಳನ್ನು ಡೇ ಕೇರ್‌ನಲ್ಲಿ ಬಿಡುವ ಪೋಷಕರು ಮಕ್ಕಳ ಸುರಕ್ಷತೆಗೆ ಬಗ್ಗೆ ಚಿಂತೆಗೀಡಾಗುವಂತೆ ಮಾಡಿದೆ. ನೊಯಿಡಾ ಸೆಕ್ಟರ್-137ರ ಸೊಸೈಟಿಯಲ್ಲಿರುವ ಡೇಕೇರ್ ಕೆಲಸದಾಕೆ, ಮಗುವಿನ ತೊಡೆಗೆ ಕಚ್ಚಿ, ಮನಬಂದಂತೆ ಥಳಿಸಿದ್ದಾಳೆ. ಬೆಲ್ಟ್‌ನಿಂದ ಹೊಡೆದಿದ್ದಾಳೆ. ನೆಲಕ್ಕೂ ಅಪ್ಪಳಿಸಿದ್ದಾಳೆ. ಇದೇ ಆ.4ರಂದು ಘಟನೆ ನಡೆದಿದ್ದು, ಡೇಕೇರ್‌ನ ಸಿಸಿಟಿವಿಯಲ್ಲಿ ದೃಶ್ಯಗಳು ಸೆರೆಯಾಗಿವೆ. ಮಗುವನ್ನು ಪೋಷಕರು ಮನೆಗೆ ಕರೆತಂದ ನಂತರ ಮಗು ನಿರಂತರ ಅಳುತ್ತಿತ್ತು. ಬಟ್ಟೆ ಬದಲಿಸುವಾಗ ಮಗುವಿನ ಎರಡೂ ತೊಡೆಗಳಲ್ಲಿ ಹಲ್ಲಿನಿಂದ ಕಚ್ಚಿರುವ ಗುರುತು ಮೂಡಿತ್ತು. ಪೋಷಕರು ಡೇಕೇರ್ ಸಿಸಿಟಿವಿ ಪರಿಶೀಲಿಸಿದಾಗ ಕೆಲಸದಾಕೆಯ ಕ್ರೌರ್ಯ ಬಯಲಾಗಿದೆ. ಪೋಷಕರು ಈ ಬಗ್ಗೆ ಡೇಕೇರ್ ಮುಖ್ಯಸ್ಥರಿಗೆ ದೂರಿದರೆ ಅವರು ಪೋಷಕರನ್ನೇ ಅವಾಚ್ಯ ಶಬ್ದಗಳಿಂದ ನಿಂದಿಸಿ ಬೆದರಿಕೆ ಹಾಕಿದ್ದಾರೆ. ಪೋಷಕರು ಪೊಲೀಸರಿಗೆ ದೂರು ನೀಡಿದ್ದು, ಪೊಲೀಸರು ಕೆಲಸದಾಕೆಯನ್ನು ಬಂಧಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ಸಂಸದೆ ಪ್ರಿಯಾಂಕಾ ಕಾಣೆ: ಬಿಜೆಪಿ ದೂರು

ವಯನಾಡ್: ಕೇರಳ ರಾಜ್ಯದ ವಯನಾಡು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಸಂಸದೆ ಕಳೆದ ಮೂರು ತಿಂಗಳಿಂದಲೂ ಕಾಣೆಯಾಗಿದ್ದಾರೆ ಎಂದು ಬಿಜೆಪಿಯ ಪರಿಶಿಷ್ಟ ಪಂಗಡ ಮೋರ್ಚಾದ ಅಧ್ಯಕ್ಷ ಪಲ್ಲಿಯಾರ ಮುಕುಂದನ್ ಅವರು ವಯನಾಡು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ಸೋಮವಾರ ದೂರು ಸಲ್ಲಿಸಿದ್ದಾರೆ. ವಯನಾಡು ಜನರನ್ನು ಲೋಕಸಭೆಯಲ್ಲಿ ಪ್ರತಿನಿಧಿಸುವ ಪ್ರಿಯಾಂಕಾ ಅವರು ಕ್ಷೇತ್ರದಲ್ಲಿ ಕಳೆದ 3 ತಿಂಗಳಿನಿಂದಲೂ ಕಾಣಿಸುತ್ತಲೇ ಇಲ್ಲ. ಭೂಕುಸಿತ ದುರಂತದ ಚೂರಲ್‌ಮಲಾ, ಮುಂಡಕ್ಕೈ ಪ್ರದೇಶಕ್ಕೂ ಈವರೆಗೂ ಭೇಟಿಯನ್ನೇ ನೀಡಿಲ್ಲ ಎಂದೂ ದೂರಿನಲ್ಲಿ ತಿಳಿಸಿದ್ದಾರೆ.

ಮಗು ಹೆಣ್ಣೆಂದು ವಿಷ ಹಾಕಿದ ಯೋಧ ಅಪ್ಪ

ಅಗರ್ತಲಾ: ಹೆಣ್ಣು ಮಗು ಜನಿಸಿತೆಂದು ಬೇಸರಗೊಂಡಿದ್ದ ತ್ರಿಪುರ ರಾಜ್ಯ ರೈಫಲ್ಸ್ ಪಡೆಯ ಸೇನಾಧಿಕಾರಿ, ಸಮಯ ನೋಡಿಕೊಂಡು ಪುಟ್ಟ ಕಂದಮ್ಮನಿಗೆ ವಿಷ ಉಣಿಸಿ ಕೊಂದಿದ್ದಾನೆ. ತ್ರಿಪುರದ ಖೋವಾಯಿ ಜಿಲ್ಲೆಯ ಅಹೆಡಬಾರಿ

ಪಟ್ಟಣದಲ್ಲಿ ದುಷ್ಕೃತ್ಯ ನಡೆದಿದೆ. ಸುದ್ದಿ ತಿಳಿಯುತ್ತಲೇ ಕುಟುಂಬದವರು ಮಗುವನ್ನು ಮೊದಲು ಖೋವಾಯಿ ಜಿಲ್ಲಾಸ್ಪತ್ರೆಗೆ ದಾಖಲಿಸಿ, ರಾಜಧಾನಿ ಅಗರ್ತಲಾದ ಜಿಬಿ ಆಸ್ಪತ್ರೆಗೆ ಕರೆದೊಯ್ದಿದ್ದಾರೆ. ಅಷ್ಟರಲ್ಲಾಗಲೇ ಮಗು ಮೃತಪಟ್ಟಿದೆ. ಸದ್ಯ 'ಎಡಿಸಿ' ಖುಮುಲ್ವಾಂಗ್ ಪ್ರಧಾನ ಕಚೇರಿಯಲ್ಲಿ 10ನೇ ಬೆಟಾಲಿಯನ್‌ನಲ್ಲಿರುವ ಮಗುವಿನ ತಂದೆ ಟಿಎಸ್‌ಆರ್ ರಾಥೀಂದ್ರಾ ಡೆಬ್ಬಮಾರ್ ಎಂಬಾತನನ್ನು ಬಂಧಿಸಿದ ಪೊಲೀಸರು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೆ. ನ್ಯಾಯಾಧೀಶರು ಹೆಚ್ಚಿನ ವಿಚಾರಣೆಗಾಗಿ 3 ದಿನಗಳ ಕಾಲ ಪೊಲೀಸ್ ಕಸ್ಟಡಿಗೆ ಒಪ್ಪಿಸಿದ್ದಾರೆ. ಎರಡೂ ಮಕ್ಕಳು ಹೆಣ್ಣಾಗಿದ್ದಕ್ಕೆ ಪತಿ ಬೇಸರಗೊಂಡಿದ್ದರು. ಅದೇ ಕಾರಣಕ್ಕೆ ನನಗೆ ಹಿಂಸೆ ನೀಡುತ್ತಿದ್ದರು ಮಗುವಿನ ತಾಯಿ ಮಿಥಾಲಿ ಡೆಬ್ಬಮಾರ್ ದೂರಿದ್ದು, ಕೊಲೆ ಪ್ರಕರಣ ದಾಖಲಿಸಿರುವ ಪೊಲೀಸರು ತನಿಖೆ ನಡೆಸಿದ್ದಾರೆ.

ಮೇಧಾ ಪಾಟ್ಕರ್ ಶಿಕ್ಷೆ ಕಾಯಂ: ಸುಪ್ರೀಂ

ದೆಹಲಿ: ದೆಹಲಿ ಲೆಫ್ಟಿನೆಂಟ್ ಗವರ್ನರ್ ವಿನಯ್ ಕುಮಾರ್(ವಿ.ಕೆ.) ಸಕ್ಸೇನಾ 23 ವರ್ಷಗಳ ಹಿಂದೆ ದಾಖಲಿಸಿದ್ದ ಕ್ರಿಮಿನಲ್ ಮಾನನಷ್ಟ

ಮೊಕದ್ದಮೆಯಲ್ಲಿ ಸಾಮಾಜಿಕ ಕಾರ್ಯಕರ್ತೆ ಮೇಧಾ ಪಾಟ್ಕರ್ ದೋಷಿ ಎಂದಿರುವ ಸುಪ್ರೀಂ ಕೋರ್ಟ್, ವಿಚಾರಣಾ ನ್ಯಾಯಾಲಯ ವಿಧಿಸಿದ್ದ ಶಿಕ್ಷೆಯನ್ನು ಖಾಯಂಗೊಳಿಸಿದೆ. ಆದರೆ, 1 ಲಕ್ಷ ರು. ದಂಡ ಪಾವತಿ ಶಿಕ್ಷೆಯನ್ನು ಕೈಬಿಟ್ಟಿದೆ. ಮೇಧಾಪಾಟ್ಕರ್ ನಡವಳಿಕೆ ಪರಿಗಣಿಸಿ, ಅವರ ಮೇಲ್ವಿಚಾರಣೆಗೆ ಸಂಬಂಧಿಸಿದ ಸೆಷನ್ಸ್ ನ್ಯಾಯಾಲಯದ ಆದೇಶ ಜಾರಿಗೆ ಬರುವುದಿಲ್ಲ ಎಂದೂ ಸುಪ್ರೀಂ ಕೋರ್ಟ್ ಹೇಳಿದೆ. ನ್ಯಾಯಮೂರ್ತಿಗಳಾದ ಎಂ.ಎಂ.ಸುಂದರೇಶ್ ಮತ್ತು ಎನ್.ಕೋಟೀಶ್ವರ್ ಸಿಂಗ್ ಅವರ ಪೀಠ, 70 ವರ್ಷ ವಯಸ್ಸಾಗಿರುವ ಮೇಧಾ ಅವರನ್ನು ಉತ್ತಮ ನಡವಳಿಕೆ ಮೇರೆಗೆ ಬಿಡುಗಡೆ ಮಾಡಲಾಗಿದೆ. ಆದರೆ, ಅವರು ಪ್ರತಿ 3 ವರ್ಷಗಳಿಗೊಮ್ಮೆ ವಿಚಾರಣಾ ನ್ಯಾಯಾಲಯಕ್ಕೆ ಹಾಜರಾಗಬೇಕಿದೆ. ಈ ವಿಚಾರದಲ್ಲಿ ದೆಹಲಿ ಹೈಕೋರ್ಟ್ ಆದೇಶ ಜಾರಿಯಲ್ಲಿರುತ್ತದೆ. ಅದರಲ್ಲಿ ಹಸ್ತಕ್ಷೇಪ ಮಾಡುವುದಿಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ವಿ.ಕೆ.ಸಕ್ಸೇನಾ 25 ವರ್ಷಗಳ ಹಿಂದೆ ಗುಜರಾತ್ ಎನ್‌ಜಿಒ ಮುಖ್ಯಸ್ಥರಾಗಿದ್ದಾಗ ಅವರಿಂದ ಹಣ ವಂಚನೆ ಆಗಿದೆ ಎಂದು ಮೇಧಾ ಆರೋಪಿಸಿದ್ದರು. ಆ ಸಂಬಂಧ 2022ರಲ್ಲಿ ಸಕ್ಸೇನಾ ಮಾನಹಾನಿ ದಾವೆ ಹೂಡಿದ್ದರು.

ಧರ್ಮಸ್ಥಳ: ರಾಡರ್ ಡ್ರೋನ್ ವಾಪಸ್

ಧರ್ಮಸ್ಥಳ: ಗ್ರಾಮದ ವಿವಿಧೆಡೆ ಹಲವಾರು ಮೃತದೇಹಗಳನ್ನು ಹೂತು ಹಾಕಿರುವುದಾಗಿ ಹೇಳಿಕೆ ನೀಡಿದ ಪ್ರಕರಣದ ತನಿಖೆಯಲ್ಲಿ ಅತ್ಯಂತ ಮಹತ್ವದ ಬೆಳವಣಿಗೆ ನಡೆದಿದ್ದು, ಜಿ.ಪಿ.ಆರ್ ಯಂತ್ರವನ್ನು ಉಪಯೋಗಿಸಿ ಎಸ್‌ಐಟಿ ತನಿಖೆ ಆರಂಭಿಸಿದೆ. ಆದರೆ ರಾಡರ್ ಡ್ರೋನ್ ಸಹಕಾರದೊಂದಿಗೆ 13ನೇ

ಪಾಯಿಂಟ್‌ನಲ್ಲಿ ಮೂರು ಸುತ್ತು ಹೊಡೆದು ವಾಪಸ್ ಹೋಗಿದೆ. ಎಸ್.ಐ.ಟಿ ತಂಡ ಹಾಗೂ ಜಿ.ಪಿ.ಆರ್ ತಜ್ಞರ ತಂಡ ಸಾಕ್ಷಿ ದೂರುದಾರ ಗುರುತಿಸಿದ 13ನೇ ಸ್ಥಳದಲ್ಲಿ ಜಿ.ಪಿ.ಆರ್.ನಿಂದ ಪರಿಶೀಲನೆಗೆ ಸಿದ್ಧತೆಗಳು ನಡೆದಿದ್ದು, ಜಿ.ಪಿ.ಆರ್ ಯಂತ್ರವನ್ನು ನೇತ್ರಾವತಿ ಸ್ನಾನಘಟ್ಟದ ಸಮೀಪ ಗುರುತಿಸಿದ 13ನೇ ಸ್ಥಳಕ್ಕೆ ತಂದು ಕಾರ್ಯಾಚರಣೆ ಆರಂಭಿಸಿದರು. ಈ ವರೆಗೆ 12 ಸ್ಥಳ ಹಾಗೂ 14, 15, 16, 16ನೇ(ಎ) ಸ್ಥಳದಲ್ಲಿ ಶೋಧಕಾರ್ಯ ನಡೆಸಿದ್ದು, 13ನೇ ಸ್ಥಳದಲ್ಲಿ ಮಾತ್ರ ಶೋಧಕಾರ್ಯ ಬಾಕಿ ಉಳಿದಿದೆ. 13ನೇ ಸ್ಥಳದಲ್ಲಿ ಈ ಹಿಂದೆ ಯೋಜಿಸಿದ್ದಂತೆ, ಜಿಪಿಆರ್ ಬಳಕೆ ಮಾಡಿ ಶೋಧಕಾರ್ಯ ಕೂಡ ನಿಖರ ಫಲಿತಾಂಶ ಬರುವ ಸಾಧ್ಯತೆಗಳಿಲ್ಲ. ಹೀಗಾಗಿ 13ನೇ ಜಾಗದ ಶೋಧ ಕಗ್ಗಂಟಾಗಿದೆ, ಪಕ್ಕದಲ್ಲೇ ಕಿಂಡಿ ಅಣೆಕಟ್ಟು ಹಾಗೂ ಮೆಸ್ಕಾಂನ ಟ್ರಾನ್ಸ್‌ಫಾರ್ಮರ್ ಕಂಬಗಳು ಕೂಡಾ ಇವೆ. ಹೀಗಾಗಿ ಅಗೆಯುವ ಮುನ್ನ ರೇಡಾರ್ ಮೂಲಕ ಭೂಮಿ ಒಳಗಡೆ ಏನಿದೆ ಎಂಬುದನ್ನು ಪತ್ತೆ ಹಚ್ಚಲು ನಿರ್ಧರಿಸಲಾಗಿದೆ. ಮಂಗಳವಾರ ಉತ್ಖನನ ಕಾರ್ಯ ಮುಂದುವರಿಯಲಿದೆ.

ಐಎಸ್‌ಬಿಟಿ ಕಾಶ್ಮೀರಿ ಗೇಟ್ ಬಳಿ ಯಮುನಾ ನದಿ ದಡದಲ್ಲಿ ಪ್ರತಿಮೆ ಸ್ಥಾಪನೆ

ಯಮುನಾ ದೇವಿಯ ಪ್ರತಿಮೆ ಅನಾವರಣ

ದೆಹಲಿ: ದೆಹಲಿ ಅಭಿವೃದ್ಧಿ ಪ್ರಾಧಿಕಾರ (ಡಿ.ಡಿ.ಎ) ಐಎಸ್‌ಬಿಟಿ ಕಾಶ್ಮೀರಿ ಗೇಟ್ ಬಳಿಯ ಯಮುನಾ ನದಿ ದಡದಲ್ಲಿ ಸ್ಥಾಪಿಸಿರುವ ಭವ್ಯ ಯಮುನಾ ದೇವಿ ಪ್ರತಿಮೆಯನ್ನು ದೆಹಲಿಯ ಲೆಫ್ಟಿನೆಂಟ್ ಗವರ್ನರ್ ವಿನಯ್ ಕುಮಾರ್ ಸಕ್ಸೇನಾ ಅವರು ಸೋಮವಾರ ಅನಾವರಣಗೊಳಿಸಿದರು.

ದೆಹಲಿಯಲ್ಲಿ ಇದೇ ಮೊದಲ ಬಾರಿಗೆ ಯಮುನಾ ದೇವಿಯ ಸಾಂಸ್ಕೃತಿಕ, ಆಧ್ಯಾತ್ಮಿಕ ಮತ್ತು ಐತಿಹಾಸಿಕ ಪರಂಪರೆಯನ್ನು ಚಿತ್ರಿಸುವ ಪ್ರತಿಮೆಯನ್ನು ಸ್ಥಾಪಿಸಲಾಗಿದೆ. ಲೆಫ್ಟಿನೆಂಟ್ ಗವರ್ನರ್ ವಿನಯ್ ಕುಮಾರ್ ಸಕ್ಸೇನಾ ಅವರು 'ಎಕ್ಸ್'ನಲ್ಲಿ ಈ ಮಾಹಿತಿ ಹಂಚಿಕೊಂಡಿದ್ದು, 'ಈ ಪ್ರತಿಮೆಯು ಯಮುನಾ ನದಿ ಪ್ರದೇಶದ ಪುನರುಜ್ಜೀವನದಲ್ಲಿ ಒಂದು ಪ್ರಮುಖ ಮೈಲಿಗಲ್ಲು. ಪ್ರಧಾನಿ ನರೇಂದ್ರ ಮೋದಿಯವರ ದೃಷ್ಟಿಕೋನಕ್ಕೆ ಅನುಗುಣವಾಗಿದೆ. ಯಮುನಾ ಕೇವಲ ನದಿಯಲ್ಲ, ನಮ್ಮ ಸಂಸ್ಕೃತಿ ಮತ್ತು ನಂಬಿಕೆಗಳನ್ನು ರೂಪಿಸಿದ ನಮ್ಮ ಜೀವಂತ ಪರಂಪರೆಯ ಭಾಗ. ಹಾಗಾಗಿ ಭವಿಷ್ಯದ ಪೀಳಿಗೆಗೆ ಅದರ ಪಾವಿತ್ರ್ಯವನ್ನು ಕಾಪಾಡಿಕೊಳ್ಳುವಂತೆ ಪ್ರತಿಮೆಯು ನಮ್ಮನ್ನು ನೆನಪಿಸುತ್ತದೆ' ಎಂದು ಬರೆದುಕೊಂಡಿದ್ದಾರೆ.

10 ಅಡಿ ಎತ್ತರದ ಪ್ರತಿಮೆ: ಯಮುನೆಯ ಪ್ರತಿಮೆ 10 ಅಡಿ ಎತ್ತರವಿದ್ದು, 7 ಅಡಿ ಎತ್ತರದ ವೇದಿಕೆಯ ಮೇಲೆ ಸ್ಥಾಪಿಸಲಾಗಿದೆ. ಯಮುನೆ ತನ್ನ ವಾಹನ ಆಮೆಯ (ಕೂರ್ಮ) ಮೇಲೆ ನಿಂತಿರುವುದನ್ನು ತೋರಿಸಲಾಗಿದೆ. ಆಮೆ ಸ್ಥಿರತೆ, ತಾಳ್ಮೆ ಮತ್ತು ಭೂಮಿಯ ಸಂಕೇತವಾಗಿದ್ದರೆ, ಮಾತೆ ಯಮುನೆಯ ಕೈಯಲ್ಲಿ ಒಂದು ಮಡಕೆ ಇದ್ದು, ಅದು ಸಮೃದ್ಧಿ, ಫಲವತ್ತತೆ ಮತ್ತು ಜೀವ ನೀಡುವ ನೀರಿನ ಸಂಕೇತವಾಗಿದೆ. ಆಮೆಯ ಮುಖ ಪ್ರತಿಮೆಯಿಂದ ಕೆಲವು ಹೆಜ್ಜೆಗಳ ದೂರದಲ್ಲಿ ಹರಿಯುವ ನದಿಯ ಹರಿವಿನ ಕಡೆಗಿದೆ.

ಮೂರು ತಿಂಗಳು ಶ್ರಮಿಸಿದ ಕುಶಲಕರ್ಮಿಗಳು: ದೆಹಲಿಯ ನುರಿತ ಕುಶಲಕರ್ಮಿಗಳು ಮೂರು ತಿಂಗಳಲ್ಲಿ ಈ ಪ್ರತಿಮೆಯನ್ನು ಸಿದ್ಧಪಡಿಸಿದ್ದಾರೆ. 150 ಕೆ.ಜಿ ತೂಕದ ಪ್ರತಿಮೆಯನ್ನು ಗ್ರಾನೈಟ್ ಮತ್ತು ಗ್ರಾಫೈಟ್ ಪುಡಿಯ ಮಿಶ್ರಣದಿಂದ ತಯಾರಿಸಲಾಗಿದೆ. ಇವು ಪ್ರತಿಮೆಯ ದೀರ್ಘ ಬಾಳಿಕೆ ಮತ್ತು ಹವಾಮಾನ ನಿರೋಧಕವಾಗಿವೆ. ಮತ್ತೊಂದೆಡೆ, ದೆಹಲಿ ಸರಕಾರ ಮತ್ತು ಡಿಡಿಎ ಯಮುನಾ ನದಿಯನ್ನು ಸ್ವಚ್ಛ ಮತ್ತು ಸುಂದರವಾಗಿಸಲು ನಿರಂತರವಾಗಿ ಕೆಲಸ ಮಾಡುತ್ತಿವೆ.

ಹಸಿರು ಪ್ರವಾಸೋದ್ಯಮ ಅಭಿವೃದ್ಧಿ

ನದಿಯ ಉದ್ದಕ್ಕೂ ಇರುವ ಹಸಿರು ಪ್ರದೇಶಗಳು ಮತ್ತು ಉದ್ಯಾನವನಗಳನ್ನು ಡಿ.ಡಿ.ಎ ಅಭಿವೃದ್ಧಿಪಡಿಸಲಾಗುತ್ತಿದೆ. ಅವುಗಳಲ್ಲಿ ಪ್ರಮುಖವಾದವು ಅಸಿತಾ ಪೂರ್ವ ಉದ್ಯಾನವನ. ಹಸಿರು ಪ್ರವಾಸೋದ್ಯಮ ತಾಣವಾಗಿ ಅದನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ಅದು ಯಮುನಾ ನದಿಯನ್ನು ನದಿ ದಂಡೆಯಾಗಿ ಸ್ಥಾಪಿಸುವ ಪ್ರಯತ್ನದ ಭಾಗವಾಗಿದೆ. ಪ್ರತಿಮೆಯು ದೆಹಲಿಯವರಿಗೆ ಮಾತ್ರವಲ್ಲದೆ, ದೇಶಾದ್ಯಂತದ ಜನರಿಗೆ ಯಮುನಾ ನದಿಯ ಮಹತ್ವ ಮತ್ತು ಅದರ ಪಾವಿತ್ರ್ಯದ ಸಂರಕ್ಷಣೆಯ ಬಗ್ಗೆ ಅರಿವು ಮೂಡಿಸುತ್ತದೆ ಎಂದು ಲೆಫ್ಟಿನೆಂಟ್ ಗವರ್ನರ್ ವಿನಯ್ ಕುಮಾರ್ ಸಕ್ಸೇನಾ ಆಶಿಸಿದ್ದಾರೆ.

ತೆರಿಗೆ ವಂಚನೆಯಲ್ಲೂ ರಾಜ್ಯ ಮುಂದು

ರಾಜ್ಯದಲ್ಲಿ ಕಳೆದ ಆರ್ಥಿಕ ವರ್ಷದಲ್ಲಿ 39,577 ಕೋಟಿ ರು. ಜಿಎಸ್‌ಟಿ ತೆರಿಗೆ ವಂಚನೆ ಪತ್ತೆ

ದೆಹಲಿ: ದೇಶದಲ್ಲಿಯೇ ಅತಿ ಹೆಚ್ಚು ಜಿಎಸ್‌ಟಿ ಪಾವತಿಸುವ ರಾಜ್ಯಗಳಲ್ಲಿ ಕರ್ನಾಟಕ ಎರಡನೇ ಸ್ಥಾನದಲ್ಲಿದೆ. ಇದೇ ವೇಳೆ ತೆರಿಗೆ ವಂಚನೆ ಪ್ರಕರಣಗಳಲ್ಲೂ ಕರ್ನಾಟಕ ಮುಂಚೂಣಿಯಲ್ಲಿದೆ.

2024-25ರ ಆರ್ಥಿಕ ವರ್ಷದಲ್ಲಿ ಕರ್ನಾಟಕದಲ್ಲಿ ₹39,577 ಕೋಟಿ ತೆರಿಗೆ ವಂಚನೆಯನ್ನು ಕೇಂದ್ರ ಜಿಎಸ್‌ಟಿ ಅಧಿಕಾರಿಗಳು ಪತ್ತೆ ಮಾಡಿದ್ದಾರೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಸೋಮವಾರ ಸಂಸತ್ತಿಗೆ ಮಾಹಿತಿ ನೀಡಿದ್ದಾರೆ.

ಈ ಬಗ್ಗೆ ಲೋಕಸಭೆಗೆ ಲಿಖಿತ ಉತ್ತರ ನೀಡಿದ ಅವರು 'ಯುಪಿಐ ವ್ಯವಹಾರ ಆಧಾರವಾಗಿಟ್ಟುಕೊಂಡು ಕೇಂದ್ರ ಜಿಎಸ್‌ಟಿ ಅಧಿಕಾರಿಗಳು ಯಾವುದೇ ನೋಟಿಸ್ ಜಾರಿ ಮಾಡಿಲ್ಲ' ಎಂದು ಸ್ಪಷ್ಟಪಡಿಸಿದರು.

ವ್ಯವಹಾರಗಳ ಮೌಲ್ಯಮಾಪನ ಮಾಡದೆ ಕರ್ನಾಟಕ ಸೇರಿ ದೇಶದಲ್ಲಿ ಸಣ್ಣ ವರ್ತಕರಿಗೆ ಹಾಗೂ ಬೀದಿ ಬದಿ ವ್ಯಾಪಾರಿಗಳಿಗೆ ಸರ್ಕಾರ ನೋಟಿಸ್ ಜಾರಿ ಮಾಡಿದೆಯೇ ಎನ್ನುವ ಪ್ರಶ್ನೆಗೆ ಅವರು ಉತ್ತರಿಸಿದ್ದು, ಕಳೆದ ತಿಂಗಳು ಬೆಂಗಳೂರಿನ ಹಲವು ಸಣ್ಣ ವರ್ತಕರಿಗೆ ಅವರ ಯುಪಿಐ ವಹಿವಾಟುಗಳನ್ನು ಆಧರಿಸಿ ಭಾರಿ ಪ್ರಮಾಣ ವ್ಯಾಪಾರಿಗಳಿಗೆ ಸರ್ಕಾರ ನೋಟಿಸ್ ಜಾರಿ ಮಾಡಿದೆಯೇ ಎನ್ನುವ ಪ್ರಶ್ನೆಗೆ ಅವರು ಇಲ್ಲ ಎಂದು ಉತ್ತರಿಸಿದ್ದಾರೆ.

ಕಳೆದ ತಿಂಗಳು ಬೆಂಗಳೂರಿನ ಹಲವು ಸಣ್ಣ ವರ್ತಕರಿಗೆ ಅವರ ಯುಪಿಐ ವಹಿವಾಟುಗಳನ್ನು ಆಧರಿಸಿ ಭಾರಿ ಪ್ರಮಾಣದ ಜಿಎಸ್‌ಟಿ ಪಾವತಿ ಮಾಡಬೇಕು ಎಂದು ಜಿಎಸ್‌ಟಿ ರಾಜ್ಯ ಕ್ಷೇತ್ರಾಧಿಕಾರಿಗಳು ನೋಟಿಸ್ ಜಾರಿ ಮಾಡಿದ್ದರು.

ಕರ್ನಾಟಕದಲ್ಲಿ ಪತ್ತೆಯಾದ ಜಿಎಸ್‌ಟಿ ವಂಚನೆಯ ವಿವರಗಳ ಕುರಿತಾದ ಮತ್ತೊಂದು ಪ್ರಶ್ನೆಗೂ ಅವರು ಉತ್ತರಿಸಿದ್ದು, 2024-25ರಲ್ಲಿ ಈ ಸಂಬಂಧ 1,254 ಪ್ರಕರಣಗಳು ದಾಖಲಾಗಿವೆ. 39,577 ತೆರಿಗೆ ವಂಚನೆಯನ್ನು ಕೇಂದ್ರ ಅಧಿಕಾರಿಗಳು ಪತ್ತೆ ಮಾಡಿದ್ದಾರೆ. 9 ಮಂದಿಯನ್ನು ಬಂಧಿಸಲಾಗಿದೆ. ₹ 1,623 ಕೋಟಿ ವಸೂಲಿ ಮಾಡಲಾಗಿದೆ ಎಂದು ತಿಳಿಸಿದ್ದಾರೆ.

2023-24ರಲ್ಲಿ 7.202 ಕೋಟಿ ತೆರಿಗೆ ವಂಚನೆ ಬಯಲಾಗಿದ್ದು, ಇಬ್ಬರನ್ನು ಬಂಧಿಸಲಾಗಿದೆ. 1,197 ಕೋಟಿಯನ್ನು ಸ್ವಯಂ ತೆರಿಗೆ ಪಾವತಿ ಮೂಲಕ ವಸೂಲಿ ಮಾಡಲಾಗಿದೆ. 2022-23ರಲ್ಲಿ 25,839 ಕೋಟಿಯ 959 ತೆರಿಗೆ ವಂಚನೆ ಪ್ರಕರಣಗಳನ್ನು ಸಿಜಿಎಸ್‌ಟಿ ಅಧಿಕಾರಿಗಳು ಪತ್ತೆ ಮಾಡಿದ್ದಾರೆ. ಇಬ್ಬರನ್ನು ಬಂಧಿಸಲಾಗಿದೆ. ₹ 1,705 ಕೋಟಿ ತೆರಿಗೆಯನ್ನು ಕಟ್ಟಿಸಿಕೊಳ್ಳಲಾಗಿದೆ.

ದೇವಾಲಯದ ಜಾಗದಲ್ಲಿ ಮಸೀದಿ ನಿರ್ಮಾಣ ಆರೋಪ | ಕೇಸರಿ ಧ್ವಜ ಹಾರಿಸಿದ ಭಕ್ತರು

ಉ.ಪ್ರ.ದಲ್ಲಿ ಮತ್ತೊಂದು ವಿವಾದ

ಫತೇಪುರ: ಉತ್ತರಪ್ರದೇಶ ರಾಜ್ಯದಲ್ಲಿ ಮತ್ತೊಂದು ಮಸೀದಿ ವಿವಾದ ಭುಗಿಲೆದ್ದಿದೆ. ಫತೇಪುರ ಜಿಲ್ಲೆಯ ಅಬು ನಗರ ಪ್ರದೇಶದಲ್ಲಿನ ಮಸೀದಿ ಸ್ಥಳವು ಹಿಂದು ದೇಗುಲದ ಜಾಗ ಎಂದು ಆರೋಪಿಸಿ ಭಜರಂಗ ದಳ ಮತ್ತು ವಿವಿಧ ಹಿಂದೂಪರ ಸಂಘಟನೆಗಳು ಅಲ್ಲಿ ಪ್ರಾರ್ಥನೆ ಸಲ್ಲಿಸಲು ಯತ್ನಿಸಿವೆ.

ಮಸೀದಿಯನ್ನು ಪ್ರವೇಶಿಸಿದ ಹಿಂದೂ ಪರ ಸಂಘಟನೆಗಳ ಕಾರ್ಯಕರ್ತರು ಅಲ್ಲಿ ಪೂಜೆ ಸಲ್ಲಿಸಲು ಯತ್ನಿಸಿದ್ದಾರೆ. ಅದರಲ್ಲಿ ಕೆಲವರು ಪೊಲೀಸ್ ಭದ್ರತೆಯನ್ನು ಭೇದಿಸಿ ಮಸೀದಿಯ ಕೆಲ ಭಾಗವನ್ನು ಧ್ವಂಸ ಮಾಡಲೂ ಯತ್ನಿಸಿದ್ದಾರೆ ಎಂಬ ಆರೋಪ ಕೇಳಿಬಂದಿದೆ.

ಸ್ಥಳೀಯ ಮೂಲಗಳ ಪ್ರಕಾರ, ಹಿಂದೂ ಸಂಘಟನೆಗಳ ಸದಸ್ಯರು ಸೋಮವಾರ ಬೆಳಗ್ಗೆ ಮಸೀದಿಗೆ ತೆರಳಿ, ಇದು ಶಿವ ದೇವಾಲಯವಾಗಿದೆ, ಹಾಗಾಗಿ ಸ್ಥಳವು ಹಿಂದೂಗಳಿಗೆ ಸೇರಬೇಕು ಎಂದು ಅದನ್ನು ಹಾನಿಗೊಳಿಸಲು ಪ್ರಾರಂಭಿಸಿ

ದರು. ಕೆಲವರು ಮಸೀದಿಯ ಮೇಲೆ ಹತ್ತಿ ಕೇಸರಿ ಧ್ವಜವನ್ನು ಹಾರಿಸಿದರು ಎಂದು ತಿಳಿದುಬಂದಿದೆ.

ಸಮಾಧಿಯ ಮೇಲೆ ಕೇಸರಿ ಧ್ವಜ ಹಾರುತ್ತಿರುವುದನ್ನು ಕಂಡ ಇನ್ನೊಂದು ಸಮುದಾಯದ ಸದಸ್ಯರು ಅದನ್ನು ಆಕ್ಷೇಪಿಸಿದರು. ಇದು ಸ್ಥಳದಲ್ಲಿ ಉದ್ವಿಗ್ನತೆಗೆ ಕಾರಣವಾಯಿತು ಎಂದು ಪೊಲೀಸರು ತಿಳಿಸಿದ್ದಾರೆ. ತಕ್ಷಣವೇ ಪೊಲೀಸರು ಹಿಂದೂ ಪರ ಸಂಘಟನೆಗಳು ಮತ್ತು ಇನ್ನೊಂದು ಸಮುದಾಯದ ಜನರನ್ನು ಸ್ಥಳದಿಂದ ಚದುರಿಸಿದ್ದಾರೆ, ಮಸೀದಿಗೆ ಬಿಗಿಭದ್ರತೆ ನೀಡಿದ್ದಾರೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಸಂಘಟನೆಗಳ ವಾದವೇನು?: ವಿವಾದದ ಬಗ್ಗೆ ಮಾತನಾಡಿರುವ ಬಜರಂಗದಳದ ಜಿಲ್ಲಾ ಸಹ ಸಂಚಾಲಕ ಧರ್ಮೇಂದ್ರ ಸಿಂಗ್, ನಾವು ಇಲ್ಲಿ ಪ್ರಾರ್ಥನೆಗೆ ಆಗಮಿಸಿದೆವು. ಆಡಳಿತವು ನಮ್ಮನ್ನು ತಡೆಯಲು ಸಾಧ್ಯವಿಲ್ಲ. ಹಿಂದೂ ಧರ್ಮದಲ್ಲಿ ಪ್ರಾರ್ಥನೆ ಸಲ್ಲಿಸುವ ನಮ್ಮ ಹಕ್ಕನ್ನು ಯಾರೂ ಕಸಿದುಕೊಳ್ಳಲು ಸಾಧ್ಯವಿಲ್ಲ. ಅವರು ಮಸೀದಿ ಎಂದು ಕರೆಯುತ್ತಿರುವ ಸ್ಥಳವು ದೇವಾಲಯಕ್ಕೆ ಸೇರಿದೆ ಎಂದು ಹೇಳಿದ್ದಾರೆ.

ಘಟನೆಯ ಬಗ್ಗೆ ಮಾಹಿತಿ ನೀಡಿರುವ ಜಿಲ್ಲಾಧಿಕಾರಿ ರವೀಂದ್ರ ಸಿಂಗ್, ಕಾನೂನು ಮತ್ತು ಸುವ್ಯವಸ್ಥೆಯ ಮೇಲೆ ಪರಿಣಾಮ ಬೀರಲು ಬಿಡುವುದಿಲ್ಲ, ಜನರನ್ನು ಅಲ್ಲಿಂದ ಕಳುಹಿಸಲಾಗಿದೆ, ಸ್ಥಳದಲ್ಲಿ ಪರಿಸ್ಥಿತಿ ಸಾಮಾನ್ಯವಾಗಿದೆ. ಎರಡೂ ಸಮುದಾಯದ ಕಡೆಯವರನ್ನು ಸಮಾಧಾನಿಸಲಾಗಿದೆ. ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡಲಾಗುವುದು ಎಂದು ಭರವಸೆ ನೀಡಿದ್ದಾರೆ ಎಂದು ತಿಳಿಸಿದ್ದಾರೆ.

ಲೋಕಸಭೆಯಲ್ಲಿ ಸಚಿವೆ ಶೋಭಾ ಕರಂದ್ಲಾಜೆ ವಿವರಣೆ

ಕಾನೂನು ಸುವ್ಯವಸ್ಥೆ ರಾಜ್ಯದ ಜವಾಬ್ದಾರಿ

ದೆಹಲಿ: ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ತಮ್ಮ ಕಾನೂನು ಜಾರಿ ಸಂಸ್ಥೆಗಳ ಮೂಲಕ ಅಪರಾಧಗಳ ತಡೆಗಟ್ಟುವಿಕೆ, ಬಂಧನ, ತನಿಖೆ ಮತ್ತು ವಿಚಾರಣೆಗೆ ಜವಾಬ್ದಾರಿಯಾಗಿರುತ್ತವೆ ಎಂದು ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ಖಾತೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಅವರು ಸೋಮವಾರ ಸಂಸತ್ತಿಗೆ ತಿಳಿಸಿದ್ದಾರೆ.

ಲೋಕಸಭೆಯಲ್ಲಿ ತೃಣಮೂಲ ಕಾಂಗ್ರೆಸ್ ಸಂಸದ ಅಭಿಷೇಕ್ ಬ್ಯಾನರ್ಜಿ ಅವರ ಪ್ರಶ್ನೆಗೆ ಉತ್ತರಿಸಿದ ಶೋಭಾ ಕರಂದ್ಲಾಜೆ, ಅಸಂಘಟಿತ ಕಾರ್ಮಿಕರ ಸಂಖ್ಯೆಯಲ್ಲಿ ಪಶ್ಚಿಮ ಬಂಗಾಳ ದೇಶದಲ್ಲಿ ಮೂರನೇ ಸ್ಥಾನದಲ್ಲಿದೆ ಎಂದು ತಿಳಿಸಿದರು.

ಪಶ್ಚಿಮ ಬಂಗಾಳದಿಂದ ಬಂಗಾಳಿ ಮಾತನಾಡುವ ವಲಸೆ ಕಾರ್ಮಿಕರನ್ನು ಬಿಜೆಪಿ ಆಡಳಿತದ ವಿವಿಧ ರಾಜ್ಯಗಳಲ್ಲಿ ಬಂಧಿಸಲಾಗುತ್ತಿದೆ ಎಂದು ತೃಣಮೂಲ ಕಾಂಗ್ರೆಸ್ ಪದೇ ಪದೇ ಆರೋಪಿಸಿದೆ. ದೇಶಾದ್ಯಂತ ಬಿಜೆಪಿ ಆಡಳಿತದ ರಾಜ್ಯಗಳಲ್ಲಿ ಬಂಗಾಳಿ ವಲಸಿಗರಿಗೆ ಕಿರುಕುಳ ನೀಡಲಾಗುತ್ತಿದೆ ಎಂಬ ವರದಿಗಳ ನಡುವೆ, ಬ್ಯಾನರ್ಜಿ ಈ ವಿಷಯದ ಬಗ್ಗೆ ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯದಿಂದ ವಿವರ ಕೋರಿದ್ದರು.

ಟಿಎಂಸಿ ಪ್ರಶ್ನೆಗೆ ನೇರ ಉತ್ತರದಿಂದ ತಪ್ಪಿಸಿಕೊಂಡ ಕರಂದ್ಲಾಜೆ, ನೀತಿ ಮತ್ತು ಕಾನೂನು ಸುವ್ಯವಸ್ಥೆ ಭಾರತದ ಸಂವಿಧಾನದ ಏಳನೇ ವೇಳಾಪಟ್ಟಿಯ ಪ್ರಕಾರ ರಾಜ್ಯ ವಿಷಯಗಳಾಗಿವೆ. ರಾಜ್ಯ, ಕೇಂದ್ರಾಡಳಿತ ಪ್ರದೇಶಗಳು ತಮ್ಮ ಕಾನೂನು ಜಾರಿ ಸಂಸ್ಥೆಗಳ ಮೂಲಕ ಅಪರಾಧಗಳ ತಡೆಗಟ್ಟುವಿಕೆ, ಬಂಧನ, ತನಿಖೆ ಮತ್ತು ವಿಚಾರಣೆಗೆ ಪ್ರಾಥಮಿಕವಾಗಿ ಜವಾಬ್ದಾರರಾಗಿರುತ್ತಾರೆ ಎಂದು ಹೇಳಿದ್ದಾರೆ.

ಅಸಂಘಟಿತ ಕಾರ್ಮಿಕರು: ಉ.ಪ್ರ.ಕ್ಕೆ ಅಗ್ರಸ್ಥಾನ

ಆಗಸ್ಟ್ 5, 2025ರ ಹೊತ್ತಿಗೆ ಇ-ಶ್ರಮ್ ಪೋರ್ಟಲ್‌ನಲ್ಲಿ ವಲಸೆ ಕಾರ್ಮಿಕರು ಸೇರಿದಂತೆ ದೇಶದಲ್ಲಿ ಒಟ್ಟು 30,98,43,824 ನೋಂದಾಯಿತ ಅಸಂಘಟಿತ ಕಾರ್ಮಿಕರಿದ್ದಾರೆ. ರಾಜ್ಯವಾರು ಅಸಂಘಟಿತ ಕಾರ್ಮಿಕರ ಪಟ್ಟಿಯಲ್ಲಿ ಉತ್ತರ ಪ್ರದೇಶವು 8,39,81,159 ಕಾರ್ಮಿಕರೊಂದಿಗೆ ಅಗ್ರಸ್ಥಾನದಲ್ಲಿದೆ. ಬಿಹಾರ ಮತ್ತು ಪಶ್ಚಿಮ ಬಂಗಾಳ ಕ್ರಮವಾಗಿ 3,00,29,469 ಮತ್ತು 2,64,81,453 ಅಸಂಘಟಿತ ಕಾರ್ಮಿಕರೊಂದಿಗೆ ಎರಡನೇ ಮತ್ತು ಮೂರನೇ ಸ್ಥಾನದಲ್ಲಿವೆ.

ಕಾಡಾನೆ ದಾಳಿಯಿಂದ ಬಚಾವ್

ಚಾಮರಾಜನಗರ: ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಹಾದು ಹೋಗಿರುವ ರಾ. ಹೆದ್ದಾರಿ 67ರಲ್ಲಿ ಸಂಚರಿಸುವ ಪ್ರಯಾಣಿಕರೊಬ್ಬರು ಕಾಡಾನೆಯ ಫೋಟೋ ತೆಗೆಯಲು ಹೋಗಿ ಆನೆ ದಾಳಿಯಿಂದ ಸ್ವಲ್ಪದರಲ್ಲೇ ಬದುಕುಳಿದಿದ್ದಾರೆ.

ಮದುಮಲೈ ಕಡೆಯಿಂದ ಬಂಡೀಪುರದ ಕಡೆಗೆ ಬರುವ ಸಂದರ್ಭದಲ್ಲಿ ಕೆಕ್ಕನಹಳ್ಳ ಪ್ರದೇಶದ ಬಳಿ ಆನೆಮರಿಯೊಂದಿಗೆ ಇದ್ದ ಸಂದರ್ಭದಲ್ಲಿ ಫೋಟೋ ತೆಗೆಯಲು ಹೋದಾಗ ಆನೆ ದಾಳಿ ಮಾಡಿದೆ. ಸ್ವಲ್ಪ ಹೊತ್ತು ರಸ್ತೆಯಲ್ಲಿಯೇ ಪ್ರಜ್ಞೆ ತಪ್ಪಿ ಬಿದ್ದಿದ್ದಾರೆ. ಇದರಿಂದ ಹೆದ್ದಾರಿಯಲ್ಲಿ ವಾಹನಗಳು ಸಾಲುಗಟ್ಟಿ ನಿಂತು ಸಂಚಾರ ಅಸ್ತವ್ಯಸ್ತವಾಯಿತು.

ಬಳಿಕ ಗಾಯಗೊಂಡಿದ್ದ ವ್ಯಕ್ತಿಯನ್ನು ಅವರ ಕಡೆಯವರೇ ವಾಹನದಲ್ಲಿ ಆಸ್ಪತ್ರೆಗೆ ಕರೆದು ಕೊಂಡು ಹೋಗಿದ್ದಾರೆ. ದಾಳಿಗೊಳಗಾದ ವ್ಯಕ್ತಿಯ ಗುರುತು ತಕ್ಷಣಕ್ಕೆ ತಿಳಿದುಬಂದಿರಲಿಲ್ಲ. ತನಿಖೆಯ ಬಳಿಕ ಗುಂಡ್ಲುಪೇಟೆ ತಾಲೂಕಿನ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಫೋಟೋ ತೆಗೆಯಲು ಹೋಗಿ ಕಾಡಾನೆ ದಾಳಿಗೆ ಒಳಗಾಗಿದ್ದ ವ್ಯಕ್ತಿ ನಂಜನಗೂಡಿನ ಬಸವರಾಜು ಎಂದು ಗುರುತಿಸಲಾಗಿದ್ದು, ಅರಣ್ಯ ಇಲಾಖೆ ಅಧಿಕಾರಿಗಳು ಆತನಿಗೆ 25 ಸಾವಿರ ರೂ. ದಂಡ ವಿಧಿಸಿದ್ದಾರೆ ಎಂದು ಡಿಎಫ್‌ಒ ಎಸ್. ಪ್ರಭಾಕರನ್ ತಿಳಿಸಿದ್ದಾರೆ.

ಬಂಡೀಪುರದ ಕಡೆಗೆ ಕಾರಿನಲ್ಲಿ ಬರುತ್ತಿದ್ದ ಪ್ರವಾಸಿಗ ಬಸವರಾಜು ಆನೆ ಫೋಟೋ ತೆಗೆಯಲು ಮುಂದಾಗಿದ್ದಾರೆ. ಇದನ್ನು ಗಮನಿಸಿದ ಕಾಡಾನೆ ಪ್ರವಾಸಿಗನ ಮೇಲೆ ದಾಳಿಗೆ ಮುಂದಾಗಿದೆ. ಪ್ರವಾಸಿಗ ಬಸವರಾಜು ಆನೆ ತುಳಿತದಿಂದ ಬಚಾವ್ ಆಗಿದ್ದು ನಂತರ ಸಹಪಾಠಿಗಳು ಆತನನ್ನು ಕಾರಿನಲ್ಲಿ ಕರೆದೊಯ್ದು ನಂಜನಗೂಡಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿದ್ದಾರೆ ಎಂದು ಅರಣ್ಯ ಇಲಾಖೆ ತಿಳಿಸಿದೆ.

ಐವಾನ್ ಡಿಸೋಜಾ ವಜಾಕ್ಕೆ ಒತ್ತಾಯ

ಬೆಂಗಳೂರು: ದೇಶದ ಸಮಗ್ರತೆಗೆ ಧಕ್ಕೆಯಾಗುವ ರೀತಿಯಲ್ಲಿ, ರಾಜ್ಯಪಾಲರ ಕುರಿತು ಸಾರ್ವಜನಿಕವಾಗಿ ಸಂವಿಧಾನ ವಿರೋಧಿ ಹಾಗೂ ಪ್ರಚೋದನಾತ್ಮಕ ಹೇಳಿಕೆ ನೀಡಿದ ಕಾಂಗ್ರೆಸ್ ವಿಧಾನ ಪರಿಷತ್ ಸದಸ್ಯರಾದ ಐವಾನ್ ಡಿಸೋಜಾ ರನ್ನು ವಜಾಗೊಳಿಸಬೇಕೆಂದು ವಿಧಾನ ಪರಿಷತ್ತಿನ ಸಭಾಪತಿಯವರಿಗೆ ಮನವಿ ಸಲ್ಲಿಸಲಾಯಿತು.

ಪರಿಷತ್ ಸದಸ್ಯ ಐವಾನ್ ಡಿಸೋಜಾ 19.09.2024ರಂದು ಮಂಗಳೂರಿನ ಮಹಾನಗರ ಪಾಲಿಕೆ ಮುಂಭಾಗದಲ್ಲಿ ನಡೆದ ಕಾಂಗ್ರೆಸ್ ಪಕ್ಷದ ಪ್ರತಿಭಟನಾ ಸಭೆಯಲ್ಲಿ ಮುಖ್ಯಮಂತ್ರಿಗಳ ವಿರುದ್ಧ ಕೇಳಿಬಂದ ಭ್ರಷ್ಟಾಚಾರದ ಆರೋಪಗಳಿಗೆ ಸಂಬಂಧ ತನಿಖೆ ನಡೆಸಲು ರಾಜ್ಯಪಾಲರು ಅನುಮತಿ ನೀಡಿರುವುದನ್ನು ಖಂಡಿಸುವ ಸಂದರ್ಭದಲ್ಲಿ, ರಾಷ್ಟ್ರಪತಿ, ರಾಜ್ಯಪಾಲರನ್ನು ವಾಪಾಸು ಕರೆಸಿಕೊಳ್ಳಬೇಕು, ಇಲ್ಲವಾದಲ್ಲಿ ಬಾಂಗ್ಲಾ ಅಧ್ಯಕ್ಷರು ರಾತ್ರೋರಾತ್ರಿ ಓಡಿಹೋದಂತೆ ಇಲ್ಲಿಯೂ ಕೂಡಾ ರಾಜ್ಯಪಾಲರು ರಾತ್ರೋರಾತ್ರಿ ಓಡಿಹೋಗುವಂತೆ ಮಾಡುತ್ತೇವೆ ಎಂದು ಉದ್ರೇಕಕಾರಿ ಭಾಷಣ ಮಾಡಿದ್ದಾರೆ. ಈ ಹೇಳಿಕೆ ರಾಷ್ಟ್ರದ ಏಕತೆ, ಭದ್ರತೆ ಹಾಗೂ ಸಾಮಾಜಿಕ ಸೌಹಾರ್ದತೆಗೆ ಗಂಭೀರ ಅಪಾಯಕಾರಿಯಾಗಿದ್ದು, ಐವಾನ್ ಡಿಸೋಜಾರನ್ನು ವಿಧಾನ ಪರಿಷತ್ ಸದಸ್ಯತ್ವದಿಂದ ವಜಾ ಮಾಡುವಂತೆ ಆಗ್ರಹಿಸಲಾಗಿದೆ.

ರಾಜ್ಯಪಾಲರ ಕುರಿತು ಸಾರ್ವಜನಿಕವಾಗಿ ಸಂವಿಧಾನ ವಿರೋಧಿ ಹಾಗೂ ಪ್ರಚೋದನಾತ್ಮಕ ಹೇಳಿಕೆ ನೀಡಿದ ಐವಾನ್ ಡಿಸೋಜಾರನ್ನು ವಜಾಗೊಳಿಸಬೇಕೆಂದು ವಿಧಾನ ಪರಿಷತ್ತಿನ ಸಭಾಪತಿಯವರಿಗೆ ಮನವಿ ಸಲ್ಲಿಸಲಾಯಿತು.

ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕರಾದ ಛಲವಾದಿ ನಾರಾಯಣಸ್ವಾಮಿ, ವಿಧಾನ ಪರಿಷತ್ ಮುಖ್ಯ ಸಚೇತಕರಾದ ಎನ್.ರವಿಕುಮಾರ್, ಶಾಸಕರಾದ ಟಿ.ಎ.ಶರವಣ, ಎಸ್.ವಿ . ಸಂಕನೂರ್, ಹನುಮಂತ ನಿರಾಣಿ, ಎಂ.ಜಿ ಮೂಳೆ, ಪ್ರತಾಪ್ ಸಿಂಹ ನಾಯಕ್, ಗೋವಿಂದರಾಜು, ಶಾಂತರಾಮ್ ಸಿದ್ದಿ, ಡಿ.ಎಸ್.ಅರುಣ್, ಕೆ.ಎಸ್ ನವೀನ ಉಪಸ್ಥಿತರಿದ್ದರು.

ಗದ್ದಲದಲ್ಲೇ 2 ತೆರಿಗೆ ವಿಧೇಯಕ ಅಂಗೀಕೃತ

ದೆಹಲಿ: ಲೋಕಸಭೆಯಲ್ಲಿ ಸೋಮವಾರ ಮಂಡಿಸಲಾದ ತೆರಿಗೆಗಳಿಗೆ ಸಂಬಂಧಿಸಿದ ಎರಡು ಪ್ರಮುಖ ವಿಧೇಯಕಗಳನ್ನು ಪ್ರತಿಪಕ್ಷಗಳ ನಿರಂತರ ಪ್ರತಿಭಟನೆ-ಗದ್ದಲದ ನಡುವೆಯೇ ಅಂಗೀಕರಿಸಲಾಯಿತು.

ಆದಾಯ ತೆರಿಗೆ(ಸಂಖ್ಯೆ 2) ವಿಧೇಯಕ ಹಾಗೂ ತೆರಿಗೆ ಕಾಯಿದೆಗಳ ೧(ತಿದ್ದುಪಡಿ)-ವಿಧೇಯಕವನ್ನು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಸೋಮವಾರ ಲೋಕಸಭೆಯಲ್ಲಿ ಬೆಳಗಿನ ಕಲಾಪದ ವೇಳೆ ಮಂಡಿಸಿದ್ದರು. ಆದರೆ, ಪ್ರತಿಪಕ್ಷಗಳ ಸದಸ್ಯರು ಜೋರಾಗಿ ಗದ್ದಲ ಮಾಡುತ್ತಿದ್ದುದರಿಂದ ಚರ್ಚೆಗೆ ಅವಕಾಶವೇ ಇಲ್ಲವಾಗಿತ್ತು. ಗದ್ದಲದ ನಡುವೆಯೇ ಧ್ವನಿಮತದ ಮೂಲಕವೇ ಸದನ ಅಂಗೀಕರಿಸಿತು.

ಆದಾಯ ತೆರಿಗೆ ಕಾಯಿದೆ-1961ಕ್ಕೆ ಬದಲಾಗಿ ಹಾಗೂ ತೆರಿಗೆ ಕಾಯಿದೆಗಳ ಕ್ರೋಢೀಕರಣ ಮತ್ತು ಕೆಲವು ಅಗತ್ಯ ತಿದ್ದುಪಡಿಗಳನ್ನು ಆದಾಯ ತೆರಿಗೆ (ಸಂಖ್ಯೆ 2) ವಿಧೇಯಕ-2025 ಅನ್ನು ರಚಿಸಲಾಗಿದೆ. ಈ ವಿಧೇಯಕ ಹಿರಿಯ ಬಿಜೆಪಿ ಸಂಸದ ಬೈಜಯಂತ್ ಪಾಂಡಾ ನೇತೃತ್ವದ ಸಂಸದೀಯ ಜಂಟಿ ಸಮಿತಿ ಮಾಡಿದ ಎಲ್ಲಾ ಶಿಫಾರಸುಗಳನ್ನು ಒಳಗೊಂಡಿದೆ ಎಂದು ಸಚಿವೆ ನಿರ್ಮಲಾ ಅವರು ಸದನಕ್ಕೆ ಗದ್ದಲದ ನಡುವೆಯೇ ತಿಳಿಸಿದರು.

ನೂತನ ವಿಧೇಯಕವು 'ಏಕೀಕೃತ ಪಿಂಚಣಿ ಯೋಜನೆ' ಚಂದಾದಾರರಿಗೆ ತೆರಿಗೆ ವಿನಾಯಿತಿ ಒದಗಿಸುವ ಉದ್ದೇಶ ಹೊಂದಿದೆ. ಸೌದಿ ಅರೇಬಿಯಾದಲ್ಲಿ ಸಾರ್ವಜನಿಕ ಹೂಡಿಕೆಯ ನಿಧಿಗಳಿಗೆ ನೇರ ತೆರಿಗೆ ಪ್ರಯೋಜನಗಳನ್ನೂ ಹೊಸ ವಿಧೇಯಕದಲ್ಲಿ ಮಾಡಿಕೊಡಲಾಗಿದೆ.

ಬದಲಾವಣೆಗಳೇನು?

ಲೋಕಸಭೆಯಲ್ಲಿ ಫೆ.13ರಂದು ಮಂಡಿಸಿದ್ದ ಆದಾಯ ತೆರಿಗೆ ಮಸೂದೆ-2025 ಆ ಬಳಿಕ ಜಂಟಿ ಸಂಸದೀಯ ಸಮಿತಿಯಿಂದ ಪರಾಮರ್ಶೆಗೆ ಶಿಫಾರಸಾಗಿತ್ತು. ಕರಡು ರಚನೆ, ಪದಗುಚ್ಛಗಳ ಜೋಡಣೆ, ಪರಿಣಾಮದ ಬದಲಾವಣೆಗಳು ಮತ್ತು ಅಡ್ಡ-ಉಲ್ಲೇಖಗಳ ಸ್ವರೂಪದಲ್ಲಿ ತಿದ್ದುಪಡಿಗಳಿದ್ದವು ಎನ್ನಲಾಗಿತ್ತು.

ಪ್ರತಿಯೊಬ್ಬರು ಸಮಾಜಮುಖಿ ಕಾರ್ಯ ಮಾಡಲಿ

ಎಜಿಎಸ್, ಕೆ.ಆರ್. ಸೇವಾ ಚಾರಿಟೇಬಲ್ ಟ್ರಸ್ಟ್‌ನಿಂದ ಸಾಧಕರಿಗೆ ಸನ್ಮಾನ

ಬೆಂಗಳೂರು: ಕರುನಾಡ ಕನ್ನಡ ಕಲಾಸಿರಿ ಬಳಗ ಸಮಾಜಮುಖಿ ಕೆಲಸಗಳನ್ನು ಮಾಡುತ್ತಿದ್ದು, ಶೈಕ್ಷಣಿಕ ಕ್ಷೇತ್ರಕ್ಕೆ ಅವಿಸ್ಮರಣೀಕ ಕೊಡುಗೆ ನೀಡುತ್ತಿರುವುದು ಪ್ರಶಂಸನೀಯ ಎಂದು ತೋತಾಪುರಿ ಸೋಮಶೇಖರ್ ಗುರೂಜಿ ಹೇಳಿದರು.

ಕೆಂಗೇರಿ ಸಮೀಪದ ಸಂತ ಅಂತೋನಿ ಪಿಯು ಕಾಲೇಜಿನಲ್ಲಿ ಎ.ಜಿ.ಎಸ್ ಎಜುಕೇಶನ್ ಚಾರಿಟೇಬಲ್ ಟ್ರಸ್ಟ್ ಹಾಗೂ ಕೆ.ಆರ್ ಸೇವಾ ಚಾರಿಟೇಬಲ್ ಟ್ರಸ್ಟ್ ವತಿಯಿಂದ ನಡೆದ ವಿವಿಧ ಕ್ಷೇತ್ರಗಳ ಸಾಧಕರಿಗೆ ಕರ್ನಾಟಕ ಸೇವಾ ರತ್ನ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಅವರು ಉದ್ಘಾಟಿಸಿ ಮಾತನಾಡಿದರು.

ಉತ್ತರ ಕರ್ನಾಟಕದಿಂದ ವಲಸೆ ಬಂದ ಕುಟುಂಬಸ್ಥರ ಮಕ್ಕಳು ಬೆಂಗಳೂರಿನಲ್ಲಿ ಶಿಕ್ಷಣದಿಂದ ವಂಚಿತರಾಗುವುದನ್ನು ಕಂಡ ಕರುನಾಡ ಕನ್ನಡ ಕಲಾ ಸಿರಿ ಬಳಗ ತನ್ನ ಎ.ಜಿ.ಎಸ್. ಚಾರಿಟೇಬಲ್ ಟ್ರಸ್ಟ್ ಮೂಲಕ ಮಕ್ಕಳಿಗೆ ಮನೆ ಪಾಠ ಮಾಡುವ ಕೆಲಸವನ್ನು ಮಾಡುತ್ತಿದೆ. ಅಲ್ಲದೇ ಕನ್ನಡ ವಿಷಯ ಶಿಕ್ಷಕರು ಹಾಗೂ ಕನ್ನಡ ವಿಷಯದಲ್ಲಿ ಹೆಚ್ಚಿನ ಅಂಕ ಗಳಿಸಿದ ಮಕ್ಕಳನ್ನು ಗುರುತಿಸಿ ಸನ್ಮಾನ ಮಾಡುತ್ತಿದೆ. ನಾನಾ ಕ್ಷೇತ್ರಗಳಲ್ಲಿ ಎಲೆಮರೆಕಾಯಿಯಾಗಿ ತಮ್ಮ ಸೇವೆಯನ್ನು ಮಾಡುತ್ತಿರುವ ಸಾಧಕರನ್ನು ಗುರುತಿಸಿ ಕರ್ನಾಟಕ ಸೇವಾರತ್ನ ಪ್ರಶಸ್ತಿ ನೀಡುತ್ತಿದೆ. ಇಂತಹ ಸಮಾಜಮುಖಿ ಕಾರ್ಯಗಳನ್ನು ಪ್ರತಿಯೊಬ್ಬರು ಮಾಡಬೇಕು ಎಂದರು.

ಡಾ.ಲಕ್ಷ್ಮಿ ಶ್ರೀನಿವಾಸ್ ಗುರೂಜಿ ಆಶೀರ್ವಚನ ನೀಡಿದರು. ಡಾ.ಟಿ.ಯಲ್ಲಪ್ಪ, ಸಂಗೀತ ನಿರ್ದೇಶಕ ಶಶಿಧರ್ ಕೋಟೆ, ಹೊಸಕೋಟೆ ವೆಂಕಟೇಶ್ ಮೂರ್ತಿ, ಟಿ.ತ್ಯಾಗರಾಜು, ನಾಗರಾಜ್, ಲಿಟಲ್ ಬ್ಲೂಂ ಸಂಸ್ಥಾಪಕಿ ಸರಸ್ವತಿ, ಗಂಧರ್ವ ಜಿಮ್ ಮಾಲೀಕ ಶ್ರೀನಿವಾಸ್, ಮುನಿರಾಜ್, ಮಂಜುಳಾ, ಶ್ರೀನಿವಾಸ್ ಬಾಬು, ಸಮಾಜ ಸೇವಕ ಶ್ರೀಧರ್, ಗೋವಿಂದರಾಜ, ಕೆ.ಆರ್ ಸೇವಾ ಚಾರಿಟೇಬಲ್ ಟ್ರಸ್ಟ್ ಅಧ್ಯಕ್ಷ ರಾಜಶೇಖರ್, ಪ್ರಧಾನ ಕಾರ್ಯದರ್ಶಿ ನವೀನ್ ಕುಮಾರ್, ಅಮರೇಶ್ ಮುಂತಾದವರು ಇದ್ದರು.

ಸತತ 3 ವರ್ಷಗಳಿಂದ ನಮ್ಮ ಎ.ಜಿ.ಎಸ್.ಚಾರಿಟೇಬಲ್ ಟ್ರಸ್ಟ್ ಸಮಾಜ ಸೇವೆಯಲ್ಲಿ ತೊಡಗಿದ್ದು, ನಾಡು, ನುಡಿ, ಶಿಕ್ಷಣಕ್ಕಾಗಿ ಹೋರಾಟ ಮಾಡುತ್ತಿದೆ. ಅಲ್ಲದೇ ಕನ್ನಡ ಭಾಷೆಗೆ ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಕನ್ನಡ ಪ್ರತಿಭಾ ಪರೀಕ್ಷೆ ನಡೆಸಲಾಗುತ್ತಿದೆ. ಸಮಾಜಕ್ಕೆ ಅತ್ಯಮೂಲ್ಯ ಸೇವೆಯನ್ನು ನೀಡುತ್ತಿರುವ ಸಾಧಕರನ್ನು ಗುರುತಿಸಿ ಗೌರವಿಸುವ ಕಾರ್ಯವನ್ನು ಮಾಡಲಾಗುತ್ತಿದೆ.

-ಅಂಬರೀಶ್ ಸಿ.ಎಂ.
ಎಜಿಎಸ್ ಚಾರಿಟೇಬಲ್ ಟ್ರಸ್ಟ್ ಅಧ್ಯಕ್ಷ

ಎ.ಜಿ.ಎಸ್ ಎಜುಕೇಶನ್ ಚಾರಿಟೇಬಲ್ ಟ್ರಸ್ಟ್ ಹಾಗೂ ಕೆ.ಆರ್ ಸೇವಾ ಚಾರಿಟೇಬಲ್ ಟ್ರಸ್ಟ್ ವತಿಯಿಂದ ನಡೆದ ವಿವಿಧ ಕ್ಷೇತ್ರಗಳ ಸಾಧಕರಿಗೆ ಕರ್ನಾಟಕ ಸೇವಾ ರತ್ನ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಚೀನಾದ ತಿಯಾಂಜಿನ್‌ನಲ್ಲಿ ನಡೆಯಲಿರುವ ಶಾಂಘೈ ಸಹಕಾರ ಸಂಸ್ಥೆ (ಎಸ್‌ಸಿಒ) ಪ್ರಾದೇಶಿಕ ಶೃಂಗಸಭೆಯಲ್ಲಿ ಭಾಗವಹಿಸಲು ಪ್ರಧಾನಿ ನರೇಂದ್ರ ಮೋದಿ ಇದೇ ಆ.31ರಿಂದ ಸೆ.1ರ ವರೆಗೆ ಚೀನಾ ಪ್ರವಾಸ ಕೈಗೊಳ್ಳಲಿದ್ದಾರೆ. 2020ರಲ್ಲಿ ಭಾರತ-ಚೀನಾ ಸೈನಿಕರ ನಡುವೆ ನಡೆದಿದ್ದ ಗಲ್ವಾನ್ ಘರ್ಷಣೆಯ ಬಳಿಕ, ಇದೇ ಮೊದಲ ಬಾರಿಗೆ ಅವರು ಚೀನಾ ನೆಲದಲ್ಲಿ ಕಾಲಿಡಲಿದ್ದಾರೆ. ಈ ಸಲದ ಶಾಂಘೈ ಸಹಕಾರ ಶೃಂಗಸಭೆಯ ಮೂಲಕ ಭಾರತ, ಚೀನಾ ಮತ್ತು ರಷ್ಯಾ ದೇಶಗಳ ಮೈತ್ರಿ ಇನ್ನಷ್ಟು ಗಟ್ಟಿಯಾದರೆ ಈ ಶೃಂಗಸಭೆಯು ಭಾರತದ ವಸ್ತುಗಳ ಮೇಲೆ ಆಘಾತಕಾರಿ ಪ್ರಮಾಣದಲ್ಲಿ ಸುಂಕ ವಿಧಿಸಿರುವ ಅಮೆರಿಕಕ್ಕೆ ತಿರುಗುಬಾಣವಾಗಲಿದೆ ಎಂಬುದರಲ್ಲಿ ಸಂದೇಹವಿಲ್ಲ.

ಶಾಂಘೈ ಶೃಂಗಸಭೆ: ಅಮೆರಿಕ ವಿರುದ್ಧ ತ್ರಿಕೂಟ?

ಗಲ್ವಾನ್ ಸಂಘರ್ಷದ ಬಳಿಕ ಚೀನಾಕ್ಕೆ ಮೋದಿ ಭೇಟಿ | ಭಾರತ-ಚೀನಾ-ರಷ್ಯಾ ಹೊಸ ಮೈತ್ರಿ ಶಕೆ ಸಾಧ್ಯತೆ

ಚೀನಾದ ತಿಯಾಂಜಿನ್ ನಗರದಲ್ಲಿ ಇದೇ ತಿಂಗಳ ಕೊನೆಯಲ್ಲಿ ನಡೆಯಲಿರುವ ಶಾಂಘೈ ಸಹಕಾರ ಸಂಸ್ಥೆ (ಎಸ್‌ಸಿಒ) ಪ್ರಾದೇಶಿಕ ಶೃಂಗಸಭೆಯಲ್ಲಿ ಭಾಗವಹಿಸಲು, ಪ್ರಧಾನಿ ಮೋದಿ ಚೀನಾಕ್ಕೆ ಭೇಟಿ ನೀಡಲಿದ್ದಾರೆ. 2020ರ ಗಲ್ವಾನ್ ಘರ್ಷಣೆಯ ಬಳಿಕ ಮೊದಲ ಬಾರಿಗೆ ಭಾರತದ ಪ್ರಧಾನಿಯೊಬ್ಬರು ಚೀನಾಗೆ ಭೇಟಿ ನೀಡುವ ಕಾರ್ಯಕ್ರಮ ಇದಾಗಿದ್ದು, 2019ರಲ್ಲಿ ಕೊನೆಯ ಬಾರಿಗೆ ಮೋದಿ ಅಲ್ಲಿಗೆ ಭೇಟಿ ನೀಡಿದ್ದರು.

ಈ ಬಾರಿ ಶಾಂಘೈ ಸಹಕಾರ ಸಂಸ್ಥೆಯ ಶೃಂಗಸಭೆಯ ಸದಸ್ಯ ರಾಷ್ಟ್ರಗಳೊಂದಿಗೆ ವಿದೇಶಾಂಗ ಆರ್ಥಿಕ ನೀತಿ, ಪ್ರಾದೇಶಿಕ ಭದ್ರತೆ, ಭಯೋತ್ಪಾದನೆ ಮತ್ತು ವ್ಯಾಪಾರದ ಕುರಿತು ಮೋದಿ ಚರ್ಚೆ ನಡೆಸಲಿದ್ದಾರೆ. ಭಾರತ-ಚೀನಾ ಸಂಬಂಧಗಳಲ್ಲಿ ಸ್ಥಿರತೆ ಮತ್ತು ಸಂವಾದವನ್ನು ಪುನಃಸ್ಥಾಪಿಸುವ ಕುರಿತೂ ಚೀನೀ ನಾಯಕತ್ವದೊಂದಿಗೂ ಅವರು ಚರ್ಚಿಸಲಿದ್ದಾರೆ.

- 6 ವರ್ಷಗಳ ಬಳಿಕ ಪ್ರಧಾನಿ ಮೋದಿ ಚೀನಾ ಪ್ರವಾಸ.
- ಶಾಂಘೈ ಸಹಕಾರ ಶೃಂಗಸಭೆಯಲ್ಲಿ ಟ್ರಂಪ್ ಘೋಷಿಸಿದ ಸುಂಕ ಏರಿಕೆ ಚರ್ಚೆ ಪ್ರಮುಖ ವಿಷಯಸೂಚಿ ಸಾಧ್ಯತೆ.
- ಭಾರತ, ಚೀನಾ ಮತ್ತು ರಷ್ಯಾ ಸಂಬಂಧ ಗಟ್ಟಿಯಾದರೆ ಅಮೆರಿಕಕ್ಕೆ ಕಂಟಕ ಖಚಿತ.

ಎಸ್‌ಸಿಒ ಶೃಂಗಸಭೆಯ ವೇಳೆ ರಷ್ಯಾದ ಅಧ್ಯಕ್ಷ ವ್ಲಾದ್ಮಿಮಿರ್ ಪುಟಿನ್ ಮತ್ತು ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಅವರೊಂದಿಗೆ ಮೋದಿ ಸಭೆ-ಸಂವಾದ ನಡೆಸಲಿದ್ದಾರೆ. ಹಾಗಾಗಿ ಈ ಮೂರೂ ರಾಷ್ಟ್ರಗಳು ಮುಂದಿನ ದಿನಗಳಲ್ಲಿ ಇನ್ನಷ್ಟು ಒಗ್ಗಟ್ಟನ್ನು ಮೆರೆದರೆ ಅಮೆರಿಕ ಅಧ್ಯಕ್ಷ ಟ್ರಂಪ್ ಪಾಲಿಗೆ ಆತಂಕದ ವಿಷಯ ಆಗುವುದಂತೂ ಖಚಿತ ಎನ್ನಲಾಗುತ್ತಿದೆ.

2024 ಅಕ್ಟೋಬರ್‌ನಲ್ಲಿ ಪ್ರಧಾನಿ ಮೋದಿ ಮತ್ತು ಚೀನಾ ಅಧ್ಯಕ್ಷ ಕ್ಸಿ ಜಿನ್ ಪಿಂಗ್ ಅವರು ಕಜಾನ್‌ನಲ್ಲಿ ನಡೆದ ಬ್ರಿಕ್ಸ್ ಶೃಂಗಸಭೆಯಲ್ಲಿ ನೇರವಾಗಿ ಭೇಟಿ ಮಾಡಿ ಮಾತುಕತೆ ನಡೆಸಿದ್ದರು. ಈ ಭೇಟಿಯ ವೇಳೆ ಉದ್ವಿಗ್ನಗೊಂಡಿದ್ದ ಭಾರತ-ಚೀನಾ ಸಂಬಂಧಗಳನ್ನು ತಿಳಿಗೊಳಿಸುವ ಕುರಿತು ಉಭಯ ನಾಯಕರೂ ಪರಸ್ಪರ ಚರ್ಚೆ ನಡೆಸಿದ್ದರು. ಅದರ ಪರಿಣಾಮವಾಗಿ ಎರಡೂ ದೇಶಗಳ ನಡುವಿನ ಗಡಿ ಉದ್ವಿಗ್ನತೆಯನ್ನು ಕಡಿಮೆ ಮಾಡುವ ಪ್ರಯತ್ನಗಳು ವೇಗ ಪಡೆದುಕೊಂಡವು. ಉಭಯ ದೇಶಗಳ ನಡುವೆ ಹಲವು ಸುತ್ತಿನ ರಾಜತಾಂತ್ರಿಕ ಸಭೆಗಳು ನಡೆದು, ಸಂಬಂಧವನ್ನು ಸಹಜ ಸ್ಥಿತಿಗೆ ತರಲು ಅನೇಕ ಕ್ರಮಗಳನ್ನು ಜಾರಿಗೊಳಿಸಲಾಯಿತು.

ರಷ್ಯಾ ಕೂಡಾ ಶಾಂಘೈ ಸಹಕಾರ ಸಂಸ್ಥೆಯ ಶೃಂಗಸಭೆಯಲ್ಲಿ ಭಾಗವಹಿಸುತ್ತಿರುವುದರಿಂದ ಚರ್ಚೆಯ ಆಯಾಮಗಳು ಇನ್ನಷ್ಟು ವಿಪುಲಗೊಂಡಿವೆ. ಆ ಕಾರಣಕ್ಕಾಗಿಯೇ ಈ ಬಾರಿಯ ಸಭೆಯಲ್ಲಿ ಅಮೆರಿಕದ ಸುಂಕ ಏರಿಕೆಯ ವಿಚಾರಗಳನ್ನು ಭಾರತವು ದೀರ್ಘವಾಗಿ ಚರ್ಚೆಗೆತ್ತಿಕೊಳ್ಳಲಿದೆ. ಭಾರತವೂ ಸೇರಿದಂತೆ ವಿಶ್ವದ ಹಲವು ರಾಷ್ಟ್ರಗಳ ಆರ್ಥಿಕತೆಗೆ ಆಳವಾದ ಪೆಟ್ಟು ನೀಡಿರುವ ಅಮೆರಿಕದಲ್ಲಿ ಸುಂಕ ಏರಿಸಿದ ಟ್ರಂಪ್ ಕ್ರಮವು ಈಗಾಗಲೇ ಜಗತ್ತಿನ ಬಹುತೇಕ ರಾಷ್ಟ್ರಗಳಿಗೆ ಅಪಥ್ಯವೆನಿಸಿವೆ.

ಅಮೆರಿಕಾ ಮುಂದಿನ ದಿನಗಳಲ್ಲಿ ಇನ್ನಷ್ಟು ಮುಂದುವರಿದು, ಹಲವಾರು ದೇಶಗಳಿಗೆ ತೊಡಕೆನಿಸುವ ಆರ್ಥಿಕ ನೀತಿಗಳನ್ನು ಜಾರಿಗೊಳಿಸಲು ಮುಂದಾಗಿರುವ ಯೋಚನೆಯೂ ಈ ಸಲದ ಶಾಂಘೈ ಸಹಕಾರ ಸಂಸ್ಥೆಯ ಸಭೆಯಲ್ಲಿ ಪ್ರಮುಖ ಚರ್ಚಾ ವಿಷಯವಾಗಬಹುದೆನ್ನುವುದು ತಜ್ಞರ ಅಭಿಮತ. ಮಧ್ಯ ಏಷ್ಯಾ ಮತ್ತು ರಷ್ಯಾದೊಂದಿಗೆ ಭಾರತದ ದ್ವಿಪಕ್ಷೀಯ ವ್ಯಾಪಾರವು ಸದ್ಯಕ್ಕೆ ತುಂಬಾ ಕಡಿಮೆಯಾಗಿದ್ದು, ಈ ಶೃಂಗಸಭೆಯ ಮೂಲಕ ಅದು ವ್ಯಾಪಕವಾಗಿ ಅಮೆರಿಕಕ್ಕೆ ಸಡ್ಡು ಹೊಡೆಯುವ ಪರಿಸ್ಥಿತಿಗೂ ಕಾರಣವಾಗಬಹುದು. ಈಗಾಗಲೇ ಭಾರತದ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಶಾಂಘೈ ಸಹಕಾರ ಸಂಸ್ಥೆಯ ರಕ್ಷಣಾ ಸಚಿವರ ಸಭೆಯಲ್ಲಿ ಭಾಗವಹಿಸಿದ್ದು, ಭಯೋತ್ಪಾದನೆ ನಿರ್ಮೂಲನೆಯಾಗದ ಹೊರತು ಪ್ರಾದೇಶಿಕ ಶಾಂತಿ ಅಸಾಧ್ಯ ಎಂದು ಪಾಕಿಸ್ತಾನದ ಹೆಸರು ಉಲ್ಲೇಖಿಸದೇ ಸೂಕ್ಷ್ಮವಾಗಿ ಹೇಳಿದ್ದಾರೆ, ಅವರು ಪಹಲ್ಗಾಮ್ ದಾಳಿ ಉಲ್ಲೇಖವಿರದ ದಾಖಲೆಗೆ ಸಹಿ ಮಾಡಲು ನಿರಾಕರಣೆ ಮಾಡಿ ಗಮನ ಸೆಳೆದಿದ್ದರು. ವಿದೇಶಾಂಗ ಸಚಿವರ ಆ ಸಭೆಯಲ್ಲಿ ಭಾಗವಹಿಸಿದ್ದ ಭಾರತದ ವಿದೇಶಾಂಗ ಸಚಿವ ಎಸ್. ಜೈಶಂಕರ್ ಕೂಡಾ ಭಯೋತ್ಪಾದನೆಗೆ ಬೆಂಬಲ ನೀಡುವ ರಾಷ್ಟ್ರಗಳ ವಿರುದ್ಧ ಕ್ರಮಕ್ಕೆ ಆಗ್ರಹಿಸಿದ್ದರು.

ಪೂರ್ವ ಏಷ್ಯಾ ವಿಶ್ವವು ಆರ್ಥಿಕತೆಯ ಅಭಿವೃದ್ಧಿಯ ಹೊಸ ಕೇಂದ್ರವಾಗಲು ಇದೀಗ ಸಜ್ಜಾಗಿರುವುದರಿಂದ, ಈ ಪ್ರದೇಶದಲ್ಲಿ ಭಾರತದ ವ್ಯಾಪಾರ ಸಂಬಂಧಗಳನ್ನು ಸುಧಾರಿಸುವ ಬೆಂಬಲವು ಶಾಂಘೈ ಸಹಕಾರ ಸಂಸ್ಥೆಯಿಂದ ಮುಂದಿನ ದಿನಗಳಲ್ಲಿ ಭಾರತಕ್ಕೆ ಸಿಗಲಿದೆ ಎಂಬುದಂತೂ ಖಚಿತ. ಆ ಕಾರಣಕ್ಕಾಗಿಯೇ ಈ ಶೃಂಗಸಭೆಯ ಮೂಲಕ ಭಾರತ, ಚೀನಾ ಮತ್ತು ರಷ್ಯಾ ಒಮ್ಮತದ ನಿರ್ಧಾರಗಳನ್ನು ಕೈಗೊಂಡು ಮುಂದಡಿ ಇಟ್ಟರೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮನಸ್ಥೈರ್ಯ ಕುಗ್ಗುವುದಂತೂ ಖಚಿತ.





ಶಾಂಘೈ ಸಹಕಾರ ಸಂಸ್ಥೆಯ ಸ್ಥಾಪನೆಯ ಹಿನ್ನೋಟ

- 1996: ಕಜಕಿಸ್ತಾನ್, ಚೀನಾ, ಕಿರ್ಗಿಸ್ತಾನ್, ರಷ್ಯಾ ಮತ್ತು ತಜಿಕಿಸ್ತಾನ್ ದೇಶಗಳೂ ಸೇರಿ ಶಾಂಘೈ ಫೈವ್ ಸ್ಥಾಪನೆ.
- 2001: ಉಜ್ಬೇಕಿಸ್ತಾನ್ ಅನ್ನು ಸೇರಿಸಿದ ನಂತರ, ಶಾಂಘೈ ಫೈವ್ ಅನ್ನು ಎಸ್‌ಸಿಒ ಎಂದು ಮರುನಾಮಕರಣ.
- 2015: ರಷ್ಯಾದಲ್ಲಿ ನಡೆದ ಶೃಂಗಸಭೆಯಲ್ಲಿ, ಭಾರತ ಮತ್ತು ಪಾಕಿಸ್ತಾನವನ್ನು ಪೂರ್ಣ ಸದಸ್ಯರನ್ನಾಗಿ ಸೇರಿಸಿಕೊಳ್ಳಲು ನಿರ್ಧಾರ.
- 2017: ಅಸ್ತಾನಾದಲ್ಲಿ ಭಾರತ ಮತ್ತು ಪಾಕಿಸ್ತಾನಕ್ಕೆ ಅಧಿಕೃತವಾಗಿ ಪೂರ್ಣ ಸದಸ್ಯತ್ವ.

ಭಾರತಕ್ಕೆ ಏಕೆ ಪ್ರಾಮುಖ್ಯತೆ ಮತ್ತು ಪ್ರಸ್ತುತತೆ?

ಅಮೆರಿಕ ಸರಕಾರವು ಆಗಸ್ಟ್-7ರಿಂದ ಭಾರತದ ವಸ್ತುಗಳ ಮೇಲೆ ತೆರಿಗೆ ವಿಧಿಸಿರುವುದರಿಂದ ದೇಶದ ರಫ್ತು ಪ್ರಮಾಣ ಇಳಿಮುಖವಾಗುವ ಸಾಧ್ಯತೆ ಹೆಚ್ಚು. ಈ ಶೃಂಗಸಭೆಯ ಮೂಲಕ ಭಾರತ-ಚೀನಾ ಮತ್ತು ರಷ್ಯಾ ಒಮ್ಮತದ ನಿರ್ಧಾರಕ್ಕೆ ಬಂದರೆ ಅಮೆರಿಕದ ಇಂತಹ ನಿಲುವುಗಳಿಗೆ ಸೆಡ್ಡು ಹೊಡೆಯುವುದು ಬಹಳ ಸುಲಭದ ಕೆಲಸ. ಶಾಂಘೈ ಸಹಕಾರ ಸಂಸ್ಥೆಯ ಸದಸ್ಯ ರಾಷ್ಟ್ರವಾಗಿ ಭಾರತವು ಮಧ್ಯ ಏಷ್ಯಾ ಮತ್ತು ಅದರಾಚೆಗೆ ಪ್ರಾದೇಶಿಕ ಸ್ಥಿರತೆ ಮತ್ತು ಭದ್ರತೆಯ ನಿರ್ವಹಣೆಗೆ ಕೊಡುಗೆ ನೀಡುವ ಅವಕಾಶವನ್ನು ಹೊಂದಿದೆ. ಇದು ಮಾರುಕಟ್ಟೆಗಳು, ತಂತ್ರಜ್ಞಾನ ಮತ್ತು ಹೂಡಿಕೆ ಅವಕಾಶಗಳಿಗೆ ಹೆಚ್ಚಿನ ಪ್ರವೇಶಕ್ಕೆ ಕಾರಣವಾಗಬಹುದುಹಾಗೆಯೇ ಪಾಕಿಸ್ತಾನದೊಂದಿಗಿನ ದೀರ್ಘಕಾಲದ ಸಂಘರ್ಷ ಮತ್ತು ಗಡಿ ಪ್ರದೇಶದಲ್ಲಿ ಹೆಚ್ಚುತ್ತಿರುವ ಭಯೋತ್ಪಾದನೆಯ ಬೆದರಿಕೆಯನ್ನು ಗಮನದಲ್ಲಿಟ್ಟುಕೊಂಡು, ಭಯೋತ್ಪಾದನೆ ನಿಗ್ರಹ ಮತ್ತು ಭದ್ರತಾ ಸಹಕಾರವು ಭಾರತದ ಪಾಲಿಗೆ ಈ ಶೃಂಗಸಭೆಯ ಪ್ರಮುಖ ವಿಷಯ.

ಶಾಂಘೈ ಸಹಕಾರ ಸಂಸ್ಥೆಯ ವ್ಯವಹಾರ ಮಂಡಳಿ

ಎಲ್ಲಾ ಸದಸ್ಯ ರಾಷ್ಟ್ರಗಳ ವ್ಯಾಪಾರ ಸಮುದಾಯಗಳ ಪ್ರತಿನಿಧಿಗಳನ್ನು ಒಳಗೊಂಡಿದ್ದು, ಸದಸ್ಯ ರಾಷ್ಟ್ರಗಳಲ್ಲಿ ಆರ್ಥಿಕ ಸಹಕಾರ ಮತ್ತು ಹೂಡಿಕೆಯನ್ನು ಉತ್ತೇಜಿಸುವ ಜವಾಬ್ದಾರಿಯನ್ನು ಶಾಂಘೈ ಸಹಕಾರ ಸಂಸ್ಥೆಯ ವ್ಯವಹಾರ ಮಂಡಳಿಯು ಹೊಂದಿದೆ. ಪ್ರಾದೇಶಿಕ ಭದ್ರತಾ ಸಮಸ್ಯೆಗಳು, ಪ್ರಾದೇಶಿಕ ಭಯೋತ್ಪಾದನೆ, ಜನಾಂಗೀಯ ಪ್ರತ್ಯೇಕತಾವಾದ ಮತ್ತು ಧಾರ್ಮಿಕ ಉಗ್ರವಾದದ ವಿರುದ್ಧದ ಹೋರಾಟ ಮತ್ತು ಪ್ರಾದೇಶಿಕ ಅಭಿವೃದ್ಧಿಯನ್ನು ಉತ್ತೇಜಿಸುವತ್ತ ಇದುವರೆಗೂ ಶೃಂಗಸಭೆ ಗಮನಹರಿಸಿದೆ. ದೊಡ್ಡ ಜನಸಂಖ್ಯೆ ಮತ್ತು ವಿಶ್ವ ಜಿಡಿಪಿಗೆ ಅನುಗುಣವಾಗಿ ಇದು ಜಾಗತಿಕ ಜನಸಂಖ್ಯೆಯ 40%, ಜಾಗತಿಕ ಜಿಡಿಪಿಯ ಸುಮಾರು 20% ಮತ್ತು ವಿಶ್ವದ ಭೂಪ್ರದೇಶದ 22% ಅನ್ನು ಒಳಗೊಂಡಿದೆ. ಏಷ್ಯಾದ ದೇಶಗಳಲ್ಲಿ ಪ್ರಾದೇಶಿಕ ಏಕೀಕರಣವನ್ನು ಸಾಧಿಸಲು ಮತ್ತು ಗಡಿಗಳಲ್ಲಿ ಸ್ಥಿರತೆಯನ್ನು ಉತ್ತೇಜಿಸಲು ಎಸ್‌ಸಿಒ ವೇಗವರ್ಧಕವಾಗಿ ಕಾರ್ಯನಿರ್ವಹಿಸುವ ಸಾಮರ್ಥ್ಯವನ್ನು ಹೊಂದಿದೆ. ಎಸ್‌ಸಿಒಯ ಪ್ರಯತ್ನಗಳು ಅದರ ಪ್ರದೇಶದಾದ್ಯಂತ ಸುಧಾರಿತ ಸಂಪರ್ಕವನ್ನು ಬೆಳೆಸಬಹುದು. ಇದು ಭಯೋತ್ಪಾದನೆ ನಿಗ್ರಹದ ಮೇಲೆ ಮಾತ್ರವಲ್ಲದೆ ಮಾದಕವಸ್ತು ಕಳ್ಳಸಾಗಣೆ, ಮಿಲಿಟರಿ ಸಹಕಾರ ಮತ್ತು ಆರ್ಥಿಕ ಸಹಯೋಗದ ಮೇಲೂ ಗಮನಹರಿಸಿದೆ.

ಶಾಂಘೈ ಸಹಕಾರ ಸಂಸ್ಥೆ: ಉದ್ದೇಶಗಳು

ಶಾಂಘೈ ಸಹಕಾರ ಸಂಸ್ಥೆಯು ಎಸ್‌ಸಿಒ ಎಂಬ ಸಂಕ್ಷಿಪ್ತ ರೂಪದಲ್ಲಿ ಚಿರಪರಿಚಿತವಾಗಿದ್ದು, ಇದು 2001ರಲ್ಲಿ ಕಝಾಕಿಸ್ತಾನ್, ಚೀನಾ, ಕಿರ್ಗಿಸ್ತಾನ್, ರಷ್ಯಾ, ಉಜ್ಬೇಕಿಸ್ತಾನ್ ಮತ್ತು ತಜಿಕಿಸ್ತಾನ್ ಸ್ಥಾಪಿಸಿದ ಭದ್ರತಾ ಮೈತ್ರಿಕೂಟವಾಗಿದೆ. ತನ್ನ ಮೊದಲ ಶೃಂಗಸಭೆಯನ್ನು 2001ರಲ್ಲಿ ಚೀನಾದ ಶಾಂಘೈನಲ್ಲಿ ನಡೆಸಲಾಯಿತು. ವ್ಯಾಪಾರ, ಹೂಡಿಕೆ, ಇಂಧನ, ಸಾರಿಗೆ ಮತ್ತು ಭದ್ರತೆಯಂತಹ ಕ್ಷೇತ್ರಗಳಲ್ಲಿ ಸಹಕಾರ ಮತ್ತು ಪರಸ್ಪರ ಬೆಂಬಲವನ್ನು ಉತ್ತೇಜಿಸುವುದು ಶೃಂಗಸಭೆಯ ಪ್ರಮುಖ ಗುರಿಯಾಗಿದೆ. ಸದಸ್ಯ ರಾಷ್ಟ್ರಗಳ ನಡುವಿನ ಸಂಬಂಧವನ್ನು ಬಲಪಡಿಸುವುದು, ಆರ್ಥಿಕ ಪರಿಸ್ಥಿತಿ ಸುಧಾರಣೆ, ರಾಜಕೀಯ ವ್ಯವಹಾರಗಳು, ವೈಜ್ಞಾನಿಕ-ತಾಂತ್ರಿಕ, ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಕ್ಷೇತ್ರಗಳಲ್ಲಿ ಹಾಗೂ ಇಂಧನ, ಸಾರಿಗೆ, ಪ್ರವಾಸೋದ್ಯಮ ಮತ್ತು ಪರಿಸರ ಸಂರಕ್ಷಣೆಯಲ್ಲಿ ಸಹಕಾರವನ್ನು ಉತ್ತೇಜಿಸುವುದು, ಪ್ರಾದೇಶಿಕ ಶಾಂತಿ, ಭದ್ರತೆ ಮತ್ತು ಸ್ಥಿರತೆಯನ್ನು ಕಾಪಾಡುವುದು ಮುಂತಾದ ಧ್ಯೇಯೋದ್ದೇಶಗಳನ್ನೂ ಇದು ಒಳಗೊಂಡಿದೆ.

ದಾವಣಗೆರೆಯಲ್ಲಿ ಅಮೃತ್ -2 ಯೋಜನೆ ಜಾರಿ | ಟಿವಿ ಸ್ಟೇಷನ್ ಕೆರೆ ಸೇರಿ 9 ಕೆರೆಗಳು

ಮಂಡಕ್ಕಿ ನಗರಿಯ 9 ಪಾರ್ಕ್ ಸುಂದರೀಕರಣ

ಜಿಲ್ಲಾ ನೋಟ

ಗಣೇಶ್ ಕಮ್ಮಾಪುರ, ದಾವಣಗೆರೆ

ಕುಡಿಯುವ ನೀರು ಹಾಗೂ ಒಳಚರಂಡಿ ಯೋಜನೆಗಾಗಿ ಮಹಾನಗರ ಪಾಲಿಕೆಯಲ್ಲಿ ಜಾರಿಯಲ್ಲಿದ್ದ ಅಮೃತ್ ಯೋಜನೆಯ ಮುಂದುವರಿದ ಭಾಗ ಅಮೃತ್-2.0 ದಾವಣಗೆರೆಗೆ ದೊರೆತಿದ್ದು, ಎರಡು ಕೆರೆಗಳ ಪುನಶ್ಚೇತನ ಹಾಗೂ ಒಂಬತ್ತು ಪಾರ್ಕ್‌ಗಳ ಸುಂದರೀಕರಣಕ್ಕಾಗಿ ಒಟ್ಟು 14 ಕೋಟಿ ರೂ. ಅನುದಾನ ಬಿಡುಗಡೆಗೊಂಡಿದೆ. ಕೇಂದ್ರ ಪುರಸ್ಕೃತ ಅಮೃತ್ 2.0 ಯೋಜನೆಯ ಟ್ರಾಂಚ್ 3ರಲ್ಲಿ ದೇಶದ ವಿವಿಧ ರಾಜ್ಯದಲ್ಲಿ ಜಲಮೂಲಗಳ ಪುನಶ್ಚೇತನ ಹಾಗೂ ಉದ್ಯಾನವನ ಅಭಿವೃದ್ಧಿ ಕಾಮಗಾರಿಗೆ 2024ರ ನವೆಂಬರ್‌ನಲ್ಲಿ ನಡೆದ ಕೇಂದ್ರದ ಅಪೆಕ್ಸ್ ಸಮಿತಿ ಸಭೆಯಲ್ಲಿ ಅನುಮೋದನೆ ನೀಡಲಾಗಿದ್ದು, ಇದರನ್ವಯ ದಾವಣಗೆರೆಗೆ 15 ಕೋಟಿ ರೂ. ದೊರೆತಿದೆ.

25 ಕೋಟಿ ಪ್ರಸ್ತಾವ

ಕೆರೆಗಳ ಸಮಗ್ರ ಅಭಿವೃದ್ಧಿಗಾಗಿ ಈ ಹಿಂದೆ ದಾವಣಗೆರೆ ಪಾಲಿಕೆ 25 ಕೋಟಿ ವೆಚ್ಚದ ಅಭಿವೃದ್ಧಿ ಕಾಮಗಾರಿಗೆ ಪ್ರಸ್ತಾವ ಕಳುಹಿಸಿತ್ತು. ಆದರೆ, ಕೇಂದ್ರ ಸರಕಾರ ಅಮೃತ್ 2.0 ಯೋಜನೆಯಡಿ 14 ಕೋಟಿಗೆ ಅನುಮೋದನೆ ನೀಡಿದೆ. ಈ ಹಿಂದೆ ದೂಡಾದಿಂದ ಕೆರೆಗಳ ಅಭಿವೃದ್ಧಿ ಮಾಡಲಾಗಿ ತ್ತಾದರೂ ಕೆಲ ತಾಂತ್ರಿಕ ಕಾರಣ, ಅನುದಾನದ ಕೊರತೆಯಿಂದ ಕೆರೆಗಳ ಸಮಗ್ರ ಅಭಿವೃದ್ಧಿಯಾ ಗಿರಲಿಲ್ಲ. ಆದರೆ, ಇದೀಗ ಕೇಂದ್ರ ಸರಕಾರದ ಅನುದಾನದ ಜತೆಗೆ ಪಾಲಿಕೆ ಅನುದಾನದ ಬಳಕೆಯೂ ಆಗುವುದರಿಂದ ಕೆರೆ, ಪಾರ್ಕ್‌ಗಳು ಸಂಪೂರ್ಣವಾಗಿ ಪುನಶ್ಚೇತಗೊಳ್ಳಲಿವೆ.

ಟಿವಿ ಸ್ಟೇಷನ್, ಆವರಗೆರೆ ಕೆರೆ

ದಾವಣಗೆರೆ ನಗರಕ್ಕೆ ಕುಡಿಯುವ ನೀರು ಪೂರೈಸುವ ಟಿ.ವಿ. ಸ್ಟೇಷನ್ ಕೆರೆ ಹಾಗೂ ಆವರೆಗೆರೆ ಕೆರೆಗಳ ಪುನಶ್ಚೇತನಕ್ಕೆ ಸರಕಾರ ಮುಂದಾಗಿದ್ದು, ಅದರಂತೆ ಟಿ.ವಿ. ಸ್ಟೇಷನ್ ಕೆರೆಗೆ 5.50 ಕೋಟಿ ರು.ಜತೆಗೆ ಪಾಲಿಕೆ ಅನುದಾನ 45 ಲಕ್ಷ ರು. ಸಿಗಲಿದೆ. ಜತೆಗೆ ಆವರಗೆರೆ ಕೆರೆಗೆ 4.50 ಕೋಟಿ ರು.ದೊರೆತಿದೆ ಎಂದು ಮಹಾನಗರ ಪಾಲಿಕೆ ಆಯುಕ್ತೆ ಜಿ.ರೇಣುಕಾ ವಿವರಿಸಿದರು.

ಮತ್ತಷ್ಟು ಸ್ಮಾರ್ಟ್

ಈಗಾಗಲೇ ಸ್ಮಾರ್ಟ್‌ಸಿಟಿಯಾಗುತ್ತಿರುವ ದಾವಣಗೆರೆಯಲ್ಲಿ ಕೇಂದ್ರದ ಅಮೃತ್ 2 ಯೋಜನೆಯಡಿ ಪಾಲಿಕೆ ವ್ಯಾಪ್ತಿಯ ಎರಡು ಕೆರೆಗಳು, ಒಂಭತ್ತು ಪಾರ್ಕ್ ಅಭಿವೃದ್ಧಿ ಮಾಡಲಾಗುವುದು. ಈ ಮೂಲಕ ನೀರಿನ ಸಮಸ್ಯೆಗೆ ಶಾಶ್ವತ ಪರಿಹಾರ ಒದಗಿಸಲಾಗುವುದು. ಇದರಿಂದ ದಾವಣಗೆರೆ ಮತ್ತಷ್ಟು ಸ್ಮಾರ್ಟ್ ಆಗುವುದು ನಿಶ್ಚಿತ ಎನುತ್ತಾರೆ ಪಾಲಿಕೆ ಆಯುಕ್ತರು.

ದಾವಣಗೆರೆಯಲ್ಲಿರುವ ಟಿವಿ ಸ್ಟೇಷನ್ ಕೆರೆ.

> **ಯಾವ ಕಾಮಗಾರಿಗೆ ಎಷ್ಟು ಹಣ ಬೇಕೆಂಬ ಬಗ್ಗೆ ರಾಜ್ಯ ಸರಕಾರಕ್ಕೆ ವಿಸ್ತೃತ ಯೋಜನೆ ವರದಿ ತಯಾರಿಸಲು ಕಳುಹಿಸಲಾಗಿದೆ. ಇಷ್ಟರಲ್ಲೆ ಶೀಘ್ರವಾಗಿ ಅನುಮೋದನೆ ದೊರಕಿ, ಟೆಂಡರ್ ಪ್ರಕ್ರಿಯೆಗೆ ಚಾಲನೆ ನೀಡಲಾಗುವುದು.**
>
> **-ಜಿ. ರೇಣುಕಾ,** ಆಯುಕ್ತೆ, ಮಹಾನಗರ ಪಾಲಿಕೆ, ದಾವಣಗೆರೆ.

ದಾವಣಗೆರೆ ಜೀವನಾಡಿ

ದಾವಣಗೆರೆ ನಗರಕ್ಕೆ ಕುಡಿಯುವ ನೀರು ಒದಗಿಸುವ ಜಲಮೂಲಗಳಲ್ಲಿ ಒಂದಾದ ಟಿ.ವಿ. ಸ್ಟೇಷನ್ ಕೆರೆಯ ಸಮಗ್ರ ಅಭಿವೃದ್ಧಿಗೆ ಹಿಂದಿನಿಂದಲೂ ದೂಡಾ ಹಾಗೂ ಪಾಲಿಕೆಯಿಂದ ಯತ್ನಗಳು ನಡೆದವಾದರೂ ಅನುದಾನ, ತಾಂತ್ರಕತೆ ಕಾರಣದಿಂದ ಕೆರೆ ಪುನಶ್ಚೇತನಗೊಂಡಿರಲಿಲ್ಲ. ಕೆರೆಯು 92 ಎಕರೆ ವಿಸ್ತೀರ್ಣವಿದ್ದು, 65 ಟಿಎಂಸಿ ನೀರು ಸಂಗ್ರಹದ ಸಾಮರ್ಥ್ಯ ಹೊಂದಿದೆ. ಕೆರೆಯ ನೀರನ್ನು ಸದ್ಯ ಕುಡಿಯುವ ಉದ್ದೇಶಕ್ಕೆ ಮಾತ್ರ ಬಳಸಲಾಗುತ್ತಿದೆ. ಪಾಲಿಕೆಯ 16 ವಾರ್ಡ್‌ಗಳಿಗೆ ಕುಡಿಯುವ ನೀರನ್ನು ಒದಗಿಸಲಾಗುತ್ತಿದೆ. ಈ ಕೆರೆಗೆ ಭದ್ರಾ ಚಾನಲ್‌ನಿಂದ ನೀರು ಹರಿಸಲಾಗುತ್ತಿದೆ.

ನೀರಿನ ಸಂಗ್ರಹ ಹೆಚ್ಚಳ

ಈ ಅನುದಾನದಲ್ಲಿ ಕೆರೆ ಸುತ್ತಲಿನ ಜಾಗದಲ್ಲಿ ಕಲ್ಲು ಅಳವಡಿಸಿ, ನೀರಿನ ಸಂಗ್ರಹ ಹೆಚ್ಚಿಸುವುದು, ಬಂಡ್ ದುರಸ್ತಿಗೊಳಿಸುವುದು, ಕೆರೆಯ ಇನ್ನೊಂದು ಬದಿಯ ಬಂಡ್ ಬಳಿ ಇರುವ ಗುಂಡಿಯ ದುರಸ್ತಿ, ಕೆರೆಗೆ ನೀರು ಬರುವ ಪೈಪ್‌ನ ಜಾಗದ ಕಾಮಗಾರಿ ಕೈಗೆತ್ತಿಕೊಳ್ಳಲಿದೆ. ಜತೆಗೆ, ಟಿ.ವಿ. ಸ್ಟೇಷನ್ ಕೆರೆಯ ಶುದ್ಧ ನೀರಿನ ಸಂಸ್ಕರಣ ಘಟಕ ಸುಸ್ಥಿರಗೊಳಿಸುವುದು. ನೀರಿನ ಘಟಕದವರೆಗೆ ಕಾಂಕ್ರಿಟ್ ರಸ್ತೆ ನಿರ್ಮಾಣ ಮಾಡಲಾಗುವುದು ಎಂದು ಪಾಲಿಕೆ ಕಾರ್ಯಪಾಲಕ ಎಂಜಿನಿಯರ್ ಎಂ.ಎಚ್. ಉದಯ ಕುಮಾರ್ ಮಾಹಿತಿ ನೀಡಿದರು.

ಆವರಗೆರೆ ಕೆರೆಗೂ ಭಾಗ್ಯ

ಆವರಗೆರೆ ಕೆರೆ ನೀರು ಬಳಕೆಯಿಂದ ದಾವಣಗೆರೆ ಜನತೆಗಿರುವ ಕುಡಿಯುವ ನೀರಿನ ಸಮಸ್ಯೆ ಶಾಶ್ವತವಾಗಿ ಪರಿಹಾರಿಸಬಹುದು. ಆದರೆ, ಕಳೆದ 10 ವರ್ಷಗಳ ಹಿಂದೆ ಒಮ್ಮೆ ಕೆರೆ ಹೂಳೆತ್ತಿದ್ದು ಬಿಟ್ಟರೆ ಮತ್ತೆ ಕೆರೆ ಪುನಶ್ಚೇತನಕ್ಕೆ ಮುಂದಾಗಿರಲಿಲ್ಲ. ಆದರೆ, ಇದೀಗ ಪಾಲಿಕೆ ವ್ಯಾಪ್ತಿಯ ಆವರಗೆರೆ ಕೆರೆಗೆ ಅಭಿವೃದ್ಧಿ ಭಾಗ್ಯ ಒದಗಿಬಂದಿದ್ದು, ಮುಂದಿನ ದಿನಗಳಲ್ಲಿ ನಗರದ ಜನರಿಗೆ ಕುಡಿಯುವ ನೀರಿನ ಸಮಸ್ಯೆಗೆ ಶಾಶ್ವತ ಪರಿಹಾರ ದೊರೆಯಲಿದೆ. ಕೇಂದ್ರದ ಅಮೃತ್ 2 ಯೋಜನೆಯಡಿ ರೂ. 4.50 ಕೋಟಿ ವೆಚ್ಚದಲ್ಲಿ ಅಭಿವೃದ್ಧಿ ನಡೆಯಲಿದ್ದು, ಕೆರೆ ಏರಿ ದುರಸ್ತಿ, ಗೋಡೆ ಮರು ನಿರ್ಮಾಣ, ಟ್ಯೂಬ್‌ಗಳ ದುರಸ್ತಿ ಜತೆಗೆ ಕೊಳಚೆ ನೀರು ಸೇರದಂತೆ ಅನುದಾನದ ಸಮರ್ಪಕ ಬಳಕೆಗೆ ಮಹಾಪಾಲಿಕೆ ಮುಂದಾಗಿದೆ.

ಪಂಪ್‌ಹೌಸ್ ಗುರಿ

ದಾವಣಗೆರೆಯ ಆವರಗೆರೆ ಕೆರೆಯು 98 ಎಕರೆ 4 ಗುಂಟೆ ವಿಸ್ತೀರ್ಣ ಹೊಂದಿದೆ. ನೀರಾವರಿ ಇಲಾಖೆ ವ್ಯಾಪ್ತಿಗೆ ಒಳಪಟ್ಟಿದೆ. ಮಳೆ ನೀರು ಬಂದಾಗ ತುಂಬಿಕೊಳ್ಳುತ್ತದೆ. ಮುಂದೆ ಈ ಕೆರೆಗೆ ರಾಜನಹಳ್ಳಿಯಿಂದ ನೀರು ಹರಿಸುವ ಮತ್ತು ಪಂಪ್‌ಹೌಸ್ ನಿರ್ಮಾಣ ಮಾಡುವ ಗುರಿ ಇದೆ.

ಯಾವ್ಯಾವ ಪಾರ್ಕ್ :

ದಾವಣಗೆರೆಯ 9 ಉದ್ಯಾನವನಗಳ ಅಭಿವೃದ್ಧಿಗೆ ಅಮೃತ್ 2.0 ಯೋಜನೆಯಡಿ ರೂ. 4. ಕೋಟಿ ಜತೆಗೆ ಪಾಲಿಕೆ ಅನುದಾನದಲ್ಲಿ ರೂ. 54 ಲಕ್ಷ ಅನುದಾನದಲ್ಲಿ ಅಭಿವೃದ್ಧಿ ಮಾಡಲಾಗುತ್ತಿದ್ದು, ದಾವಣಗೆರೆಯ ವಾರ್ಡ್ ನಂ. 44ರ ಮಹಾಲಕ್ಷ್ಮಿ ಲೇಔಟ್‌ನ 2 ಪಾರ್ಕ್‌ಗಳು, 42ರ ಡಾಲರ್ ಕಾಲೋನಿಯ 2 ಪಾರ್ಕ್, 33ರ ಲಕ್ಷ್ಮಿ ಲೇಔಟ್ 1 ಪಾರ್ಕ್, 32ರ ಭೂಮಿಕಾ ನಗರದ 1 ಪಾರ್ಕ್, ವಾರ್ಡ್ 24ರ ವಿಶ್ವೇಶ್ವರಯ್ಯ ಪಾರ್ಕ್, 40ರ ಸ್ವಾಮಿ ವಿವೇಕಾನಂದ ಬಡಾವಣೆ ಹಾಗೂ ವಾರ್ಡ್ 28ರ ಶಿವರಾಮ ಕಾರಂತ್ ಪಾರ್ಕ್‌ಗಳಿಗೆ ಅಭಿವೃದ್ಧಿ ಭಾಗ್ಯ ಒದಗಿ ಬಂದಿದೆ.

ಜನಸ್ನೇಹಿ ಪಾರ್ಕ್

ಅಮೃತ್ 2 ಯೋಜನೆಯಡಿ ಪಾಲಿಕೆ ವ್ಯಾಪ್ತಿಯಲ್ಲಿನ ಏಳು ವಾರ್ಡ್‌ಗಳಲ್ಲಿನ 9 ಉದ್ಯಾನ ಅಭಿವೃದ್ಧಿ ಮಾಡಲಾಗುತ್ತಿದ್ದು, ಇದರಲ್ಲಿ ವಾಕಿಂಗ್ ಪಾಥ್, ಮಕ್ಕಳ ಆಟಿಕೆ ಪರಿಕರಗಳು, ಉದ್ಯಾನವನ ಸುತ್ತ ತಂತಿ ಬೇಲಿ, ಗಿಡ ನೆಡುವುದು ಜತೆಗೆ ನೀರು ಹರಿಸುವುದು, ಮಳೆ ನೀರು ಇಂಗು ಗುಂಡಿ ಹಾಗೂ ಜಿಮ್ ಪರಿಕರ ಅಳವಡಿಸಲಾಗುತ್ತದೆ.

ಮಹಾನಗರಪಾಲಿಕೆ-ಬಿಪಿಸಿಎಲ್ ಸಹಯೋಗ | ತ್ಯಾಜ್ಯದಿಂದ ಬಯೋಗ್ಯಾಸ್ ಉತ್ಪಾದನೆ

ಬಯೋಗ್ಯಾಸ್ ಯೋಜನೆ, ಕಸದ ಸಮಸ್ಯೆಗೆ ಮುಕ್ತಿ

ಜಿಲ್ಲಾ ನೋಟ

ಕೆ.ಜೆ.ಲೋಕೇಶ್ ಬಾಬು, ಮೈಸೂರು

ತ್ಯಾಜ್ಯ ಮರುಬಳಕೆ ಮೂಲಕ ಕಂಪ್ರೆಸ್ಡ್ ಬಯೋಗ್ಯಾಸ್ ತಯಾರಿಸುವ ಯೋಜನೆಗೆ ಮುಂದಾಗುವ ಮೂಲಕ ತ್ಯಾಜ್ಯ ಸಂಗ್ರಹಣೆ, ವಿಲೇವಾರಿ ಹಾಗೂ ಸಂಸ್ಕರಣೆ ವಿಚಾರದಲ್ಲಿ ಇದ್ದ ಸಮಸ್ಯೆ ನಿವಾರಣೆಗೆ ಮೈಸೂರು ನಗರಪಾಲಿಕೆ - ಬಿಪಿಸಿಎಲ್ ಮುಂದಡಿ ಇಟ್ಟಿವೆ. ಸಾಂಸ್ಕೃತಿಕ ನಗರಿ ಮೈಸೂರು ಸ್ವಚ್ಛ ಸರ್ವೇಕ್ಷಣ ಯಲ್ಲಿ ಪ್ರತಿ ವರ್ಷ ಹಿಂದುಳಿಯಲು ನಗರದಲ್ಲಿ ಪ್ರತಿನಿತ್ಯ ಮನೆ ಮನೆಗಳಿಂದ ಸಂಗ್ರಹಿಸಲಾಗುವ ಕಸದ ಸಮಸ್ಯೆಗೆ ಉತ್ತರ ಕಂಡುಕೊಳ್ಳಲು ನಗರ ಪಾಲಿಕೆ ಹೊಸ ಯೋಜನೆ ರೂಪಿಸಿದ್ದು, ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ (ಬಿಪಿಸಿಎಲ್) ಸಹ ಯೋಗದಲ್ಲಿ ನಗರದ ಸೀವೇಜ್ ಫಾರ್ಮ್‌ನಲ್ಲಿ ಬಯೋಗ್ಯಾಸ್ ಘಟಕ ನಿರ್ಮಾಣಕ್ಕೆ ನಿರ್ಧರಿಸಲಾಗಿದೆ.

ಹಸಿ ತ್ಯಾಜ್ಯದಿಂದ ಬಯೋಗ್ಯಾಸ್

ಪ್ರತಿನಿತ್ಯ 150 ಟನ್ ತ್ಯಾಜ್ಯ ಬಳಕೆ ಮಾಡಿ ಬಯೋಗ್ಯಾಸ್ ತಯಾರಿಸುವ ಗುರಿಯೊಂದಿಗೆ ನಗರ ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್ ಅವರೊಂದಿಗೆ ಬಿಪಿಸಿಎಲ್ ಅಧಿಕಾರಿಗಳು ಒಡಂಬಡಿಕೆ ಮಾಡಿಕೊಂಡಿದ್ದಾರೆ. ಈ ಮೂಲಕ ಮನೆಗಳಿಂದ ಸಂಗ್ರಹವಾಗುವ ಹಸಿ ತ್ಯಾಜ್ಯವನ್ನು ಶುದ್ಧ, ಸುಸ್ಥಿರ ಇಂಧನವಾಗಿ ಪರಿವರ್ತಿಸುವುದು ಯೋಜನೆಯ ಭಾಗವಾಗಿದೆ.

ದಿನಕ್ಕೆ 600 ಟನ್ ತ್ಯಾಜ್ಯ

ಮೈಸೂರು ನಗರದಿಂದ ಪ್ರತಿದಿನ 600 ಟನ್ ತ್ಯಾಜ್ಯ ಉತ್ಪಾದನೆಯಾಗುತ್ತಿದ್ದು, ಸದರಿ ತ್ಯಾಜ್ಯವನ್ನು ನಗರದ ಸೀವೇಜ್‌ಫಾರ್ಮ್, ಕೆಸೆರೆ ಘಟಕದಲ್ಲಿ ಸಂಸ್ಕರಣೆ ಮಾಡಿ ಗೊಬ್ಬರವಾಗಿ ಪರಿವರ್ತಿಸುವ ಘಟಕ ಕಾರ್ಯನಿರ್ವಹಿಸುತ್ತಿದೆ. ಬಯೋಗ್ಯಾಸ್ ಘಟಕ ಪ್ರಾರಂಭವಾದರೆ ತ್ಯಾಜ್ಯ ಸಂಸ್ಕರಣೆ ಯ ಸಮಸ್ಯೆಗೆ ಮತ್ತಷ್ಟು ಪರಿಹಾರ ದೊರೆಯುವ ಸಾಧ್ಯತೆ ಇದೆ ಎಂಬುದು ಅಧಿಕಾರಿಗಳ ಲೆಕ್ಕಾಚಾರ. ಮೈಸೂರು ನಗರಪಾಲಿಕೆಯ ಈ ಉದ್ದೇಶಿತ ಯೋಜನೆಗೂ ಮುನ್ನವೇ ಬಿಪಿಸಿಎಲ್ ಈಗಾಗಲೇ ಕೊಚ್ಚಿ, ತಿರುವನಂತಪುರಂ, ಕೋಝಿಕೋಡ್‌ನಲ್ಲಿ ಯಶಸ್ವಿಯಾಗಿ ಜಾರಿಗೊಳಿಸಿದೆ. ಅಂತೆಯೇ ಈ ಯೋಜನೆ ಕಾಮಗಾರಿ ಎರಡು ವರ್ಷದೊಳಗೆ ಪೂರ್ಣಗೊಳ್ಳಲಿದೆ.

ಸ್ವಚ್ಛತೆಯಲ್ಲಿ 27ನೇ ಸ್ಥಾನ:

